ಕಲಾ

ವೈಚಾರಿಕ
ಸಾಹಿತ್ಯ-ಚಿತ್ರ
ಸಂಪುಟ 5

ಸುವರ್ಣ ಕಲಾಸಂಭ್ರಮ 1964 2014 50 ART KAR

ಕರ್ನಾಟಕ ಲಲಿತಕಲಾ ಅಕಾಡೆಮಿ

ಕಲಾ ಸಾಹಿತ್ಯ ಮತ್ತು ವಿಮರ್ಶೆ

ಜಗತ್ಪ್ರಸಿದ್ಧ ಬ್ರಿಟೀಷ್ ಶಿಲ್ಪ ಕಲಾವಿದ ಹೆನ್ರಿ ಮೋರ್ ಅವರ ಪರಿಸರ ಶಿಲ್ಪ.



ಕಲಾ

ವೈಚಾರಿಕ
ಸಾಹಿತ್ಯ-ಚಿತ್ರ
ಸಂಪುಟ **5**

ಕಲಾ ಸಾಹಿತ್ಯ ಮತ್ತು ವಿಮರ್ಶೆ

ಪ್ರಧಾನ ಸಂಪಾದಕರು

ಡಾ. ಎಂ.ಎಸ್. ಮೂರ್ತಿ

ಸಂಪಾದಕರು

ರಾಜು ಮಳವಳ್ಳಿ

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಎರಡನೇ ಮಹಡಿ
ಜೆ.ಸಿ.ರಸ್ತೆ, ಬೆಂಗಳೂರು-೫೬೦ ೦೦೨
ದೂರವಾಣಿ:೦೮೦-೨೨೪೮೦೨೯೭
ಈ-ಮೇಲ್: kla.karnataka@gmail.com
www.lalitkalakarnataka.org/karnataka lalithakala academy

ಕಲಾ

ವೈಚಾರಿಕ ಸಾಹಿತ್ಯ-ಚಿತ್ರ ಸಂಪುಟ 5

ಕಲಾ ಸಾಹಿತ್ಯ ಮತ್ತು ವಿಮರ್ಶೆ

ಸಂಚಿಕೆಯ ಸಂಪಾದನೆ: **ರಾಜು ಮಳವಳ್ಳಿ**
ಪ್ರಧಾನ ಸಂಪಾದಕರು: **ಡಾ.ಎಂ.ಎಸ್.ಮೂರ್ತಿ**

ಮೊದಲ ಮುದ್ರಣ: ಫೆಬ್ರವರಿ-2017
ಪುಟಗಳು : 84 + 4
ಬೆಲೆ : ರೂ. 150/-
ಪ್ರತಿಗಳು: 1,000
ಮುಖಪುಟ ಚಿತ್ರಕೃತಿ ಕೃಪೆ: ಹೆನ್ರಿ ಮೋರ್

ಬಳಸಿದ ಕಾಗದ : 80 ಜಿಎಸ್‌ಎಂ ಎನ್‌ಎಸ್ ಬುಕ್ ಪ್ರಿಂಟ್

ಪ್ರಕಾಶಕರು
ಇಂದ್ರಮ್ಮ ಹೆಚ್.ವಿ.
ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಎರಡನೇ ಮಹಡಿ
ಜೆ.ಸಿ. ರಸ್ತೆ, ಬೆಂಗಳೂರು-560 002
ದೂರವಾಣಿ : 080-22480297
ಈ-ಮೇಲ್ : kla.karnataka@gmail.com
www.lalitkalakarnataka.org /
karnataka lalitha kala academy

ಪ್ರಕಟಣಾ ಸಮಿತಿ
ಶ್ರೀ ಬಾಗೂರು ಮಾರ್ಕಂಡೇಯ
ಶ್ರೀ ಬಿ.ಎಲ್.ಚವ್ಹಾಣ್
ಶ್ರೀ ಕೆ.ವಿ.ಸುಬ್ರಮಣ್ಯಂ
ಶ್ರೀ ರಾಜು ಮಳವಳ್ಳಿ

ಮುದ್ರಕರು
ರೀಗಲ್ ಪ್ರಿಂಟ್ ಸರ್ವೀಸ್
ಬೆಂಗಳೂರು-560 026
ದೂರವಾಣಿ : 99643 51655

KALA CHITRA SAMPUTA 5
Edited by : **Raju Malavalli**
Chief Editor : **Dr.M.S.Murthy**

Published by
Indramma.H.V
Registrar
Karnataka Lalitha Kala Academy,
2nd Floor, Kannada Bhavana,
J.C.Road, Bengaluru-560 002,
Ph:080-22480297
Email : kla.karnataka@gmail.com
www.lalitkalakarnataka.org/
karnataka lalithakala academy

First Edition : 2017

Pages: 84 + 4
Price : **Rs. 150/-**
Used Paper : 80 gsm NS Book Print
Copies : 1000

Printed at
Reegal Print Service
Bengaluru-560 026
Ph. 9964351655

ಪ್ರಧಾನ ಸಂಪಾದಕರ ನುಡಿ

ಕರ್ನಾಟಕದ ದೃಶ್ಯಕಲಾ ಚಿಂತನೆಯನ್ನು ಬೆಳೆಸುವಲ್ಲಿ ಕನ್ನಡ ಕಲಾ ಸಾಹಿತ್ಯದ ಕೊಡುಗೆ ಏನೇನೂ ಸಾಲದು. ಈ ದೃಷ್ಟಿಯಿಂದ ನಮ್ಮ ಅಕಾಡೆಮಿಯು ಪ್ರಪ್ರಥಮವಾಗಿ ಕಲಾ ಚಿಂತನೆಯನ್ನೊಳಗೊಂಡ ವೈಚಾರಿಕ ಮತ್ತು ಪ್ರಗತಿಪರ ನಿಲುವಿನ ಕಲಾ ಚಿಂತನೆಗೆ ಪ್ರಾಶಸ್ತ್ಯ ನೀಡಿದೆ.

ಈಗಾಗಲೇ ಯಶಸ್ವಿಯಾಗಿ ಆಯೋಜಿಸಿದ ವಿಚಾರ ಸಂಕಿರಣಗಳು ಮತ್ತು ಕಮ್ಮಟಗಳೊಂದಿಗೆ ಈಗ ಬೆಂಗಳೂರಿನಲ್ಲಿ ನಡೆದ **'ಕಲಾ ಸಾಹಿತ್ಯ ಮತ್ತು ವಿಮರ್ಶೆ'** ವಿಚಾರ ಸಂಕಿರಣ ಮಹತ್ವವಾದುದು. ಅಲ್ಲಿ ಪ್ರಬಂಧ ಮಂಡಿಸಿದ ಆರು ಕಲಾ ವಿದ್ವಾಂಸರು, ಕಲಾವಿದರು ಮತ್ತು ಕಲಾ ಬರಹಗಾರರೆಲ್ಲರ ಮಾತುಗಳು ಈ ಕೃತಿಯಲ್ಲಿ ಯಥಾವತ್ತಾಗಿ ದಾಖಲಾಗಿವೆ. ಬಹುಶಃ ನಾಡಿನ ಇತರ ಕಲಾ ಶಿಕ್ಷಕರು, ಕಲಾವಿದರು ಮತ್ತು ಕಲಾವಿದ್ವಾಂಸರು ಇತ್ಯಾದಿ ಪ್ರತಿಯೊಬ್ಬ ಕಲೆಯ ಸಂವೇದನಾಶೀಲನಿಗೆ ಈ ಎಲ್ಲಾ ವಿಚಾರಗಳ ವಾಸ್ತವತೆ ತಲುಪಿಸುವ ಸಾಕ್ಷಿಪ್ರಜ್ಞೆ ಮಾತ್ರ ನಮ್ಮದಾಗಿದೆ.

ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆ ದೃಷ್ಟಿಯಿಂದ ಕನ್ನಡದ ಕಲಾ ಸಾಹಿತ್ಯ ಕಲಾವಿಮರ್ಶೆ, ಕಲೆಯ ಪರಿಭಾಷೆ, ಕಲೆಯ ತಾತ್ವಿಕ ನಿಲುವುಗಳು ಕೂಡಿದಂತೆ ಯಾವುದೇ ಗಂಭೀರ ಚರ್ಚೆಯನ್ನು, ಪ್ರಶ್ನೆಗಳನ್ನು ಇದುವರೆಗೂ ಎತ್ತದೆ ಚರ್ವಿತ ಚರ್ವಣ ನಿರೂಪಣಾ ಸಾಹಿತ್ಯದಲ್ಲೇ ತನ್ನ ಕ್ಷೇತ್ರವನ್ನು ಸೀಮಿತಗೊಳಿಸಿಕೊಂಡಿದೆ. ಇದು ಕಲಾಚರಿತ್ರೆಯ ದೃಷ್ಟಿಯಿಂದ ಉತ್ತಮವಾದ ಬೆಳವಣಿಗೆ ಅಲ್ಲ. ದೃಶ್ಯಕಲೆಯ ಆಕಾರ, ಬಣ್ಣ, ಪ್ರತಿಮೆ, ರೂಪಕ ಇತ್ಯಾದಿಗಳು ದೃಶ್ಯದ ಪರಿಭಾಷೆಯಲ್ಲಿರುವುದರಿಂದ ಮತ್ತು ಅಕ್ಷರವನ್ನು ಅವಲಂಬಿಸಿಲ್ಲದೆ ಇರುವುದರಿಂದ ಈ ಕುರಿತು ಈಗಲಾದರೂ ಗಂಭೀರವಾಗಿ ಕೆಲಸ ಮಾಡಬೇಕಿದೆ.

ಕಲೆಯ ಶೈಕ್ಷಣಿಕ ಕ್ಷೇತ್ರ, ಸಾಂಸ್ಕೃತಿಕ ಕ್ಷೇತ್ರ ಮತ್ತು ಸಮಾಜದ ದೃಷ್ಟಿಯಿಂದ ಅಕ್ಷರದ ಮುಖೇನ ದೃಶ್ಯಕಲೆಯ ಮೂಲ ತಾತ್ವಿಕ ನೆಲೆಗಳನ್ನು, ಒಳನೋಟಗಳನ್ನು ಕನಿಷ್ಟ ಸರಳ ಭಾಷೆಯಲ್ಲಾದರೂ ನಿರೂಪಿಸಬೇಕಾದಂತಹ ಅಗತ್ಯವಿದೆ. ಆ ಮೂಲಕ ದೃಶ್ಯಕಲೆಯ ಶಿಕ್ಷಣದ ಮೌಲ್ಯ, ಕಲಾವಿದನ

ಬದುಕು-ಕೃತಿಗಳ ಮೌಲ್ಯಗಳ ಒಳನೋಟಗಳು ಇನ್ನಷ್ಟು ಸ್ಪಷ್ಟವಾಗಿ ಸಮಾಜದ ಎಲ್ಲ ಸ್ತರದ ಜನರಲ್ಲೂ ದೃಶ್ಯಕಲಾ ಸಮುದಾಯದ ಬಗ್ಗೆ ಅರಿವು, ಪ್ರೀತಿ, ವಿಶ್ವಾಸಗಳು ಹೆಚ್ಚಿಸಲು ಸಾಧ್ಯವಾಗಬಹುದು.

ಈ ಎಲ್ಲಾ ದೃಷ್ಟಿ, ಆಶಯದಿಂದ ನಮ್ಮ ಈ ಕೆಲಸಗಳು ಈ ಕಾಲಘಟ್ಟದಲ್ಲಿ ನಿಮ್ಮ ಕಣ್ಮುಂದೆ ನಡೆದಿವೆ. ಇಂತಹ ಒಂದು ಜವಾಬ್ದಾರಿಯುತ ಕೆಲಸವನ್ನು ಕಲಾ ಸಮುದಾಯದ ಪರವಾಗಿ ಪ್ರಾಮಾಣಿಕವಾಗಿ ಮಾಡಿದ್ದೇವೆ. ಈ ಕಾರ್ಯಕ್ರಮಗಳ ಯಶಸ್ಸು ಕೈಜೋಡಿಸಿದ ನಿಮ್ಮೆಲ್ಲರದ್ದು. ನಾವು ನಿಮಿತ್ತ ಮಾತ್ರ.

ಡಾ. ಎಂ.ಎಸ್.ಮೂರ್ತಿ
ಅಧ್ಯಕ್ಷರು
ಕರ್ನಾಟಕ ಲಲಿತಕಲಾ ಅಕಾಡೆಮಿ

ಸಂಪಾದಕರ ಮಾತು...

ವಿಮರ್ಶೆಯ ಒಳಹೂರಣ

ವಿಮರ್ಶೆ. ಈ ಪದದ ಅರ್ಥ-ವ್ಯಾಪ್ತಿ ಬಲು ದೊಡ್ಡದು.ನಿರ್ದಿಷ್ಟ ವಿಷಯ, ವಸ್ತು, ವಿದ್ಯಮಾನ, ಕಲೆ, ಕೃತಿ ಮತ್ತು ಸೃಜನಾತ್ಮಕ ಕಾರ್ಯಗಳ ಕುರಿತು ನಿಷ್ಪಕ್ಷಪಾತವಾದ ಅಭಿಪ್ರಾಯ ವ್ಯಕ್ತಪಡಿಸುವುದು ವಿಮರ್ಶೆಯ ಸ್ವರೂಪ.

ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಯ ವಿಚಾರದಲ್ಲಿ ವಿಮರ್ಶೆಗೆ ಬಲು ಪ್ರಾಮುಖ್ಯತೆ.ಒಂದು ಸೃಜನಾತ್ಮಕ ಕೃತಿಯ ಆಳ, ಅಗಲ, ಒಳನೋಟ, ಶ್ರೇಷ್ಠತೆ, ನ್ಯೂನ್ಯತೆಗಳನ್ನು ವಸ್ತುನಿಷ್ಠ ವಿಮರ್ಶೆ ತೆರೆದಿಡಬೇಕು.ಆಗಷ್ಟೇ ಕೃತಿ ಮತ್ತು ಕೃತಿಕಾರ ಬೆಳಗಲು ಸಾಧ್ಯ.ಅಂತಹ ಮಹೋನ್ನತ ಉದ್ದೇಶವನ್ನು ಆಂತರ್ಯದಲ್ಲಿಟ್ಟುಕೊಂಡು ಆರಂಭಗೊಂಡ ವಿಮರ್ಶೆ ಕಾಲದ ಜೊತೆಗೆ ಬದಲಾವಣೆಗಳಿಗೆ ಮುಖಾಮುಖಿಯಾಗಿದೆ.ವಸ್ತುನಿಷ್ಠತೆಯು ಹಿಂಬದಿಗೆ ಸರಿದು ಒಳ ಉದ್ದೇಶದ ವಿಮರ್ಶೆಗಳು ಹೆಚ್ಚಾಗುತ್ತಿವೆ.

ಆಧುನಿಕ ವಿಮರ್ಶೆಗಳು ಕಲೆ ಮತ್ತು ಕಲಾವಿದನನ್ನು ಬೆಳಗುವ ಬದಲು ಕಮರಿಸುವ ಕೃತ್ಯದಲ್ಲಿ ತೊಡಗಿವೆಯೇನೋ ಎಂಬಂತಹ ಅನುಮಾನಗಳು ದಟ್ಟವಾಗಿವೆ. ವಿಮರ್ಶೆಯ ಪವಿತ್ರ ಕಾರ್ಯದಲ್ಲೂ ಗುಂಪುಗಾರಿಕೆ ನುಸುಳಿದಂತಿದೆ.ಒಂದು ವಲಯದ ಕಲಾವಿದರನ್ನು ವಿಮರ್ಶೆಯ ನೆಪದಲ್ಲಿ ಹೊಗಳಿ ಅಟ್ಟಕ್ಕೇರಿಸಿ ಆತನೇ ಶ್ರೇಷ್ಠ ಎಂಬಂತೆ ಬಿಂಬಿಸಲಾಗುತ್ತಿದೆ. ಅಂತೆಯೇ ಕೆಲ ವಲಯದ ಕಲಾವಿದರ ಪ್ರತಿಭೆ ಮತ್ತು ಕಲಾಕೃತಿ ಉನ್ನತಮಟ್ಟದಲ್ಲಿದ್ದರೂ ಆತನನ್ನು ಅನಗತ್ಯ ಮತ್ತು ಅತಾರ್ಕಿಕ ಕಟುವಿಮರ್ಶೆಗೆ ಒಳಪಡಿಸಿ ಆತನ ಸೃಜನಶೀಲ ಅಭಿವ್ಯಕ್ತಿಯನ್ನು ಹೀಗಳೆಯಲಾಗುತ್ತಿದೆ.ಮತ, ಧರ್ಮ, ಜಾತಿ, ಪಂಥಗಳಾಧಾರಿತ-ಪ್ರಭಾವಿತ-ಪಕ್ಷಪಾತದ ಸವಿಮರ್ಶೆಗಳು ಕಲೆ-ಕಲಾವಿದನ ಬೆಳವಣಿಗೆಗೆ ಮಹಾ ತೊಡಕಾಗಿ ಪರಿಣಮಿಸಿವೆ. ಪ್ರಾಂಜಲ ಮನಸ್ಸಿನ, ತೆರೆದ ಕಣ್ಣಿನ ವಿಮರ್ಶಕರು ಬಹಳ ವಿರಳವಾಗುತ್ತಿರುವುದು ದುರಂತ.

ಕಲೆಯ ಸರ್ವ ಪ್ರಕಾರಗಳಲ್ಲಿ ವಿಮರ್ಶೆ ಹಾದಿತಪ್ಪುತ್ತಿದ್ದು ದೃಶ್ಯಕಲಾ ವಿಮರ್ಶೆಯೂ ಇದಕ್ಕೆ ಹೊರತಲ್ಲ. ದೃಶ್ಯಕಲೆಯಲ್ಲಿ ವಿಮರ್ಶೆಯ ಸ್ಥಿತಿಗತಿ,

ವಿಮರ್ಶೆ ಸಾಗಿ ಬಂದ ಹಾದಿ, ವಿಮರ್ಶೆಯ ರೂಪುರೇಷೆ, ಸ್ವರೂಪ, ವಿಮರ್ಶೆಯಿಂದ ದೃಶ್ಯಕಲೆಗೆ ಆಗುತ್ತಿರುವ ಲಾಭ ಮುಂತಾದ ವಿಷಯಗಳು ಚರ್ಚೆಗೆ ಅರ್ಹವಾದವು. ಕಲಾ ಸಾಹಿತ್ಯ ವಿಮರ್ಶೆಯ ಸುತ್ತಮುತ್ತ ಆವರಿಸಿಕೊಂಡಿರುವ ಹಲವು ಸಂಗತಿಗಳನ್ನು ಒಂದೆಡೆ ಕುಳಿತು ಚರ್ಚೆ ನಡೆಸುವ ಪ್ರಯತ್ನ ನಡೆದದ್ದೇ ಬಹಳ ಅಪರೂಪ. ಅಂತಹ ಪ್ರಯತ್ನವನ್ನು ಕರ್ನಾಟಕ ಲಲಿತಕಲಾ ಅಕಾಡೆಮಿ 'ಆಗು' ಮಾಡಿದ್ದು ವಿಶೇಷ.

ಬೆಂಗಳೂರಿನ ನಯನ ಸಭಾಂಗಣದಲ್ಲಿ 2016ರ ಆಗಸ್ಟ್‌ನಲ್ಲಿ ಜರುಗಿದ **'ಕಲಾ ಸಾಹಿತ್ಯ ಮತ್ತು ವಿಮರ್ಶೆ'** ಕುರಿತ ಎರಡು ದಿನಗಳ ವಿಚಾರಸಂಕಿರಣದಲ್ಲಿ ಹೊರಹೊಮ್ಮಿದ ವಿಚಾರಗಳು ಹತ್ತಾರು. ಮನಮಂಥನ ಅಪಾರ. ದೃಶ್ಯಕಲಾ ಸಾಹಿತ್ಯದ ಹಲವು ಮಜಲುಗಳನ್ನು ತೆರೆದಿಟ್ಟ, ವಿಮರ್ಶೆಯ ಆಕಾರ-ವಿಕಾರಗಳನ್ನು ಚರ್ಚೆಗೊಳಪಡಿಸಿದ ಈ ವಿಚಾರಸಂಕಿರಣದಲ್ಲಿ ಕಲಾತಜ್ಞರು ಮಂಡಿಸಿದ ವಿಚಾರಧಾರೆಗಳು, ಎತ್ತಿದ ಪ್ರಶ್ನೆಗಳೆಲ್ಲವನ್ನು ದೃಶ್ಯಕಲಾ ಸಮುದಾಯಕ್ಕೆ ದಾಟಿಸುವ ಪ್ರಯತ್ನವಾಗಿ, ಆ ಪ್ರಬಂಧಗಳ ಸಂಕಲನವಾಗಿ **'ಕಲಾ ವೈಚಾರಿಕ ಸಾಹಿತ್ಯ ಚಿತ್ರ ಸಂಪುಟ-5'** ಹೊರಬಂದಿದೆ.

ವಿಷಯತಜ್ಞರ ಪ್ರಬಂಧಗಳು, ವಿಚಾರಸಂಕಿರಣದ ಭಾವಚಿತ್ರಗಳು ಮತ್ತು ಆಹ್ವಾನಪತ್ರಿಕೆಗಳೆಲ್ಲವೂ ಈ ಸಂಪುಟದಲ್ಲಿದ್ದು ಓದುಗರಿಗೆ ವಿಚಾರಸಂಕಿರಣದ ಸಮಗ್ರ ಚಿತ್ರಣವನ್ನು ನೀಡಲಿವೆ. ಆ ಕಾರ್ಯವನ್ನು ಸಂಪಾದಕನಾಗಿ ನಾನು ಅತ್ಯಂತ ಸಂತಸದಿಂದ ನಿರ್ವಹಿಸಲು ಅನುವು ಮಾಡಿಕೊಟ್ಟ, ಅಡಿಗಡಿಗೂ ಸಹಕಾರ ನೀಡಿದ ಅಕಾಡೆಮಿಯ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ರಿಜಿಸ್ಟ್ರಾರ್ ಹೆಚ್.ವಿ.ಇಂದ್ರಮ್ಮ ಮತ್ತು ಸಿಬ್ಬಂದಿ ವರ್ಗಕ್ಕೆ ನನ್ನ ನೆನಕೆಗಳು ಸಲ್ಲುತ್ತವೆ.

ಕರ್ನಾಟಕ ಲಲಿತಕಲಾ ಅಕಾಡೆಮಿ ಸುವರ್ಣ ಸಂಭ್ರಮದಲ್ಲಿರುವಾಗ ಹೊರಬಂದಿರುವ ಈ ಸಂಪುಟ ಕಲಾವಿದ್ಯಾರ್ಥಿಗಳು, ಅಧ್ಯಯನಕಾರರ ಪಾಲಿಗೆ ಮಾಹಿತಿಪೂರ್ಣ ಕೃತಿಯೆನಿಸಿದರೆ ಅಕಾಡೆಮಿಯ ಶ್ರಮ ಸಾರ್ಥಕವಾಗುತ್ತದೆ. ಅಂತಹ ಸದ್ಭಾವವನ್ನು ಈ ಕೃತಿ ಉಂಟು ಮಾಡುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂಬ ತುಂಬು ವಿಶ್ವಾಸ ನನ್ನದು.

ರಾಜು ಮಳವಳ್ಳಿ
ಸಂಪಾದಕರು

ಪರಿವಿಡಿ

ದೃಶ್ಯ ಕಲಾ ಸಾಹಿತ್ಯ ವಿಮರ್ಶೆ ಮತ್ತು ಇತಿಹಾಸ

♦ ಕೆ.ವಿ. ಸುಬ್ರಹ್ಮಣ್ಯಂ

"In order to understand the works or art that we are asked to look at, it, will not do to explain them in the terms of our own psychology and our aesthetics; to do so would be a pathetic fallacy. We shall not have understood these arts until we can think about them as their authors did."

Ananda K. Coomaraswamy,
in 'Why Exhibit Works or Art', p. 16.

"You expect me to tell you; what is art? If I knew, I would keep my knowledge to myself."

Pablo Picasso, 1986.

ಇ.ಹೆಚ್. ಗ್ರೊಂಬ್ರಿಚ್ ಹೇಳಿರುವಂತೆ "ಕಲಾ ಇತಿಹಾಸದಲ್ಲಿ ಕಲೆ ಎಂಬುದು ಇಲ್ಲ; ಕಲಾವಿದರೇ ತುಂಬಿಕೊಂಡಿದ್ದಾರೆ" ಎಂಬ ಮಾತು ಗಣನೀಯ: ಕಲಾವಿದರಿಲ್ಲದೆ ಕಲೆಯು ಹೇಗೆ ಸೃಷ್ಟಿಯಾದೀತು? ಅವರಿಂದಲೇ ಇತಿಹಾಸ ಮತ್ತು ವಿಮರ್ಶೆ ಎಲ್ಲವೂ.

* ಕಲಾವಿದರಿಲ್ಲದೆ ಕಲೆಯೂ ಇಲ್ಲ, ಕಲೆ ಇಲ್ಲದೆ ವಿಮರ್ಶೆಯೂ. ಇತಿಹಾಸವೂ ಇಲ್ಲ.

ಇಂದು ಕಲೆಯ ಬರಹಗಾರರು ಬರೆಯಬೇಕಾದುದನ್ನು ಬರೆಯದ, ಬರೆಸದ, ಒಪ್ಪಿಕೊಂಡದ್ದನ್ನೂ ಬರೆಯದೆ ಸತಾಯಿಸಿದ ರಾಜಕಾರಣದ ಸಂದರ್ಭದಲ್ಲಿ ನಾವಿದ್ದೇವೆ. ಆದರೆ ನಿಜವಾದ ಬರಹಗಾರನೊಬ್ಬ ಬರೆಯದೆ ಇರಲಾರ; ನಿಜವಾದ ಕಲಾವಿದನೊಬ್ಬ ಕಲಾಸೃಷ್ಟಿ ಪ್ರಕ್ರಿಯೆಯಲ್ಲಿ ತನ್ನಷ್ಟಕ್ಕೆ ತೊಡಗಿರುವಂತೆ. ಒಬ್ಬ ಇತಿಹಾಸಕಾರ/ವಿಮರ್ಶಕನ 'ಬರೆಯುವ' ಪ್ರಕ್ರಿಯೆಯ ಉದ್ದೇಶದ ಹಿಂದೆ ನಮಗೆಲ್ಲರಿಗೂ ಗೊತ್ತಿರುವಂತೆ ಹಲವು ರಾಜಕಾರಣಗಳು ಪ್ರಭಾವ ಬೀರುತ್ತವೆ. ಅವುಗಳಲ್ಲಿ ಕೆಲವು:

1. ಸ್ವಯಂ / Self
2. ಸಂದರ್ಭ / Context, ಸನ್ನಿವೇಶ, ಆವರಣ
3. ಸಮಕಾಲೀನ ಆಗುಹೋಗು
4. ವೈಯಕ್ತಿಕ ನಿಲುವು, ಕೋಪ, ತಾಪ, ಇತ್ಯಾದಿಗಳು
5. ಮಹತ್ವಾಕಾಂಕ್ಷೆ

ಇವು ಕೆಲವು ಅಷ್ಟೆ.ಕಾಲಕಾಲಕ್ಕೆ ಬದಲುಗೊಂಡ, ಹೊಸ ಹೊಸ ವರಸೆಯ ರಾಜಕಾರಣಗಳು ಕಾಣಿಸಿಕೊಳ್ಳಬಹುದು. ಇದೇ ನೋಟಗಳ ಹಿನ್ನೆಲೆಯಲ್ಲಿ ಲೇಖಕರನ್ನು ಕಾಡಲೇಬೇಕಾದ ಪ್ರಜ್ಞೆಗಳು ಕೆಲವಿವೆ. ಇವುಗಳು ಆ ನಿರ್ದಿಷ್ಟ ಲೇಖಕರ ಇತಿಹಾಸ ಮತ್ತು ವಿಮರ್ಶೆಗಳ ಮಾನದಂಡಗಳನ್ನೂ ಪ್ರಭಾವಿಸಬಲ್ಲವು. ಅವು:

1. ಆದಿಮ ಪ್ರಜ್ಞೆ
2. ದೈವೀಕ ಪ್ರಜ್ಞೆ
3. ಐತಿಹಾಸಿಕ ಪ್ರಜ್ಞೆ
4. ವಿಶ್ವಾತ್ಮಕ ಪ್ರಜ್ಞೆ
5. ಸಮಕಾಲೀನ ಪ್ರಜ್ಞೆ ಮತ್ತು
6. ಭವಿಷ್ಯತ್‌ಕಾಲಿನ ಪ್ರಜ್ಞೆ

ಈ ಪ್ರಜ್ಞೆ ಅಥವಾ ಸಂವೇದನಾಶೀಲತೆಯು (Sensibility) ಸೃಜನಶೀಲ ಲೇಖಕರ ಜೀವಧ್ವನಿಯೇ ಆಗಿದೆ.

ಕಲಾ ಇತಿಹಾಸದ ಸುತ್ತಮುತ್ತ: ಇಂದಿನವರು ಏಕೆ ಬರೆಯುತ್ತಿದ್ದಾರೆ?

ಏಕೆಂದರೆ, ಹಿಂದಿನ ಇತಿಹಾಸದ ಪ್ರಭಾವಗಳನ್ನು ಮೀರಲು ಆನಂದಕುಮಾರ ಸ್ವಾಮಿಯವರು ಪರಂಪರೆಯ ಹಿನ್ನೆಲೆಯಲ್ಲಿ ಹೇಳಿರುವ 'ಯಾವುದೂ Original ಅಲ್ಲ' ಎಂಬ ಅಭಿಪ್ರಾಯವನ್ನು ಮೀರಲು ಹಾಗೂ ತನ್ನ 'ಗುರುತು', 'ಅಸ್ಮಿತೆ', ಸಹಿಯನ್ನು ಸಾಧಿಸಲು, ಹೊಸಬೆಳಕನ್ನು ಸ್ಪರ್ಷಿಸಲು ನಮ್ಮ ಇಂದಿನ ಹಿರಿಯ ಲೇಖಕರು ಬರೆಯುತ್ತಿರುವಂತೆ ಕಾಣುತ್ತಿದೆ. ಇತ್ತೀಚೆಗೆ 'ಕಲಾ ಇತಿಹಾಸ'

ಪದಪುಂಜದ ಬದಲಿಗೆ 'ದೃಶ್ಯ ಸಂಸ್ಕೃತಿ' ಅಥವಾ 'ದೃಶ್ಯ ಅಧ್ಯಯನ' ಎಂಬ ಪದಪುಂಜಗಳು ಬಳಕೆಗೊಳ್ಳುತ್ತಿವೆ. ಹೀಗಾಗಿ ಈ ಮೊದಲೇ ಹೇಳಿರುವಂತೆ ದೃಶ್ಯಕಲೆಯ ವ್ಯಾಪ್ತಿಗೆ ಸಿನಿಮಾ, ಛಾಯಾಚಿತ್ರ, ವಿಡಿಯೋ, ಇತ್ಯಾದಿ ಬೌದ್ಧಿಕ ಚಿಂತನಶೀಲತೆಗಳು ಚಿತ್ರ, ಶಿಲ್ಪ, ಪ್ರಿಂಟ್ ಇತ್ಯಾದಿಗಳ ಜತೆಜತೆಗೇ ಸೇರಿಕೊಂಡಿವೆ. ಇತಿಹಾಸ ಕೇಂದ್ರಿತ, ಇತಿಹಾಸ ಪ್ರಜ್ಞೆಯ ಅಧ್ಯಯನ/ಬರವಣಿಗೆಗಳು ಊಖಋಔಖಖಅಖಃ ಎಂಬ `ISM' ಆಗಿವೆ.

ಒಂದು ಕಲಾಕೃತಿಯ ಕಲಾವಿದನು ಯಾರು?ಕಲಾಕೃತಿ ಎಂದರೇನು?ಅದರ ವಸ್ತು ಯಾವುದು?ಯಾವಾಗ ಕಲಾಕೃತಿಯು ಪೂರ್ಣಗೊಂಡಿದೆ? ಹಾಗೆಯೇ 'ಏಕೆ?' ಎಂಬ ಪ್ರಶ್ನೆಗಳೂ ಕಾಡಬಲ್ಲವು.ಇವೆಲ್ಲ ಅಂಶಗಳು ಕಲಾಕೃತಿಯೊಂದರ 'ಭೂತಕಾಲೀನ' ನೋಟಗಳು. ಇಂದಿನ ನೋಟಕ್ಕೆ ಪೂರಕವಾಗಿ ಕಲಾಕೃತಿಯ ಇತಿಹಾಸವು ಪೂರಕವಾಗುತ್ತದೆ.

ಹಾಗೆಯೇ ಕಲಾ ಇತಿಹಾಸವು ಕಲಾಕೃತಿಯೊಂದರ ಸಾಮಾಜಿಕ, ಸಾಂಸ್ಕೃತಿಕ ಮತ್ತು ಐತಿಹಾಸಿಕ ಅನುಭವಗಳನ್ನು ಅರ್ಥೈಸಬಲ್ಲದು.

ಇತಿಹಾಸವು 'ಇಂದಿನ' ಗ್ರಹಿಕೆಗೆ 'ನಿನ್ನೆಯ' ಕೆಲವೊಮ್ಮೆ 'ನಾಳೆಯ' ಎಳೆಗಳನ್ನೂ ತೋರಬಲ್ಲುದು. ಪ್ರತಿಕಾಲದಲ್ಲಿಯೂ 'ಹಿಂದಿನದು' 'ಅಂದಿನದು' ಇದ್ದಿರಲೇಬೇಕು.ಅಂದರೆ 'ಹಳೆಯದು' ಮತ್ತು 'ಹೊಸದು.' 'ಹಳೆಯದು' ಅಂದರೇನೇ ಐತಿಹಾಸಿಕ ಪ್ರಜ್ಞೆಯ ಸಂವೇದೀ ಅನುಭವ ನೀಡುತ್ತದೆ. ಇಂದಿನದು ನಾಳೆ ಇತಿಹಾಸವಾಗುತ್ತದೆ. ಇಂದು ನಮ್ಮ ಮುಂದೆ ನಿನ್ನೆಗಳ, ಹಿಂದಿನ ಇತಿಹಾಸವೂ ಇದೆ. ಈ ಹಿನ್ನೆಲೆಯಲ್ಲಿ ನಾವು ಅದರಲ್ಲಿ ಹಲವಾರು ಕಲಾವಿದ/ಕಲಾವಿದೆಯರ ಕೌತಕಪೂರ್ಣ ವಿವರಗಳನ್ನು, ಅವರ ಕಲಾಶೈಲಿ, ಬದುಕಿನ ಕಥಾನಕಗಳನ್ನು ನೋಡುತ್ತೇವೆ/ಓದುತ್ತೇವೆ. ಕೆ.ವೆಂಕಟಪ್ಪ, ಸಿದ್ಧಲಿಂಗಸ್ವಾಮಿ, ಎಸ್.ಎಂ. ಪಂಡಿತ್ ಮೊದಲಾದವರ ಹೆಸರುಗಳ ಹಿಂದಿನ ಇತಿಹಾಸವು ಈ ಮಾತುಗಳಿಗೆ ಪೂರಕವಾಗಿದೆ.

ಇತಿಹಾಸ ಪೂರ್ವಕಾಲದ ಆದಿಮಕಲೆಯನ್ನು ಕಲಾ ಇತಿಹಾಸದ ಮೊದಲ ಅಧ್ಯಾಯವಾಗಿ ಪರಿಗಣಿಸಲಾಗಿದೆ. ಶತಮಾನಗಳಿಂದ ಕಲೆಯು 'ಸೌಂದರ್ಯ'ದ ನೆಲೆಯಲ್ಲಿ ಅನುಭವ, ಪ್ರಾಮುಖ್ಯತೆ ಮತ್ತು ಮೆಚ್ಚುಗೆಯ ಮೂಲಕ ಅಸ್ತಿತ್ವದಲ್ಲಿದೆ.ಇಲ್ಲಿ ನಾವು ನಮ್ಮ ದೃಶ್ಯಕಲೆಯ ಚಿತ್ರ, ಶಿಲ್ಪ, ಪ್ರಿಂಟ್, ಸಿನಿಮಾ, ಛಾಯಾಚಿತ್ರ ಮೊದಲಾದವುಗಳನ್ನು ಗಮನಕ್ಕೆ ತಂದುಕೊಳ್ಳಬಹುದು.

ಈ ಎಲ್ಲ ಮಾಧ್ಯಮದ ಕಲಾಕೃತಿಗಳನ್ನು ಹಲವು ಕಾಲ, ಸಂದರ್ಭಗಳಲ್ಲಿ ನೋಡುಗರು ಹಲವು ರೀತಿಗಳಲ್ಲಿ ನೋಡಿದ್ದಾರೆ.ಅಂದರೆ ಒಂದು 'ನಿರ್ದಿಷ್ಟ' ಕಲಾಕೃತಿಯು ಹಲವಾರು ಸಂದರ್ಭಗಳಲ್ಲಿ ಹಲವು ರೀತಿಗಳಲ್ಲಿ ನೋಡಲ್ಪಟ್ಟಿದೆ.ಈ ವೈವಿಧ್ಯಮಯ ವೈರುಧ್ಯಮಯ ನೋಡುವಿಕೆಗಳಿಗೆ ನೋಡುಗರ ವೈವಿಧ್ಯಮಯ/ವೈರುಧ್ಯಮಯ ideologyಗಳೂ ಕಾರಣವಾಗಿರುತ್ತವೆ.

ಆದರೆ ಕಲಾಕೃತಿಯ ನೋಡುಗರಿಗೆ ಕಲಾಕೃತಿಗಳನ್ನು ನೋಡಿ ವಿವಿಧ ಭಾವ, ಅನುಭವಗಳನ್ನು ಪಡೆಯುವವರಿಗೆ 'ಕಲಾ ಇತಿಹಾಸದ ಜ್ಞಾನವು ಅಗತ್ಯವಿಲ್ಲ' ಎಂಬ ಭಾವನೆಯೂ ಇದೆ; ಹಾಗೆಯೇ ಗ್ಯಾಲರಿಗಳ ಕಲಾಕೃತಿಗಳನ್ನು ನೋಡಲು "ನನಗೆ ಯಾವುದು ಇಷ್ಟವಾಗುತ್ತದೆ ಎಂಬುದು ನನಗೆ ಗೊತ್ತು; ನಾನು ನೋಡಿದ್ದನ್ನು ನಾನು ಇಷ್ಟಪಡುತ್ತೇನೆ" ("I know what I like and I like what I see." – Dana Arnold in 'Art History', Oxford University Press, 2004) ಎಂಬ ದೃಷ್ಟಿಯವರೂ ಇರುತ್ತಾರೆ. ಆದರೂ ಹಾಗಾದರೂ ಹೋಗಿ ನೋಡಿದರೂ

ಸಾಕು; ಕಲಾಕೃತಿಗಳಿಗೆ ಸ್ವಲ್ಪವಾದರೂ ಹತ್ತಿರವಾಗಬಹುದೆನ್ನಿಸುತ್ತದೆ.ಕಲಾಕೃತಿಗಳನ್ನು, ಗ್ಯಾಲರಿಗಳನ್ನು ನೋಡದವರೂ ಇದ್ದಾರೆ; ಇರುತ್ತಾರೆ.

ನೋಡುವ ಕಣ್ಣು ಮತ್ತು ಮನಸ್ಸಿನ ಹಾಗೂ ಬುದ್ಧಿಯ ರಾಜಕಾರಣ ಅದು.

ಕಲಾ ಇತಿಹಾಸ ಯಾರಿಗಾಗಿ?

ಹಾಗೆ ನೋಡಿದರೆ, ಕಲಾ ಇತಿಹಾಸವು ಸೃಷ್ಟಿಗೊಳ್ಳುವುದೇ ಓದುಗನೊಬ್ಬನೊಡನೆ ಅಥವಾ ಓದುಗನೊಬ್ಬನ ಕೇಂದ್ರಿತವಾಗಿ. ಕೆಲವೊಮ್ಮೆ 'ಸ್ವಯಂ'/ಲೇಖಕನೇ ತನ್ನನ್ನೇ ಉದ್ದೇಶಿಸಿಯೂ ಬರೆಯಬಹುದು. ಆದರೆ ಕಲೆಯ ಇತಿಹಾಸ ಅದು. ಅವನ ಇತಿಹಾಸ ಅಲ್ಲ. ಕಲೆಗೆ 'ನೋಡುಗರು' ಇರುವಂತೆ ಕಲಾಸಾಹಿತ್ಯಕ್ಕೆ 'ಓದುಗರು' ಇರಬೇಕು.

ಕಲೆ ಮತ್ತು ನೋಡುಗನ ನಡುವಿನ ಸೇತುವೆ/ಸಂವಾದದಂತೆಯೂ ಕಲಾ ಇತಿಹಾಸ ಇರಬಹುದು.

ಕಲೆಯು ಇತಿಹಾಸವಾಗುವುದು ಎಂದರೇನು?
ಅಥವಾ ಕಲೆಯು ಇತಿಹಾಸವಾಗುವುದು ಎಂದರೆ ಹೇಗೆ?

ಕಲಾಕೃತಿಯೊಂದು ಸರ್ವಕಾಲಕ್ಕೂ ಸಲ್ಲುವ, ಕಾಲಾತೀತ (timeless quality) ಮತ್ತು ವಿಶ್ವಾತ್ಮಕ (universality) ಮೌಲ್ಯಗಳನ್ನು ಹೊಂದಿರುವುದರ ಜತೆಗೆ ನಿರಂತರತೆ ಅಥವಾ ಪ್ರಗತಿಶೀಲತೆಯನ್ನು ಅರಗಿಸಿಕೊಂಡಿರಬೇಕು.1940ರ ಮುಂಬಯಿಯ ಕಲಾವಿದರ ಗುಂಪಿನ `progressive group' ಎಂಬ ಹೆಸರನ್ನು ಗಮನಿಸಿ. 1940ರ ನಂತರದ ಇ.ಹೆಚ್. ಗ್ರೊಂಬ್ರಿಚ್ ಒಂದೆಡೆ 'ಹಾಗೆ ನೋಡಿದರೆ ಕಲಾ ಇತಿಹಾಸದಲ್ಲಿ ಕಲೆ ಇಲ್ಲ; ಕಲಾವಿದರೇ ತುಂಬಿದ್ದಾರೆ' ಎಂದಿರುವುದು ಗಮನಾರ್ಹ, ಇರಲಿ. ಹಾಗೆಯೇ ನಾವು futuristರನ್ನೂ ಕಲಾ ಇತಿಹಾಸದಲ್ಲಿ ನೋಡಿದ್ದೇವೆ. "ಇತಿಹಾಸವನ್ನು ಒರೆಸಿಹಾಕಿ; ಮ್ಯೂಸಿಯಂಗಳನ್ನು ನಾಶಮಾಡಿ" ಎಂದು ಹೇಳಿದವರು ಅವರು.

ಆದರೆ ಈ ಎಲ್ಲ ವಿಭಿನ್ನ ನೋಟಗಳ ನಡುವೆ ಕಲಾ ಇತಿಹಾಸ ನಿರಂತರವಾಗಿ ತನ್ನ ಪುಟಗಳನ್ನು ವೈವಿಧ್ಯಮಯವಾಗಿ ಹೆಚ್ಚಿಸಿಕೊಳ್ಳುತ್ತಲೇ ನಡೆದಿದೆ. ಇಂದಿನ ನಾವೆಲ್ಲರೂ ನಮ್ಮ ವಿಶಿಷ್ಟ ಅಭಿವ್ಯಕ್ತಿಗಳ ಮೂಲಕ ಮುಂದೆ ಇತಿಹಾಸದಲ್ಲಿ ಸೇರಿಹೋಗುವುದು ಸಹಜವೇ ಆಗಿದೆ.

ಇಂದಿನ ಕಲೆಯ ರಾಜಕಾರಣ ಮುಂದಿನ ಇತಿಹಾಸವಾಗುತ್ತದೆ. ದೃಶ್ಯಕಲೆಯ, ಕಲಾವಿದ, ಕಲಾವಿದೆಯರ ಕುರಿತ, ಅವರ ಕಲಾಕೃತಿಗಳ ಕುರಿತ ಬರಹಗಳು ಕಲೆಯ ಹಲವು 'ಇಸಂ'ಗಳಂತೆ, `Historicism' ಹೆಸರಿನಿಂದ ಕರೆಯಲ್ಪಡುತ್ತಿವೆ. ಕನ್ನಡದಲ್ಲಿ ದೃಶ್ಯಕಲೆಯ ಕುರಿತ ಪುಸ್ತಕಗಳು ಇತ್ತೀಚೆಗೆ "ದೃಶ್ಯಕಲಾ ಇತಿಹಾಸ ಮತ್ತು ವಿಮರ್ಶೆ" ಎಂಬ ಹಿಂಬದಿಯ ರಕ್ಷಾಪುಟದ ಶೀರ್ಷಿಕೆಯ ಅಡಿ ಪ್ರಕಟವಾಗುತ್ತಿವೆ. ಅಂದರೆ 'ಇತಿಹಾಸ' ಮತ್ತು 'ವಿಮರ್ಶೆ'ಗಳೆರಡನ್ನು ಈ ಹಿಂದಿನ ನಮ್ಮ ಹಿರಿಯ ಲೇಖಕರ ದೃಶ್ಯಕಲಾ ಪುಸ್ತಕಗಳು ತಮ್ಮೊಳಗೆ ಅಡಕಮಾಡಿಕೊಂಡಿವೆ.

ಸ್ವಲ್ಪ ಹಿಂದೆ ನೋಡಿದರೆ ದೃಶ್ಯಕಲೆಯ ಕುರಿತ ವಿಶಿಷ್ಟ ಪುಸ್ತಕಗಳು, 1000 ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಬಂದೇ ಇಲ್ಲ. ಅಲ್ಲಲ್ಲಿ ಕನ್ನಡ ಕಾವ್ಯಗಳಲ್ಲಿ

ಸಾಹಿತ್ಯದೊಂದಿಗೆ ಚಿತ್ರಕಲೆಯ ವಿವರಗಳು ಹಾಸುಹೊಕ್ಕ ಸಂದರ್ಭಗಳಿವೆ.

ಪೊನ್ನಕವಿಯ ಶಾಂತಿಪುರಾಣದಲ್ಲಿ (ಪು. 345, 9-69) ವಿಶ್ವಕರ್ಮನ ಕಲೆಯ ಬಗ್ಗೆ ಪ್ರಸ್ತಾಪಿಸಿರುವಂತೆ, ಅದೇ ಮೊದಲಬಾರಿಗೆ 'ಚೀರಘಟ್ಟಿ' ಎಂಬ ಚಿತ್ರಕಲಾವಿದನ ಬಗ್ಗೆಯೂ (ಶಾಂತಿಪುರಾಣ: 1-64, 8-41) ಉಲ್ಲೇಖಿಸಲಾಗಿದೆ. ಪೊನ್ನನ ನಂತರದಲ್ಲಿ ಶಾಂತಿನಾಥ, ನಾಗಚಂದ್ರ, ರುದ್ರಭಟ್ಟ, ಅಗ್ಗಳ, ಗುಣವರ್ಮ ಇವರುಗಳೂ ಚೀರಘಟ್ಟಿಯ ಬಗ್ಗೆ ಪ್ರಸ್ತಾಪಿಸಿದ್ದಾರೆ. (ಕವಿ ಬೇಂದ್ರೆ 'ಚೀರಘಟ್ಟಿ' ಯಾರು?ಎಂಬ ಬರಹವನ್ನು ಬರೆದಿರುವುದೂ ಕುತೂಹಲಕಾರಿ.)

ಆದರೆ ಕೇವಲ ದೃಶ್ಯಭಾಷೆಯನ್ನು ಅರಗಿಸಿಕೊಂಡು ದೃಶ್ಯಕಲೆಯ ಪ್ರಕಾರಗಳಾದ ಚಿತ್ರ, ಶಿಲ್ಪ, ಪ್ರಿಂಟ್, ಛಾಯಾಚಿತ್ರ, ಸಿನಿಮಾಗಳ ಬಗ್ಗೆ ಪ್ರತ್ಯೇಕತೆಯಿಂದ ಪುಸ್ತಕಗಳು ಕನ್ನಡದಲ್ಲಿ ಹೊರಬರಲು ಆರಂಭವಾದುದೇ ಕಳೆದ ಶತಮಾನದಲ್ಲಿ. ಚಿತ್ರಕಲೆಯನ್ನು ಕುರಿತ ಮೊದಲ ಪರಿಪೂರ್ಣ ಲೇಖನ ಕನ್ನಡ ಸಾಹಿತ್ಯ ಪರಿಷತ್ತಿನ ಪತ್ರಿಕೆಯಲ್ಲಿ (1930ರ ಏಪ್ರಿಲ್ ಸಂಚಿಕೆ) 'ರಸಯೋಗಿ' ಎಂಬುವವರ 'ಕನ್ನಡ ಸಾಹಿತ್ಯದಲ್ಲಿ ಕರ್ಣಾಟಕ ಚಿತ್ರಕಲೆ' ಎಂಬ ಶೀರ್ಷಿಕೆಯಡಿ ಪ್ರಕಟಗೊಂಡಿತು.

ಬಹುಷಃ ಇದೇ ಸಂದರ್ಭದ ಹಿಂದೆ ಮುಂದೆ ಶಿವರಾಮ ಕಾರಂತ, ಅ.ನ.ಕೃ., ಅ.ನ. ಸುಬ್ಬರಾಯರವರುಗಳೂ ಚಿತ್ರಕಲೆಯ ಕುರಿತು ಬರಹಗಳನ್ನು ಬರೆದರು. ಎಂ.ವಿ. ಸೀತಾರಾಮಯ್ಯನವರ 'ಸಾಹಿತ್ಯ ಮತ್ತು ಚಿತ್ರಕಲೆ' 1931ರಲ್ಲಿ ರೂಪುಗೊಂಡಿತು. ಪ್ರಬುದ್ಧ ಕರ್ನಾಟಕದ 1942ರ ಸಂಚಿಕೆಯಲ್ಲಿ ಬಿ.ವಿ.ಕೆ.'ಪ್ರಾಚೀನ ಚಿತ್ರಕಲೆ' ಕುರಿತು ಬರೆದಿದ್ದಾರೆ.ಆದರೆ, 1925-1930ರ ಅವಧಿಯಲ್ಲಿ ಓಲಿಂಗಣ್ಣಯ್ಯನವರ 'ನೀರು ಬಣ್ಣದಿಂದ ಚಿತ್ರ ತೆಗೆಯುವ ಕ್ರಮ' 'ತಸಬೀರು ತೆಗೆಯುವ ಕ್ರಮ' ಪುಸ್ತಕಗಳ ಪ್ರಕಟಗೊಂಡವು.

ಶಿವರಾಮ ಕಾರಂತ, ಅ.ನ.ಕೃ.

ಕಳೆದ ಶತಮಾನದ ಮೊದಲಾರ್ಧದ ಹೊತ್ತಿಗೇ ಕಲಾಸಾಹಿತ್ಯ ಮತ್ತು ವಿಮರ್ಶೆಗಳನ್ನೂ ಅರಗಿಸಿಕೊಂಡ ಬಹುಮುಖ್ಯ ಪುಸ್ತಕಗಳನ್ನು ಶಿವರಾಮ ಕಾರಂತ ಮತ್ತು ಅ.ನ.ಕೃ. ಪ್ರಕಟಿಸಿದರು. ಕಾರಂತರ 'ಭಾರತೀಯ ಚಿತ್ರಕಲೆ' (1930), ಅ.ನ.ಕೃ.ರವರ 'ಭಾರತೀಯ ಚಿತ್ರಕಲೆಯಲ್ಲಿ ರಾಜಾರವಿವರ್ಮನ ಸ್ಥಾನ' (1932) ಇಂದಿಗೂ ಗಣನೀಯವಾಗಿವೆ. ಈ ಪುಸ್ತಕಗಳನ್ನು ಬಹುಷ ನೋಡಿಲ್ಲದ, ಓದದ ಲೇಖಕರು ಮಾತ್ರ ಕನ್ನಡದಲ್ಲಿ ಕಲಾವಿಮರ್ಶೆ/ಇತಿಹಾಸ ಬಂದಿಲ್ಲ ಎಂದು ಹೇಳುತ್ತಿರುವಂತಿದೆ. ಈ ಪುಸ್ತಕಗಳ ವಿಮರ್ಶೆಯನ್ನಾದರೂ ಇಂತಹ ಲೇಖಕರು ಮಾಡಲಿ.

ಶಿವರಾಮ ಕಾರಂತರ 'ಭಾರತೀಯ ಚಿತ್ರಕಲೆ'

ಪ್ರಾರಂಭದಲ್ಲಿ ಬಹುತೇಕ ಲೇಖಕರು ಮಾಡುವಂತೆ ಕಾರಂತರೂ ಈ ಪುಸ್ತಕದ 'ಭಾರತೀಯ ಚಿತ್ರಕಲೆಯ ಪ್ರಾಚ್ಯತೆ' ಬರಹವನ್ನು ಪರ್ಸಿಬ್ರೌನ್‌ರವರ `Indian Painting' ಮತ್ತು ಪಿ.ಜಿ. ರಹಮಾನ್‌ರ `Pictures in the Caves of Bagh' ಗ್ರಂಥಗಳನ್ನು ಆಧರಿಸಿ ಬರೆದಿದ್ದಾರೆ; ಹಾಗೆಂದು ಅವರೂ ಹೇಳಿಕೊಂಡಿದ್ದಾರೆ.ಅದು ಅವರ ಘನತೆ.

ಭಾರತೀಯ ತತ್ವಶಾಸ್ತ್ರ ಮೂಲದ ರಾಧಾಕೃಷ್ಣನ್, ಆನಂದ ಕೆ. ಕುಮಾರಸ್ವಾಮಿ, ರವೀಂದ್ರನಾಥ ಠಾಕೂರ್, ಅರವಿಂದರು, ಜೆ.ಹೆಚ್. ಕಸಿನ್ಸ್, ಟಾಲ್‌ಸ್ಟಾಯ್, ಕವಿ ಕೀಟ್ಸ್, ಇ.ಬಿ. ಹ್ಯಾವೆಲ್, ಒ.ಸಿ.

ಗಂಗೂಲಿ, ಪರ್ಸಿಬ್ರೌನ್‌ರವರುಗಳ ಚಿಂತನೆಗಳನ್ನು ಆಕರವನ್ನಾಗಿಸಿ, ಅರಗಿಸಿಕೊಂಡ ಪುಸ್ತಕ ಕಾರಂತರದು.ಇದರಲ್ಲಿನ 33ನೆಯ ಚಿತ್ರ ವೀಣಾಭ್ರಾಂತು (mad after veena) ವೆಂಕಟಪ್ಪನವರ ಚಿತ್ರ.ಅದು ಕೆಟ್ಟದಾಗಿ ಪ್ರಕಟವಾಗಿದೆಯಂದು ಅಸಮಾಧಾನ ವ್ಯಕ್ತಪಡಿಸಿ ವೆಂಕಟಪ್ಪನವರು ಕಾರಂತರೊಂದಿಗೆ ಪತ್ರವ್ಯವಹಾರ ಮಾಡಿದ್ದಾರೆ. (ನೋಡಿ: ವೆಂಕಟಪ್ಪ ಪುನರವಲೋಕನ, ಲೇ.: ಕೆ.ವಿ. ಸುಬ್ರಹ್ಮಣ್ಯಂ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.)ಪರಸ್ಪರ ಮಾತುಕತೆಗಳು ನಡೆದಿವೆ. ಕಾರಂತರು ತಮ್ಮ ಪುಸ್ತಕದ ಅಂತಿಮ "ನವಯುಗ" ಅಧ್ಯಾಯದಲ್ಲಿಯೂ "ಮೂಲದ ಜೀವವು ಈ ಭಾಲೇಖ (photo) ಮುದ್ರೆಯಲ್ಲಿ ಎಂದೂ ಬರಲಾರದು. ಆದರೂ ಮೂಲಚಿತ್ರವನ್ನು ಕಾಣುವ ತನಕ ಇದನ್ನು ಕಂಡು ಚಿತ್ರಕಾರನ ಮಹಿಮೆಯನ್ನು ತಿಳಿಯಬಹುದು" ಎಂದಿದ್ದಾರೆ; ಅಧ್ಯಾಯವನ್ನು ಅಲ್ಲಿಗೇ ಮುಕ್ತಾಯ ಮಾಡಿದ್ದಾರೆ; (ಡಾ. ಶಿವರಾಮ ಕಾರಂತ: 'ಭಾರತೀಯ ಚಿತ್ರಕಲೆ', ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು) ಇರಲಿ. ಮುಂದಿನ ಮುದ್ರಣಗಳಲ್ಲಿಯೂ ಸರಿಹೋಗಲಿಲ್ಲ.

ಕಲಾ ಇತಿಹಾಸ ಮತ್ತು ವಿಮರ್ಶೆಗಳೆರಡೂ ಹಾಸುಹೊಕ್ಕ ಕಾರಂತರ ಕಲಾ ಪ್ರಪಂಚ (1978), ಕರ್ನಾಟಕದಲ್ಲಿ ಚಿತ್ರಕಲೆ (1971) ಮೊದಲಾದವು ಪ್ರಕಟವಾಗಿವೆ. ಮುಖ್ಯವಾಗಿ 'ಕಲೆಯ ದರ್ಶನ' (1950) ಪ್ರಕಟವಾಗಿದೆ.ಅ.ನ.ಕೃ.ರವರ 'ಚಿತ್ರಕಲೆ' (1970) ಮತ್ತು 'ನಮ್ಮ ಕಲಾವಿದರು' ಪ್ರಕಟವಾಗಿವೆ.

ಕನ್ನಡದಲ್ಲಿ ಕಲಾಸಾಹಿತ್ಯ ಪುಸ್ತಕಗಳು ಇಲ್ಲ ಎನ್ನುವವರು ಅ.ಲ. ನರಸಿಂಹನ್ 1995ರಲ್ಲಿ ಮಾಡಿರುವ 100ಕ್ಕೂ ಹೆಚ್ಚು ಪುಸ್ತಕಗಳ ಪಟ್ಟಿಯನ್ನು ನೋಡಬೇಕು.ಅದರಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯ ಪುಸ್ತಕಗಳು ಸೇರಿಲ್ಲ. ಜತೆಗೆ ಕಳೆದ 20 ವರ್ಷಗಳಲ್ಲಿ ಮತ್ತೆ ನೂರಕ್ಕೂ ಹೆಚ್ಚು ಪುಸ್ತಕಗಳು ಪ್ರಕಟಗೊಂಡಿವೆ. ಗುಣಮಟ್ಟದಲ್ಲಿ ಏರುಪೇರು ಇರುವುದು ಸಹಜವೇ ಆಗಿದೆ; ಇರಲಿ.ಕಲಾಸಾಹಿತ್ಯ ಓದುವ ಹಸಿವು, ಅಗತ್ಯ ಉಂಟಾಗಬೇಕು.

ಕಾರಂತರ ಕಲಾ ತಾತ್ವಿಕತೆ: ಅನ್ವೇಷಣೆ

"ಚಂದ (ಸೌಂದರ್ಯ) ಎಂಬುದು ನಮ್ಮ ಕಣ್ಣಿಗೆ ರುಚಿಸುವಂತೆ ಬರೆಯುವ ಸ್ವತಂತ್ರ ವಸ್ತುವಲ್ಲ. ಚಿತ್ರಕಾರ ತಾನು ಆರಿಸಿಕೊಂಡ ವಿಷಯಕ್ಕೆ ಒಪ್ಪುವ ರೀತಿಯಲ್ಲಿ ಬರೆದ ಬಗೆ, ವಸ್ತುವಿಗೂ, ಅದರ ಆಕೃತಿ, ರೂಪ, ಬಣ್ಣಗಳಿಗೂ ಸಂಬಂಧಪಟ್ಟದ್ದಾಗಿರಬೇಕು" ಎಂದಿದ್ದಾರೆ. ಅವರ 'ಸ್ಮೃತಿಪಟಲದಿಂದ', ಸಂಪುಟ-2ರಲ್ಲಿ. ಸುತ್ತಲಿನ ಜನರ ಕಣ್ಣು ನಮ್ಮ ಕಣ್ಣು ಒಂದೇ ಆಗಿರಬಾರದು.ಈ ಅರಿವು ಇರಲಿಲ್ಲ ಎಂದಿದ್ದಾರೆ. ಕಲೆ ಎಂಬುದು ಅನುಕರಣೆ ಅಲ್ಲ. ವಾಸ್ತವಿಕ ಜಗತ್ತಿನ ಅನುಭವ ಮತ್ತು ನೋಟಗಳಿಂದಾಗಿ ಚಿತ್ರಕಾರನ ಅಂತರಂಗದ ಮೇಲೆ ಉಂಟಾದ ಪರಿಣಾಮವನ್ನು (ಉಳಿದೆಲ್ಲವನ್ನೂ ಮರೆತು) ಸುಸಂಬದ್ಧವಾಗಿ (ಎಂದರೆ ಚಿತ್ರಭಾಷೆಯಲ್ಲಿ) ತೋರಿಸಬಲ್ಲ ಒಂದು ಸೃಷ್ಟಿ. ಇಂತಹ ಎಲ್ಲ ಹೊಸ ಕಲ್ಪನೆ, ಭಾವನೆಗಳು ನನ್ನ ಮನಸ್ಸನ್ನು ತಿದ್ದುವುದಕ್ಕೆ ಸಾಕಷ್ಟು ದೀರ್ಘ ಕಾಲ ಹಿಡಿಯಿತು" ಎಂದೂ ಹೇಳಿಕೊಂಡಿದ್ದಾರೆ. ಇಂತಹ ನೋಟಗಳು ನಮ್ಮ ಯುವ ಲೇಖಕ/ಲೇಖಕಿಯರಿಗೆ ಮಾದರಿಯಾಗಬಲ್ಲವು.

ಅ.ನ.ಕೃ./ವೀ. ಸೀತಾರಾಮಯ್ಯನವರ ಕಲಾಸಾಹಿತ್ಯ ಕೊಡುಗೆಗಳೂ ಅಮೂಲ್ಯವಾದುವು.

1970ರಲ್ಲಿ 'ಚಿತ್ರಕಲೆ' ಅ.ನ.ಕೃ.ರವರೇ ಹೇಳಿಕೊಂಡಿರುವಂತೆ ಸರಳ, 'ಬಿಚ್ಚೋಲೆ ಗೌರಮ್ಮ'ನಂತೆ ಮೈಸೂರಿನಲ್ಲಿ ಪ್ರಕಟವಾಯಿತು.

ಕನ್ನಡದ ಕೆ.ವೆಂಕಟಪ್ಪ, ವ್ಯಾಸರಾವ್, ನಾರಾಯಣ ಸಂಗಮ, ಹಂಜಿ ರುದ್ರಪ್ಪ ಮತ್ತು ಮಾರ್ತಾಂಡ ಜೋಶಿ, ಮಿಣಜಿಗಿ, ಕೃಷ್ಣಕ್ಷತ್ರಿ, ಸಿದ್ಧಲಿಂಗ ಸ್ವಾಮಿ, ಎಂ. ಶಾಮರಾಯರು, ಎಂ.ಟಿ.ವಿ. ಆಚಾರ್ಯ, ಎಸ್.ಎನ್. ಸ್ವಾಮಿ, ಅಮೀನ್ ಸಾಹೇಬ ಕಮಡೋಳಿ, ಪಿ. ಸುಬ್ಬರಾಯರು, ಮೊದಲ ಬಾರಿಗೆ ಕನ್ನಡ ಕಲಾಸಾಹಿತ್ಯದಲ್ಲಿ ಕಾಣಿಸಿಕೊಂಡರು!

ಮಿಣಜಿಗಿಯವರ ರಾಗಮಾಲಾ ಚಿತ್ರಗಳನ್ನು ಅವರ ಪ್ರತಿಭಾವಂತ ಕುಂಚದಿಂದ ಉದಯಿಸಿರುವ ಅಮೃತ ಪುಷ್ಪಗಳೆಂದರೆ 'ರಾಗಮಾಲಾ' ಚಿತ್ರಗಳು ಎಂದಿದ್ದಾರೆ.ಅ.ನ.ಕೃ. (ಅ.ನ. ಕೃ. ರಾಗಮಾಲಾ ಚಿತ್ರಗಳು, ಚಿತ್ರಕಲೆ, 1970, ಪು. 119, ವಿದ್ಯಾನಿಧಿ ಬುಕ್ ಡಿಪೋ, ಮೈಸೂರು-7) ಹಲವೆಡೆ ಅರವಿಂದರ ಅಭಿಪ್ರಾಯಗಳ ಉಲ್ಲೇಖವೂ ಇದೆ.

ವಿಮರ್ಶೆಯ ಸಂದರ್ಭದಲ್ಲಿ ಅ.ನ.ಕೃ.ರವರ 'ಭಾರತೀಯ ಚಿತ್ರಕಲೆಯಲ್ಲಿ ರಾಜಾ ರವಿವರ್ಮನ ಸ್ಥಾನ' ಪ್ರಕಟಣೆಯಲ್ಲಿ ಬಂಗಾಳದ ಪುನರುಜ್ಜೀವನ (Renaissance) ಹಿನ್ನೆಲೆಯಲ್ಲಿ ರವಿವರ್ಮನ ದೇವದೇವಿಯರ ರೂಪಚಿತ್ರಣವನ್ನು ಕಟುವಾಗಿ ವಿಮರ್ಶಿಸಿದ್ದಾರೆ. ಕುಮಾರಸ್ವಾಮಿಯವರ ಅಭಿಪ್ರಾಯಗಳೂ, ಭಾರತೀಯ ಪರಂಪರೆಯ ಪ್ರೀತಿಯೂ ಅವರ ಮೇಲೆ ಪ್ರಭಾವ ಬೀರಿವೆ.

ಕನ್ನಡ ಸಾಹಿತ್ಯದ ನವೋದಯ ಸಂದರ್ಭ ಅದು; ಇರಲಿ.ರವಿವರ್ಮನನ್ನು ಉತ್ತಮ ಕಲಾವಿದ ಎಂದು ಒಪ್ಪಿಕೊಂಡರೂ, ಭಾರತೀಯ ಕಲೆಯಲ್ಲಿ ಅವನಿಗೆ ಸ್ಥಾನವನ್ನು ನೀಡಲು ನಿರಾಕರಿಸುತ್ತಾರೆ. ಅ.ನ.ಕೃ.ರವರನ್ನು ವೆಂಕಟಪ್ಪನವರು ತಮ್ಮ ದಿನಚರಿಯ ಪುಟಗಳಲ್ಲಿ ಪ್ರೀತಿಯಿಂದೇನೂ ದಾಖಲಿಸಿಲ್ಲ; ಅವರ ಬಗ್ಗೆ ಪ್ರಸ್ತಾಪಿಸಿದ್ದಾರೆ. ಬಹುಷಃ ಅಭಿಪ್ರಾಯ ಭೇದ ಇದ್ದಿರಬಹುದು.

ಅ.ನ.ಕೃ.ರವರ 'ಕರ್ನಾಟಕದ ಕಲಾವಿದರು', ಭಾಗ-2 ಗ್ರಂಥದಲ್ಲಿ (ವ್ಯಕ್ತಿಚಿತ್ರಗಳು) ಸೌಂದರ್ಯೋಪಾಸಕ ಮಿಣಜಿಗಿ, ಎಸ್.ಎನ್. ಸ್ವಾಮಿ, ಎಲವಟ್ಟಿ, ಪಿ. ಸುಬ್ಬರಾವ್, ಶ್ರೀ ಮಿಣಜಿಗಿಯವರ ರಾಗಮಾಲಾ ಚಿತ್ರಗಳು, ಇವೆ. ಎಲ್ಲವು 4-5 ಪುಟಗಳ ಪುಟ್ಟ ಸಶಕ್ತ ಬರಹಗಳು. ಎಲವಟ್ಟಿಯವರ ಕುರಿತ ಈ ಸಾಲುಗಳನ್ನು ನೋಡಿ, "ಉತ್ತಮ ಕಲಾವಿದರಲ್ಲಿರಬೇಕಾದ 'ದಿವ್ಯ ಅತೃಪ್ತಿ' ಎಲ್ಲವಟ್ಟಿಯವರಲ್ಲಿ ತುಂಬಿ ತುಳುಕುತ್ತಿದೆ. ತಮ್ಮ ಚಿತ್ರಗಳಲ್ಲಿ ತಮಗೇ ಅತೃಪ್ತಿ! ಇವಕ್ಕೂ ಒಳ್ಳೆಯವುಗಳನ್ನು ರಚಿಸಬೇಕೆಂಬ ಆಕಾಂಕ್ಷೆ! ಸೂರ್ಯಾಸ್ತ, ಸೂರ್ಯೋದಯಗಳ ವಿವಿಧ ವರ್ಣವೈಖರಿ ಈಗ ಅವರ ಚಿತ್ತವನ್ನು ಸೆಳೆದಿದೆ." (ಅ.ನ.ಕೃ. ಕರ್ನಾಟಕ ಕಲಾವಿದರು, ಪು. 167, ಅ.ನ.ಕೃ. ಸಾಹಿತ್ಯ ಶ್ರೇಣಿ-7, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, 2011.)

ವಿ.ಸೀ.ಯವರ 'ಕಲಾನುಭವ'

ವಿ.ಸೀ. ಅವರ 'ಕಲಾನುಭವ' ಪುಸ್ತಕವನ್ನು ಸಂಗ್ರಹಿಸದ ಲೇಖಕರು ಯಾರೂ ಇರಲಾರರು. ಅದರ ಮುನ್ನುಡಿಯಲ್ಲಿ ಅವರು "ಕಲಾನುಭವದಲ್ಲಿ ಬರುವ sense, sensitive, feeling, emotion ಲೋಕೋತ್ತರ, ಆನಂದ ಮುಂತಾದ ಮಾತುಗಳು ಕಲೆಯಲ್ಲಿ ವಿಶಿಷ್ಟ ಪಾರಿಭಾಷಿಕ ಪದಗಳು.ಅವನ್ನೂ ಬಳಸಿಕೊಂಡಿದ್ದೇನೆ" ಎಂದು ಹೇಳಿಕೊಂಡಿರುವುದು ಗಮನಾರ್ಹ. ಇಲ್ಲಿ ಅವರ ಕನ್ನಡ ದೃಶ್ಯಕಲಾ ಸಾಹಿತ್ಯದ ಬಗೆಗಿನ ಪ್ರೀತಿಯ ಪರಿಚಯ ಆಗುತ್ತದೆ.

ಕಲಾನುಭವದಲ್ಲಿ ಲಲಿತಕಲೆಯ ಪ್ರಕಾರಗಳ ಒಟ್ಟು ನೋಟ, ಒಳನೋಟಗಳೂ ಇವೆ. ಚರಿತ್ರೆ ವಿಮರ್ಶೆ, ರಸಗ್ರಹಣ ಇತ್ಯಾದಿಗಳನ್ನು ಅವರದೇ ಆದ ರೀತಿಯಲ್ಲಿ ನೋಡಿದ್ದಾರೆ.ಪ್ರಪಂಚ ಅನುಭವ ಭಂಡಾರವು ಕಲಾವಿದರಿಗೆ, ವಿಮರ್ಶಕರಿಗೂ ಅತಿ ಅಗತ್ಯ ಎನ್ನುವ ಅವರು "...ಬೆಲೆಗಾಣ್ಕೆಯಲ್ಲಿಯೂ ಇದೇ ಸಂಬಂಧ ಸಾಮಗ್ರಿ: ಸತ್ವ; reference, ವಿಮರ್ಶಕನಿಗೂ ಅದೇ ನೆಲಸು; ಗಣಿ" ಎಂದಿದ್ದಾರೆ.(ವಿ.ಸೀ.ಯವರ ಸೌಂದರ್ಯಲೋಕ, ಲಲಿತಕಲೆಗಳು, ಪು. 392, ಸಂ.: ಕೆ.ವಿ. ಸುಬ್ರಹ್ಮಣ್ಯಂ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, 2015.) ಇವುಗಳ ಜತೆಗೆ ಜಿ.ಎಸ್. ಶಿವರುದ್ರಪ್ಪನವರ ಸೌಂದರ್ಯ ಸಮೀಕ್ಷೆ (1965), ಎಸ್.ಎಲ್. ಭೈರಪ್ಪನವರ ಸತ್ಯ ಮತ್ತು ಸೌಂದರ್ಯ(1966)ಗಳೂ ಪ್ರಕಟಗೊಂಡು ಉಪಯುಕ್ತವಾಗಿವೆ. ಜಿ.ಎಸ್.ಎಸ್. ಅವರು ಸೌಂದರ್ಯ ಮತ್ತು ಸೌಂದರ್ಯ ಶಾಸ್ತ್ರೀಯ ಪರಂಪರೆ ಹಾಗೂ ಸಮಕಾಲೀನತೆಗಳನ್ನು ವಿಶಿಷ್ಟವಾಗಿ ಮುಖಾಮುಖಿಯಾಗಿಸಿದ್ದಾರೆ. ಆ ಗ್ರಂಥದ ಬಹುಮುಖ್ಯ ಬರಹ ವಿಕೃತಿ ಸೌಂದರ್ಯವನ್ನು ಕುರಿತದ್ದು.

ಭೈರಪ್ಪನವರ ಸತ್ಯ ಮತ್ತು ಸೌಂದರ್ಯ (1966) ಕೃತಿಯು ಪರಂಪರೆ ಮತ್ತು ವೈಚಾರಿಕತೆಗಳನ್ನು ಅರಗಿಸಿಕೊಂಡಿದೆ.'ಕನ್ನಡಿ ಮತ್ತು ಜ್ಯೋತಿ' ಕಲಾಸತ್ಯ ಮತ್ತು ವೈಚಾರಿಕ ಸೌಂದರ್ಯ ಬರಹಗಳು ಉಳಿದ ಬರಹಗಳಂತೆಯೇ ಉಪಯುಕ್ತವಾಗಿವೆ.

ಶಿವರಾಮಕಾರಂತರ 'ಕಲೆಯ ದರ್ಶನ', 'ಕಲಾಪ್ರಪಂಚ' ನಮಗೆಲ್ಲರಿಗೂ ದಾರಿದೀಪವಾದ ಪ್ರಕಟಣೆಗಳೇ ಆಗಿವೆ. ಮುಖ್ಯವಾಗಿ 'ಕಲೆಯ ದರ್ಶನ' ಕೃತಿಯಲ್ಲಿ ಕಾರಂತರ ತಾತ್ವಿಕ ನೆಲೆಯ ನೋಟಗಳಿವೆ. 'ಅನುಭವಗಳೂ ಪ್ರತಿಕ್ರಿಯೆಗಳೂ' ಅಧ್ಯಾಯದಲ್ಲಿ ಅವರು: "ಒಂದೇ ವಸ್ತು ಭಿನ್ನ ಪ್ರತಿಕ್ರಿಯೆ", "ದೃಶ್ಯಲೋಕಾನುಭವ", "ಆಕಾರಗಳು", "ಮಾನಸಿಕ ಪರಿಣಾಮ", "ಚಲನೆಯಿಂದ", "ಬಣ್ಣಗಳಿಂದ", "ನೋಡುವ ದಾರಿ", "ರೇಖೆಗಳು", "ಬೆಳಕು-ನೆರಳುಗಳು", "ಕಲಾಸೃಷ್ಟಿ", "ವಿಚಿತ್ರ ವ್ಯಕ್ತಿಗಳು ಕಲಾವಿದರು", "ಶಿಲ್ಪದೊಡನೆ ಸಾಮ್ಯ", "ಪ್ರತಿಮೆಗಳು" ಮೊದಲಾದ ಶೀರ್ಷಿಕೆಗಳಡಿ ಕಲಾವಿದನ ಮನಸ್ಥಿತಿಯನ್ನು ಸ್ಪರ್ಶಿಸಿದ್ದಾರೆ. ಮತ್ತೊಂದೆಡೆ ಪುಟ 96-97ರಲ್ಲಿ "ಕಲಾಸೃಷ್ಟಿಯ ಗಳಿಗೆ"ಯನ್ನು ದರ್ಶಿಸಿದ್ದಾರೆ."ಸೌಂದರ್ಯದರ್ಶನ ಸಾಲದೇ" ಶೀರ್ಷಿಕೆಯಡಿ "ಇಲ್ಲಿ ಸತ್ಯವು ಹೊರಗಣ ನೋಟಕ್ಕೆ ಅಸಹ್ಯವೆನ್ನಿಸಿದರೂ ಅದೂ ಸೌಂದರ್ಯವೇ" ಎನ್ನುತ್ತಾರೆ.ಅನೈತಿಕ ವಸ್ತುವೂ ಕಲಾಕೃತಿಯಾಗಬಲ್ಲದು ಎಂಬ ನೋಟ ಗಮನಾರ್ಹ.

ಸೌಂದರ್ಯ, ಸಂಸ್ಕೃತಿ ಮತ್ತು ಡಿ.ವಿ.ಜಿ.

ಡಿ.ವಿ.ಜಿ.ಯವರ ಸಾಹಿತ್ಯ ಸೃಷ್ಟಿಯಲ್ಲಿ ಕಲಾಸೌಂದರ್ಯವು ಇದೆ. ಹಾಗಾಗಿಯೇ ಅವರು ಕಲೆಗಳ ಸಂಬಂಧಿತ ಜೀವನ ಸೌಂದರ್ಯವನ್ನು ಪ್ರತಿಪಾದಿಸಿದರು.

ಡಿ.ವಿ.ಜಿ.ಯವರು ಆನಂದಕುಮಾರಸ್ವಾಮಿಯವರ ಸಮಕಾಲೀನರು. ಮಧ್ಯಕಾಲೀನ ದೈವಿಕ ಸೌಂದರ್ಯಶಾಸ್ತ್ರೀಯತೆಗೆ ತೆರೆದುಕೊಂಡಿದ್ದವರು.ಅವರ 'ಸಾಹಿತ್ಯ ಮತ್ತು ಜೀವನ ಸೌಂದರ್ಯ'ದಲ್ಲಿ ಒಂದೆಡೆ "ಸೌಂದರ್ಯವೆಂಬುದೇನು?"ಎಂಬ ಪ್ರಶ್ನೆಗೆ ಉತ್ತರಿಸುತ್ತಾ, "...ಸೌಂದರ್ಯವು ಮನಸ್ಸನ್ನು ಹಿಡಿದು ನಿಲ್ಲಿಸಿ ಕರಗಿಸಿ, ತಿರುಗಿಸುವ ಶಕ್ತಿ. ಈ ಶಕ್ತಿಯಿರುವುದು ಬಹಿರಿಂದ್ರಿಯಗಳಿಗೆ ಗೋಚರಿಸುವ ರೂಪ ಶಬ್ದಗಳಲ್ಲಿ ಮಾತ್ರವೇ ಅಲ್ಲ. ನಮ್ಮ ಅಂತರಂಗಕ್ಕೆ ತಿಳಿದು

ಬರುವ ಜೀವನವರ್ತನೆ-ವಿಲಾಸಗಳಲ್ಲಿಯೂ ಆ ಶಕ್ತಿಯಿರುತ್ತದೆ" ಎನ್ನುತ್ತಾರೆ.

ಸೌಂದರ್ಯ ತ್ರಿಕೂಟದಲ್ಲಿ ನಮ್ಮ ಪೂರ್ವಿಕರ ಸೌಂದರ್ಯಾಭಿರುಚಿಯ ಬಗ್ಗೆ ಚಿಂತಿಸಿದ್ದಾರೆ. ದೇವಾಲಯಗಳ ಮೂರು ರೀತಿಯ ಸೌಂದರ್ಯ ಸಮ್ಮೇಳನವನ್ನು ವಿವರಿಸುತ್ತಾರೆ."ಸೃಷ್ಟಿ ಸೌಂದರ್ಯ, ಕಲಾಕಲ್ಪಿತ ಸೌಂದರ್ಯ ಮತ್ತು ಜೀವ ಸಂಸ್ಕಾರ ಸೌಂದರ್ಯ – ಈ ಸೌಂದರ್ಯ ತ್ರಿಕೂಟವೇ ನಮ್ಮ ಪೂರ್ವಿಕರ ಪರಮಧ್ಯೇಯದ ಪ್ರತಿಬಿಂಬ" ಎಂದು ದೈವಿಕವಾಗಿ ವಿವರಿಸಿದ್ದಾರೆ.

ಇಂತಹ ವಿಶಿಷ್ಟ ದೃಶ್ಯಕಲಾ ಸಾಹಿತ್ಯ ಪರಂಪರೆಗೆ ನಮ್ಮ ಸಂದರ್ಭದ ಹಲವರು ತಮ್ಮದೇ ಆದ ರೀತಿಯಲ್ಲಿ ಕಲಾಸಾಹಿತ್ಯ ಸೃಷ್ಟಿಗೆ ಕಾರಣರಾಗಿದ್ದಾರೆ.ಪಿಆರ್‌ಟಿ, ಎಸ್. ಕೆ.ರಾಮಚಂದ್ರರಾವ್, ಬಿ.ಪಿ.ಬಾಯರಿ, ಎಂ.ಎಚ್.ಕೃಷ್ಣಯ್ಯ, ಎನ್. ಮರಿಶಾಮಾಚಾರ್, ಚಿ.ಸು. ಕೃಷ್ಣಸೆಟ್ಟಿ, ಅ.ಲ. ನರಸಿಂಹನ್, ಜಿ. ಜ್ಞಾನಾನಂದ, ಎಚ್.ಎ.ಅನಿಲ್‌ಕುಮಾರ್, ರವಿಕುಮಾರ್ ಕಾಶಿ, ಡಾ.ಆರ್.ಗಣೇಶ್ (ಕಲಾಕೌತುಕ), ಕೆ.ಎಸ್. ಶ್ರೀನಿವಾಸಮೂರ್ತಿ, ಡಿ.ಎ. ಉಪಾಧ್ಯ, ಶಿವಾನಂದ ಬಂಟನೂರ, ಹರಿಹರಪ್ರಿಯ, ಆರ್ಯ, ಎಸ್.ಸಿ.ಪಾಟೀಲ್, ಮೊದಲಾದವರು ಇಲ್ಲಿ ನೆನಪಾಗುತ್ತಾರೆ.ಇವರಲ್ಲಿ ಬಹುತೇಕರು ಬರೆಯುವಿಕೆಯ ಹುಚ್ಚನ್ನು ಹಚ್ಚಿಕೊಂಡವರು; ಇವರಲ್ಲಿ ಕೆಲವರು ಅಪರೂಪಕ್ಕೆ ತೀವ್ರತೆಯಿಂದ ಬರೆಯುವವರೂ ಇದ್ದಾರೆ.ಈಚೆಗೆ ಕೆಲವು ವರ್ಷಗಳಿಂದ ಪ್ರೀತಿಯಿಂದ ಬರೆಯಲಾರಂಭಿಸಿರುವ ಹತ್ತಾರು ಯುವ ಲೇಖಕ/ಲೇಖಕಿಯರೂ ನಮ್ಮ ಮುಂದೆ ಇದ್ದಾರೆ.

1930ರಲ್ಲಿಯೇ ಬೆಂಗಳೂರಿನ ಕಲಾಮಂದಿರದ ಸುಬ್ಬರಾಯರ ಸಂಪಾದಿತ 'ಕಲಾ' ಪತ್ರಿಕೆಯಲ್ಲಿ ಕಲಾ ಪ್ರದರ್ಶನ ಕುರಿತ ಬರಹಗಳಿವೆ. ನಾರಾಯಣ ಸಂಗಮರು ಶಾಂತಿನಿಕೇತನದಿಂದ ಕಲಿತು ಬಂದವರು.ಕನ್ನಡದ ಪತ್ರಿಕೆಗಳಿಗೆ ಆಗಾಗ ಬರೆಯುತ್ತಿದ್ದರು. ಎಂ.ಎಸ್. ನಂಜುಂಡರಾವ್ ಅಂತಹ ಬರಹವೊಂದನ್ನು ನನಗೆ ತೋರಿಸಿದ್ದರು, ಇರಲಿ.

ಬಹುಮುಖ್ಯವಾಗಿ ಮೈಸೂರಿನ ಚಾಮರಾಜ ಕಲಾಶಾಲೆಯಲ್ಲಿ ಕಲಿತ ಬಿ.ವಿ.ಕೆ.ಶಾಸ್ತ್ರಿಯವರ 1954ರಲ್ಲಿ ದಸರಾ ಕಲಾಪ್ರದರ್ಶನದ ಪರಿಚಯ ರೂಪದ ಬರಹ ಪ್ರಜಾವಾಣಿಯಲ್ಲಿ ಪ್ರಕಟವಾಯಿತು. 1959ರಿಂದ ಬೆಂಗಳೂರಿನಲ್ಲಿ ನೆಲೆಸಿ ಅವರು ಸಂಗೀತ, ಚಿತ್ರ, ಶಿಲ್ಪ, ನೃತ್ಯಗಳ ಬಗ್ಗೆ 'ಕಲಾರಂಗ' ಎಂಬ ಅಂಕಣದಲ್ಲಿ ಬರೆಯಲಾರಂಭಿಸಿದರು.ಮುಂದೆ ಅವರು ನಮ್ಮ ಬಹುದೊಡ್ಡ ವಿಮರ್ಶಕರಾಗಿ ಇಡೀ ಭಾರತದಲ್ಲಿ ಪರಿಚಿತರಾಗಿದ್ದರು.ಅವರ 'ಕಲೆಯ ಗೊಂಚಲು' (1994, ಕನ್ನಡ ಪುಸ್ತಕ ಪ್ರಾಧಿಕಾರ) ಸಂಗೀತ, ನೃತ್ಯ, ಇತರ ಕಲೆಗಳನ್ನು ಒಳಗೊಂಡಿದೆ; 35 ಬರಹಗಳಿವೆ. ಚಿತ್ರಕಲೆಯ ಕುರಿತು 12 ಬರಹಗಳಿವೆ. ಪಿಕಾಸೋ, ಅರ್‌ನವಾಜ್ – ಅಳಿದ ಕಲಾವಿದರ ಒಂದು ನೆನಪು ಕೂಡ.

ದೃಶ್ಯಕಾವ್ಯ-ಬೇಂದ್ರೆ, ಪಾವಂಜೆ ಅದೃಷ್ಟ ಒಲಿಯದ ಕಲಾವಿದ, ಜೀವಿಗಳ ಮೂಲರೂಪದ ಅನ್ವೇಷಕ ಎಸ್.ಜಿ. ವಾಸುದೇವ್, ಆರ್.ಎಸ್. ನಾಯ್ಡು, ಸಲ್ವೆಡಾರ್ ಡಾಲಿ – ಅಂತರಂಗದ ದರ್ಶನ, ಸಾಂಪ್ರದಾಯಿಕ ಕಲೆ; ಬೆರಗು, ಬೆಡಗು, ಇತ್ಯಾದಿ ಬರಹಗಳು ಗಮನಾರ್ಹ. ಕೆಲವು ಪುಟ್ಟ 'ಟಿಪ್ಪಣಿ/note' ಗಳಂತಹ ಬರಹಗಳಾದರೆ ಕೆಲವು ದೀರ್ಘವಾಗಿವೆ. ಅಂತಹ ಒಂದು ದೀರ್ಘ ಬರಹ ಪಾವಂಜೆಯವರನ್ನು ಕುರಿತ ಅಂತಿಮ ಸಾಲುಗಳಲ್ಲಿ "ಜರ್ಮನಿಯಲ್ಲಿ ಕಲಾಶಿಕ್ಷಣ ಪಡೆದ ಪಾವಂಜೆ ಜೀವನಕ್ಕಾಗಿ ತಾವು ಕನಸಿನಲ್ಲಿಯೂ ಕಾಣದ ಉದ್ಯೋಗವನ್ನು ಹಿಡಿಯಬೇಕಾಯಿತು.

ಅದು–ಗಣೇಶ್ ಬೀಡಿಯ ಏಜಂಟರಾಗಿ–ತಮ್ಮ ಚಿಂತನೆ ನೋವು ನಿರಾಸೆಗಳನ್ನು ತಮ್ಮಲ್ಲಿಯೇ ಅಡಗಿಸಿಕೊಂಡು 3.9.1965ರಂದು ನಿಧನರಾದರು" ಎಂದು ಮುಕ್ತಾಯ ಮಾಡಿದ್ದಾರೆ.ಈ ವಿವರಗಳಿಗೆ ಮೊದಲು ಹಲವು ಕೌತುಕಮಯ ಕಲಾನೋಟಗಳಿವೆ.

ಆ ಹೊತ್ತಿಗೆ ಎಸ್.ಎನ್. ಚಂದ್ರಶೇಖರ್ ಸಂಯುಕ್ತ ಕರ್ನಾಟಕದಲ್ಲಿ ಕಲಾಪ್ರದರ್ಶನಗಳ ಬಗ್ಗೆ ಬರೆಯುತ್ತಿದ್ದರು.ಅಸಾಮಾನ್ಯ ಪ್ರತಿಭಾಸಂಪನ್ನರು. ಹಲವು ಗಣನಿಯ ಪುಸ್ತಕಗಳನ್ನು ಬರೆದು ಸಂಪಾದಿಸಿದ್ದಾರೆ. ಅವರ ಇಂಗ್ಲಿಷ್ ಭಾಷಾಜ್ಞಾನ ಬಹುಷಃ ನಮ್ಮ ಸಂದರ್ಭದ ಅತ್ಯುತ್ತಮ ಮಟ್ಟದ್ದು; ಹಾಗೆಯೇ ಅವರ ಕನ್ನಡ ಭಾಷಾ ಪ್ರಯೋಗವೂ ಗಣನೀಯ: ವಿಶಿಷ್ಟ. ಲಲಿತಕಲಾ ಅಕಾಡೆಮಿಯ 'ವಿಕೃತಿ' ಎಂಬ ವಿಶಿಷ್ಟ ಸೌಂದರ್ಯ ಮೀಮಾಂಸೆಯ ಪುಸ್ತಕಕ್ಕೆ "ಶಿಲ್ಪಕಲೆಯ ವಿಕೃತಿ ಸೌಂದರ್ಯ" ಕುರಿತ ಬರಹವು ನನ್ನಿಂದ ಮೂಡಿಬರಲು ಅವರೇ ಕಾರಣ. ಆ ಪುಸ್ತಕದಲ್ಲಿ ನನ್ನದೇ ಅಲ್ಲದೆ ಅ.ಲ. ನರಸಿಂಹನ್, ಕೃಷ್ಣಸೆಟ್ಟಿಯವರುಗಳ ಬರಹಗಳೂ ಇವೆ; ಅದೊಂದು ಅಪರೂಪದ ಸಂದರ್ಭ.

ನಂತರದಲ್ಲಿ ಪ್ರೊ.ಎಂ.ಎಚ್. ಕೃಷ್ಣಯ್ಯ ನನ್ನೊಂದಿಗೆ ಚಿ.ಸು. ಕೃಷ್ಣಸೆಟ್ಟಿ, ಕೆ.ಎಸ್. ಶ್ರೀನಿವಾಸಮೂರ್ತಿ, ಅ.ಲ. ನರಸಿಂಹನ್, ಮೊದಲಾದವರ ಬರಹಗಳು ಪತ್ರಿಕೆ, ಪುಸ್ತಕಗಳಲ್ಲಿ ಹೆಚ್ಚು ಹೆಚ್ಚು ಕಾಣಿಸಿಕೊಂಡವು.ಸಿನಿಮಾ ಸಾಹಿತ್ಯ ಸೃಷ್ಟಿಯೂ ಡಾ. ವಿಜಯಾ, ರಘುನಾಥ ಚ.ಹಾ. ಎನ್. ವಿಶಾಖಾ, ಸಂದೀಪ್ ನಾಯಕ್, ಚೇತನ್ ನಾಡಿಗೇರ್ ಮೊದಲಾದವರಿಂದ 2016ರ ಸಂದರ್ಭದಲ್ಲಿ ಸಶಕ್ತವಾಗಿ ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದೆ.

ಈ ಸಂದರ್ಭದ ದೃಶ್ಯಕಲಾ ಇತಿಹಾಸ ಮತ್ತು ವಿಮರ್ಶೆಯ ಕೆಲವು ಮುಖ್ಯ ಕೃತಿಗಳು.

ಕೆ.ವಿ. ಸುಬ್ರಹ್ಮಣ್ಯರವರ 'ಕಲಾಸಂವೇದನೆಯ ಒಳನೋಟಗಳು' (1991), ಚಿ.ಸು. ಕೃಷ್ಣಸೆಟ್ಟಿಯವರ 'ವರ್ಣಾವರಣ' (2001), ಚಿತ್ರಚಿತ್ತ (2000), ಅ.ಲ. ನರಸಿಂಹನ್‌ರವರ 'ಆಲೇಖ್ಯ' (1999), ಎಂ.ಎಚ್.ಕೃಷ್ಣಯ್ಯನವರ 'ಕಲಾಸಂಸ್ಕೃತಿ' (2012), ಎಚ್.ಎ.ಅನಿಲ್‌ಕುಮಾರ್‌ರವರ 'ನೋಟಪಲ್ಲಟ', ರವಿಕುಮಾರ್ ಕಾಶಿಯವರ 'ಕಣ್ಣೆಲೆ', ಡಾ.ಆರ್.ಗಣೇಶ್‌ರವರ 'ಕಲಾಕೌತುಕ', ಕೆ.ಎಸ್. ಶ್ರೀನಿವಾಸಮೂರ್ತಿಯವರ 'ಕಣ್ಣಕಾಣಿಕೆ', ಡಿ.ಎ. ಉಪಾಧ್ಯೆಯವರ 'ಪಾಶ್ಚಾತ್ಯ ದೃಶ್ಯಕಲಾ ಮೀಮಾಂಸೆ' ಹಾಗೂ ಶಿವಾನಂದ ಬಂಟನೂರರ 'ದೃಶ್ಯ ಪದದೃಶ್ಯ' (2013) ಮೊದಲಾದ ಪುಸ್ತಕಗಳು ಕನ್ನಡ ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆಗಳ ಒಳನೋಟಗಳಿಗಾಗಿ ಉಪಯುಕ್ತ ಪುಸ್ತಕಗಳಾಗಿ ಕಾಣುತ್ತವೆ.

ಕಲಾವಿಮರ್ಶೆ

ಬಹುತೇಕರಲ್ಲಿ ಒಂದು ನಂಬಿಕೆ ಇದೆ; ಕಲೆಯ ವಿಮರ್ಶೆಗೆ ನಿರ್ದಿಷ್ಟ ಮಾನದಂಡಗಳಿವೆ ಎಂಬುದೇ ಅದು.ಆದರೆ ಹಾಗೆ ಇಲ್ಲ. ಆದರೆ ಕಾಲಕಾಲಕ್ಕೆ ಹಲವರು ವಿಮರ್ಶಿಸಿದ ರೀತಿಗಳು ಇಂದು ನಮ್ಮ ಮುಂದೆ ಇವೆ. ಅವು ಆ ಸಂದರ್ಭ ಪ್ರೇರಿತ–ಸೂಚಿತ–ನಿರ್ದೇಶಿತ ಮಾನದಂಡಗಳು ಅಷ್ಟೆ. ಹಾಗೆಯೇ ಅವುಗಳನ್ನು ಬಳಸಿಕೊಂಡು ಬರೆದಿರುವ–ಬರೆಯುತ್ತಿರುವವರ ವಿಮರ್ಶಾ

ಬರಹಗಳೇನೂ ಅತ್ಯುತ್ತಮ ಮಾದರಿಗಳಲ್ಲ. (ಹೆಚ್ಚಿನ ಈ ನೋಟದ ವಿವರಗಳಿಗೆ, ಕನ್ನಡ ಸಾಹಿತ್ಯ ಪರಿಷತ್ತಿನ 'ಲಲಿತಕಲೆಗಳು', ಸಂ. 16, ಸಂ.: ಕೆ.ವಿ. ಸುಬ್ರಹ್ಮಣ್ಯ, ಪುಟಗಳು 429-446 ನೋಡಿ.)

ಭಾರತೀಯ ಪರಂಪರೆಯಲ್ಲಿ, ಸಾಹಿತ್ಯದಲ್ಲಿ ಸೌಂದರ್ಯ ಮೀಮಾಂಸೆ, ಕಾವ್ಯ ಮೀಮಾಂಸೆಗಳಿವೆ; ವಿಮರ್ಶೆಯ ಸೂತ್ರಗಳು ಇಲ್ಲ. ಅಕ್ಷರ ಸಾಹಿತ್ಯಕ್ಕೆ ಸುಮಾರು ಸಾವಿರ ವರ್ಷಗಳ ಇತಿಹಾಸವಿದೆ. ಕಲೆಯ ಇತಿಹಾಸ ಮತ್ತು ವಿಮರ್ಶೆಗಳಿಗೆ ಸುಮಾರು 100 ವರ್ಷಗಳ ಇತಿಹಾಸವಿದೆ. ಹಾಗಾಗಿ ಕಲಾವಿಮರ್ಶೆಯು ಒಂದು ಶಿಸ್ತಾಗಿ ಕಾಣಿಸಿಕೊಂಡದ್ದು ಕೆ.ಜಿ. ಸುಬ್ರಮಣಿಯನ್‌ರವರು ಹೇಳಿರುವಂತೆ, ``...is a fairly recent cevelopment on our cultural scene'', ``...which does not go back more than a century'' ಎಂಬ ಮಾತುಗಳು ಗಮನಾರ್ಹ; ಹೌದು. ಇಂದಿನ ನಮ್ಮ ವಿಮರ್ಶೆಗಳು ಕಲಾ ಇತಿಹಾಸದ ಜತೆ ಜತೆಗೇ ಕಾಣಿಸಿಕೊಳ್ಳುತ್ತಿವೆ.

`The Tenth Muse'ನಲ್ಲಿನ ಬರಹವೊಂದರಲ್ಲಿ ಹರ್ಬಟ್ ರೀಡ್ ಕಲಾವಿಮರ್ಶೆಗೆ ನಿರ್ದಿಷ್ಟ ಮಾನದಂಡಗಳಿಲ್ಲ; ಪರಿಪಕ್ವ ವಿಮರ್ಶಕರೂ ಇಲ್ಲ ಎಂದಿರುವುದು ನೆನಪಾಗುತ್ತಿದೆ.

1973ರಲ್ಲಿ ಪ್ರಕಟವಾದ ನ್ಯೂಯಾರ್ಕಿನ ಗ್ರಿಗೋರಿ ಬ್ಯಾಟ್‌ಕಾಕ್ ತನ್ನ `The New Art' a Ctitical Anthology ಪುಸ್ತಕದ ಪ್ರಾರಂಭದಲ್ಲಿ ಹೇಳಿರುವ ``Today's art critic is beginning to seem almost as essential to the development indded the identification of art as the artist himself'' ಎಂಬ ಮಾತುಗಳನ್ನು ಕೆ.ಜಿ. ಸುಬ್ರಮಣಿಯನ್ ತಮ್ಮ moving focusನಲ್ಲಿ ಉದ್ಧರಿಸುತ್ತಾರೆ; ಒಪ್ಪಿಕೊಳ್ಳುತ್ತಾರೆ, ಇರಲಿ.ನಮ್ಮ ಕಲಾವಿಮರ್ಶೆ ಸರ್ವಶ್ರೇಷ್ಠ, ಪೂರ್ವಗ್ರಹಪೀಡಿತವಲ್ಲ ಎಂದು ನಾನು ಹೇಳಲಾರೆ. ಆದರೆ ಸೀಮಿತ ಅವಕಾಶ, ಸಾಧ್ಯತೆಗಳ ನಡುವೆಯೇ ದೊಡ್ಡ ರೀತಿಯ ಕೊಡುಗೆಯನ್ನು (ಇತರ ಭಾರತೀಯ ಭಾಷೆಗಳಿಗೆ ಹೋಲಿಸಿದರೆ) ನೀಡಿದೆ.

ಇಂದು ಇಡೀ ವಿಶ್ವದ ಸಂಪರ್ಕ ನಮಗೆಲ್ಲ ಇದೆ.'ನಮ್ಮ ಮೇಲೆ ಅವರ', 'ಅವರ ಮೇಲೆ ನಮ್ಮ' ಕಲೆಯ 'ಪ್ರಭಾವದ ಆತಂಕ'ದಲ್ಲಿ ಮೂಡಿಬರುತ್ತಿರುವ ಕಲಾಕೃತಿಗಳ ವಿಮರ್ಶೆಗೆ ಸಹಜವಾಗಿಯೇ ಪಶ್ಚಿಮದ ವಿಮರ್ಶೆಯ ಕೆಲವು ಮಾದರಿಗಳನ್ನು ಮಾನದಂಡಗಳನ್ನು ದುಡಿಸಿಕೊಳ್ಳುತ್ತಿರುವುದು ಸಹಜವೇ ಆಗಿದೆ.

ನಮ್ಮ ಪರಂಪರೆಯಲ್ಲಿ ವಿಮರ್ಶೆಗೆ ಸ್ಥಾನ ಏಕೆ ಇಲ್ಲ?

ನಮ್ಮ ಭಾರತೀಯ ಸೌಂದರ್ಯಶಾಸ್ತ್ರದತ್ತ ಗಮನ ಹರಿಸಿದರೆ ವೇದಪೂರ್ವ-ವೇದಕಾಲ ನಂತರದ ಕಲಾಸೃಷ್ಟಿ ಪ್ರಕ್ರಿಯೆಯ ವಿವರಗಳು ದೊರೆಯುತ್ತವೆ (Indian Aesthetics and Aesthetic perspectives.—D.H.L. Sharma, Mansi Prakashan, Bombay). ಭರತನ ನಾಟ್ಯಶಾಸ್ತ್ರ ಆನಂತರದ ಚಿತ್ರಸೂತ್ರ, ಮಾನಸಾರ, ಶಿವತತ್ವ ರತ್ನಾಕರ, ಮಾನಸೋಲ್ಲಾಸಗಳು ಯಾವುವೂ ನಮಗೆ ವಿಮರ್ಶೆಯ ನೇರ ಮಾನದಂಡಗಳನ್ನು ಹೇಳುವುದಿಲ್ಲ. ನಮ್ಮ ಪರಂಪರೆಯಲ್ಲಿ ಕಲೆಯು 'ದೈವೀಕ'ವಾದುದರಿಂದ ಅದನ್ನು ಮತ್ತು ಕಲಾವಿದನನ್ನು ವಿಮರ್ಶಿಸುವ ಪರಂಪರೆಯೂ ಇಲ್ಲ. ಅಲ್ಲಿ/ಅವುಗಳಲ್ಲಿ ಇರುವುದೆಲ್ಲವೂ ಚಿತ್ರ-

ಶಿಲ್ಪಗಳ ಸೃಷ್ಟಿಗೆ ಇರಬೇಕಾದ ನಿಯಮಗಳು. ಕಾಲಮಾನಗಳು, ಬಣ್ಣಗಳ ಸಿದ್ಧತೆ, ಕುಂಚಗಳ ತಯಾರಿಕೆ, ಬಂಗಾರವನ್ನು ಹೇಗೆ ಬಣ್ಣವಾಗಿಸಿ ಲೇಪಿಸಬೇಕು ಇತ್ಯಾದಿ ವಿವರಗಳಿವೆ. ಪ್ರಮಾಣಬದ್ಧತೆ, ಲಕ್ಷಣಗಳ ಕುರಿತು ಹೇಳಲಾಗಿದೆ.

ಆದರೆ ಎಂತಹ ಚಿತ್ರವನ್ನು ಶ್ರೇಷ್ಠವೆನ್ನುತ್ತಾರೆ, ಯಾವುದು ಭೂಷಣ, ಹಾಗೆಯೇ ಎಂಥವರು ಎಂತಹ ಚಿತ್ರವನ್ನು ಮೆಚ್ಚುತ್ತಾರೆ, ಸುಂದರವಾದ ಚಿತ್ರವೆಂದರೆ ಯಾವುದು?ಸಾದೃಶ್ಯದ ಪ್ರಾಮುಖ್ಯತೆ, ಎಂತಹ ರೂಪವು ಉತ್ತಮ, ಎಂತಹ ರೂಪವು ಅಧಮ ಎಂಬ ಅಂಶಗಳು ರೂಪನಿರ್ಮಾಣ ಅಧ್ಯಾಯದಲ್ಲಿ (ಚಿತ್ರಸೂತ್ರ) ಹೇಳಲಾಗಿದೆ. ನವರಸಗಳು, ಚಿತ್ರದೋಷಗಳು, ಚಿತ್ರದ ಗುಣಗಳು, ಅಯೋಗ್ಯ ಚಿತ್ರದ ಲಕ್ಷಣಗಳು, ಹಾಗೆಯೇ, ಅರಿತ ಚಿತ್ರಕಾರ, ನುರಿತ ಚಿತ್ರಕಾರನ ಲಕ್ಷಣಗಳೂ ಇವೆ. ಆದರೆ ಈ ಎಲ್ಲ ಅಂಶಗಳು, ಸೂಚನೆಗಳು, ನಿಯಮಗಳು ಸಂಪ್ರದಾಯ ಚಿತ್ರಕಲೆಗೆ ಪೂರಕವಾಗಿವೆ. ಈಗ ನಾವು ನೋಡುತ್ತಿರುವ, ಸೃಷ್ಟಿಯಾಗುತ್ತಿರುವ ಯಾವುದೇ ನಮ್ಮ ಸಮಕಾಲೀನ ಯಾರದೇ ಕಲಾಕೃತಿಗಳಿಗೆ ಈ ನಿಯಮಗಳು ಸಲ್ಲುವುದಿಲ್ಲ. ಅಂದರೆ ನಮ್ಮ ಸಮಕಾಲೀನ ಕಲಾವಿಮರ್ಶೆಯ ಸಂವೇದನಾಶೀಲತೆ, ರೂಪ, ರೇಖೆ, ಸಂಯೋಜನೆಗಳು 'ಇಂದಿನ' ನಮ್ಮದೇ ಆದ ನೋಟಗಳಿಂದ ನೋಡಲ್ಪಡುತ್ತಿವೆ.

ಇಂದು ನಮ್ಮ ಪರಂಪರೆಯೇ ಅಲ್ಲದೇ ಹೊರಗಿನ-ಒಳಗಿನ ಪ್ರಭಾವಗಳ ಕಸಿಯೂ ಆಗಿದೆ, ವಿಶಿಷ್ಟ ಒಳನೋಟಗಳೂ ನೋಡಲ್ಪಟ್ಟಿವೆ. ಈ ಹಿನ್ನೆಲೆಯಲ್ಲಿ ಕನ್ನಡ ಕಲಾ ಇತಿಹಾಸ ಮತ್ತು ವಿಮರ್ಶೆಗಳು ಇನ್ನಿತರ ಭಾರತೀಯ ಭಾಷೆಗಳಿಗಿಂತಲೂ ಉತ್ತಮ ಸ್ಥಾನ ಹೊಂದಿವೆ. ಆದರೂ ನಮ್ಮ ಬಹುತೇಕ ಲೇಖಕರಿಗೆ,

1. ವಿಶ್ವಾತ್ಮಕದೃಷ್ಟಿ,
2. ಸುತ್ತಲಿನ ಎಲ್ಲದರ ಪ್ರಜ್ಞೆ,
3. ಕಲಾಸೃಷ್ಟಿ, ತಂತ್ರ, ಮಾಧ್ಯಮ ಇತ್ಯಾದಿಗಳ ಅನುಭವ,
4. ಬಹುಮುಖ್ಯವಾಗಿ ನಮ್ಮ ಪರಂಪರೆಯ ಕಲೆಗಳ ನಿಯಮಗಳ ಪ್ರಜ್ಞೆಗಳ ಅಗತ್ಯ ಇದೆ.

ಮತ್ತು ಹೀಗಾದಾಗ ನಮ್ಮ ವಿಮರ್ಶಕರ ಬರಹಗಳು ಗಣನೀಯವಾಗಿ ಮೂಡಿರುವ ಸಾಧ್ಯತೆಗಳಿವೆ.

ದೃಶ್ಯ ಕಲಾಸಾಹಿತ್ಯ ಪುಸ್ತಕಗಳು ರೂಪುಗೊಳ್ಳುವ ಕಲ್ಪನೆಯ ರಾಜಕಾರಣವು ಕೌತುಕಮಯ.

ಬರೀ text : ಚಿತ್ರಕಲೆ/ಅ.ನ.ಕೃ.

ಭಾರತೀಯ ಚಿತ್ರಕಲೆ: ಕಾರಂತ/ವೆಂಕಟಪ್ಪ, ಕಪ್ಪು ಬಿಳುಪು ಚಿತ್ರ, ಪತ್ರ, ಜಗಳ, ಕಲಾಪ್ರಪಂಚ, ಕರ್ನಾಟಕದ ಚಿತ್ರಕಲೆ, ಚಿತ್ರಗಳ ವೈಭವ.

ಮರಿಶಾಮಾಚಾರ್‌ರವರ ಸುಂದರ ಸೃಷ್ಟಿ: ವಾಸುದೇವ್ 'ವೃಕ್ಷ.'

ಎಂ.ಎಸ್. ಮೂರ್ತಿಯವರ 'ದೃಶ್ಯ' : text ಬಹುತೇಕ ಮಾಯ?! ಅ.ನ.ಕೃ. ಚಿತ್ರಕಲೆ/ ಮೂರ್ತಿಯವರ ಅಪೂರ್ವ ಛಾಯಾಚಿತ್ರ ಕೃತಿಗಳ 'ದೃಶ್ಯ' ಪುಸ್ತಕ ಸೃಷ್ಟಿ, ವೈರುಧ್ಯಮಯ ದೃಷ್ಟಿ, ಧೋರಣೆಗಳನ್ನು ಹೊಂದಿವೆ. ಇದೊಂದು ವಿಶಿಷ್ಟ ಸಂದರ್ಭ.

ಕನ್ನಡ ದೃಶ್ಯಕಲಾ ಸಾಹಿತ್ಯ ಪ್ರಕಾರಗಳು

ಕನ್ನಡದ ದೃಶ್ಯಕಲಾ ಸಾಹಿತ್ಯ ಪ್ರಕಾರದಲ್ಲಿ ಹಲವು ನೆಲೆಯ ಪುಸ್ತಕಗಳು ಪ್ರಕಟವಾಗಿವೆ. ಅವುಗಳನ್ನು

1. ಪುರಾತತ್ವ / ಆದಿಮಕಲೆ / ಶೋಧನೆ
2. ಕಲಾ ಇತಿಹಾಸ / ಕಲಾವಿಮರ್ಶೆ
3. ಜೀವನಚಿತ್ರ / Biographical ಆದುವು
4. ದೃಶ್ಯಕಲಾ ಪತ್ರಿಕೆಗಳು
5. ಕನ್ನಡದ ಪತ್ರಿಕೆಗಳು
6. ವಿಶ್ವವಿದ್ಯಾಲಯಗಳ ಮಹಾಪ್ರಬಂಧಗಳು
7. ಪ್ರವಾಸ ಸಾಹಿತ್ಯ
8 ಅನುವಾದಿತ ಸಾಹಿತ್ಯ

ಇತ್ಯಾದಿ ವಿಭಾಗಗಳಲ್ಲಿ ನೋಡಬಹುದು.

1. ಪುರಾತತ್ವ ಶೋಧನೆ / ಆದಿಮಕಲೆ

ಅ. ಸುಂದರರವರ 'ಕರ್ನಾಟಕ ಪ್ರಾಗಿತಿಹಾಸ ಕಾಲದ ಕಲೆ' (1994)

ಕೆ.ವಿ. ಸುಬ್ರಹ್ಮಣ್ಯಂ, 'ಶಿಲಾಶ್ರಯಕಲೆಯ ದೃಶ್ಯಧ್ಯಾನ', 'ಆದಿಮದೃಶ್ಯ ಸೌಂದರ್ಯದ ಆಧಿಪತ್ಯ' (ಹೊಸ ಅನ್ವೇಷಣೆಯಾದ ಮೂರು Rock art siteಗಳ ವಿವರಗಳಿವೆ).ಯಾದಪ್ಪ ಪರದೇಶಿ, ಲಕ್ಷ್ಮಣ್ ತೆಲಗಾವಿ ಇನ್ನೂ ಹಲವರ ಪ್ರಕಟಣೆಗಳೂ ಇವೆ.

2. ಕಲಾ ಇತಿಹಾಸ

ಶಿವರಾಮಕಾರಂತರ 'ಕಲಾ ಪ್ರಪಂಚ', ಮರಿಶಾಮಾಚಾರ್‌ರವರ ಸಂಪಾದಿತ 'ಕಲಾಇತಿಹಾಸ', ಕಲಾಕೋಶ, ಎಂ.ಎಚ್. ಕೃಷ್ಣಯ್ಯ ಮತ್ತು ವಿಜಯಾರವರ ಸಂಪಾದಿತ ನವಕರ್ನಾಟಕ ಪ್ರಕಾಶನದ 'ಕರ್ನಾಟಕ ಕಲಾದರ್ಶನ', ಕೆ.ವಿ. ಸುಬ್ರಹ್ಮಣ್ಯಂ ಸಂಪಾದಿತ, 2015, ಕನ್ನಡ ಸಾಹಿತ್ಯ ಪರಿಷತ್ತಿನ 'ಲಲಿತಕಲೆ'ಗಳ ಸಂಪುಟಗಳು, ಪಿ.ಆರ್.ತಿಪ್ಪೇಸ್ವಾಮಿಯವರ 'ಕಲೋಪಾಸಕರು' (1980) ಮತ್ತು ನಮ್ಮ ಇತರ ಲೇಖಕರ ಬಹುತೇಕ ಎಲ್ಲಾ ಪುಸ್ತಕಗಳನ್ನೂ ಈ ಹಿನ್ನೆಲೆಯಲ್ಲಿ ನೋಡಬಹುದು. ಕೆ.ವಿ.ಎಸ್. ಅವರ 'ಕನ್ನಡ ಶಿಲ್ಪಕಲೆಯ ಸಮಕಾಲೀನ ದೃಶ್ಯ', 'ಮುಖಗಳೊಂದಿಗೆ ಮುಖಾಮುಖಿ', 'ಇನ್‌ಸ್ಟಾಲೇಷನ್ ಕಲಾಪ್ರಪಂಚ' ಪುಸ್ತಕಗಳು ಇತಿಹಾಸ ಕೇಂದ್ರಿತವಾಗಿವೆ.

3. ಜೀವನಚಿತ್ರಗಳು / Biographical ಆದ ಪುಸ್ತಕಗಳು

ಅಕಾಡೆಮಿಗಳ ಎಲ್ಲ/ಮಾನೋಗ್ರಾಮ್ ಪರಿಚಯಾತ್ಮಕ ಪುಸ್ತಕಗಳು, ಮರಿಶಾಮಾಚಾರ್‌ರವರ 'ಸೃಜನಶೀಲರು' ಗಮನಾರ್ಹ.ಬಹಳ ಮುಖ್ಯವಾಗಿ ಪಿ.ಆರ್.ತಿಪ್ಪೇಸ್ವಾಮಿಯವರ 'ಕಲೋಪಾಸಕರು' ನೆನಪಾಗುತ್ತದೆ. ಕು.ಶಿ. ಹರಿದಾಸಭಟ್ಟರ ಕಟ್ಟಿಂಗೇರಿ ಕೃಷ್ಣ ಹೆಬ್ಬಾರ್,

ಎಸ್.ಕೆ.ಆರ್.ರವರ ಕಲಾವಿದ ವೆಂಕಟಪ್ಪ – ಕೆ.ವಿ.ಎಸ್. ಅವರ ವೆಂಕಟಪ್ಪ ಸಮಕಾಲೀನ ಪುನರವಲೋಕನ.

4. ಆತ್ಮಚರಿತ್ರೆ

(1) ಶಿವರಾಮ ಕಾರಂತ, (2) ಎಂ.ಟಿ.ವಿ. ಆಚಾರ್ಯ, (3) ವಿ.ಜಿ. ಅಂದಾನಿ ('ನೆನಪಿನ ನೆರಳಲ್ಲಿ', 2015.), (4) ಕನಕಾಮೂರ್ತಿ, (5) ಅನಿಲ್‌ಕುಮಾರ್ (ಶಾಂತಿನಿಕೇತನ ಎಂಬ ಮತ್ತೊಬ್ಬನದಲ್ಲದ ಆತ್ಮಚರಿತ್ರೆ?). ಇಲ್ಲಿ ಎಂ.ಟಿ.ವಿ. ಆಚಾರ್ಯರ 'ಕಲೆ ಮತ್ತು ನಾನು' ಆತ್ಮಚರಿತ್ರೆಯು ಅವರ ಕುರಿತ ವಿಶಿಷ್ಟ ಒಳನೋಟಗಳನ್ನು, ಸಂವೇದನಾಶೀಲತೆಯನ್ನು ಬಿಂಬಿಸುತ್ತದೆ.

5. ದೃಶ್ಯಕಲೆಯ ಪತ್ರಿಕಾ ಸಾಹಿತ್ಯವೂ ಕಲಾ, ರುಜುವಾತು, ಶೂದ್ರ, ಸಂಕುಲ, ಅಂಕಣ, ಕಲಾವಿಕಾಸ, ಅನ್ವೇಷಣೆ, ಸಂಚಯ, ಕ್ಯಾನ್‌ವಾಸ್, ಆರ್ಟ್‌ಗಿಲ್ಡ್ (ಧಾರವಾಡ), ಕಲ್ಬುರ್ಗಿಯ ಆರ್ಟ್‌ಗುಲ್, ದೃಶ್ಯಬೆಳಕು (2015) (ಕಲ್ಬುರ್ಗಿಯಿಂದ) ಅಕೆಡೆಮಿಯ ಕಲಾವಾರ್ತೆ.

6. ಕನ್ನಡದ ದಿನಪತ್ರಿಕೆಗಳ ಕೊಡುಗೆ ಕಲಾಸಾಹಿತ್ಯಕ್ಕೆ ಬೆಲೆಬಾಳುವ ಕಾಣ್ಕೆ ನೀಡಿದೆ. ನಾವೆಲ್ಲರೂ ಈ ದೃಷ್ಟಿಗೆ ಉದಾಹರಣೆಗಳೇ ಆಗಿದ್ದೇವೆ; ಬಿ.ವಿ.ಕೆ., ನಾರಾಯಣ ಸಂಗಮ, ಇಬ್ಬರು ಅಷ್ಟೆ. ಹೊರಗಿನ ರೋಜರ್ ಫ್ರೈ, ಟಿ.ಜೆ. ಕ್ಲಾರ್ಕ್, ಜಾನ್ ಓನಿಯನ್ಸ್, ಜಾನ್ ರಸ್ಕಿನ್, ಹರ್ಬಟ್ ರೀಡ್‌ರವರುಗಳು ಕ್ರಮವಾಗಿ ಬರ್‌ಲಿಂಗ್‌ಟನ್ ಮ್ಯಾಗಝೀನ್, ಟೈಮ್ಸ್ ಲಿಟೆರರಿ ಸಪ್ಲಿಮೆಂಟ್, ಆರ್ಟ್ ಹಿಸ್ಟರಿ, ಆರ್ಕಿಟೆಕ್ಚುರಲ್ ಮ್ಯಾಗಝೀನ್ ಹಾಗೂ ಬಿ.ಬಿ.ಸಿ.ಯ ಲಿಸನರ್ ಪತ್ರಿಕೆಗಳಲ್ಲಿ ಬರೆದವರು. ಬಿ.ವಿ.ಕೆ.ಯವರ 'ಕಲಾಗೊಂಚಲು', ಕೃಷ್ಣಸೆಟ್ಟಿಯವರ 'ವರ್ಣಾವರಣ', ಪಿ.ಆರ್.ಟಿ.ಯವರ 'ಕಲೋಪಾಸಕರು', ಪತ್ರಿಕಾ ಬರಹಗಳ ಸಂಕಲನಗಳೇ ಆಗಿವೆ. ಆದರೆ 2015ರ ಸಂದರ್ಭದಲ್ಲಿ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಬರೆಯುವ ಲೇಖಕರೊಬ್ಬರ ಬರಹಗಳು ಕನ್ನಡದ ದಿನಪತ್ರಿಕೆಯೇ ಅಲ್ಲದೆ ದೀಪಾವಳಿ ವಿಶೇಷ ಸಂಚಿಕೆಯೊಂದರಲ್ಲಿ ಹಲವು ಕಲಾವಿದ, ಲೇಖಕರ ಹೆಸರಿನಲ್ಲಿ ಪ್ರಕಟವಾಗಿದ್ದೊಂದು ಕಪ್ಪುಚುಕ್ಕೆಯಂತಹ ಸಂದರ್ಭವೇ ಸರಿ. Collaberation ಕಲೆಯ ಅಭಿವ್ಯಕ್ತಿಯಲ್ಲಿ ಕಾಣಿಸಿಕೊಂಡಿರುವಂತೆ ಕಲಾಸಾಹಿತ್ಯ ಬರವಣಿಗೆಯಲ್ಲಿಯೂ ಹುಟ್ಟಿಕೊಳ್ಳುವ ಅಪಾಯದ ಮುನ್ಸೂಚನೆ ಇದೆಂಬಂತೆ ಕಾಣುತ್ತಿದೆ.

7. ಅನುವಾದಿತ ಕಲಾ ಸಾಹಿತ್ಯ, 'ಚಿತ್ರಸೂತ್ರ', 'ಮಾನಸೋಲ್ಲಾಸ', 'ಶುಕ್ರನೀತಿಸಾರ' ಹಾಗೂ 'ಕಾಶ್ಯಪಶಿಲ್ಪಶಾಸ್ತ್ರ', 'ಶಿವತತ್ವ ರತ್ನಾಕರ' ಮೊದಲಾದವು ಇತ್ತೀಚೆಗೆ ಪ್ರಕಟಗೊಂಡಿವೆ.

ಇಂಗ್ಲಿಷ್‌ನಿಂದ ಕನ್ನಡಕ್ಕೆ–

1) ಅನಿಲ್‌ಕುಮಾರ್‌ರವರ ಜಾನ್‌ಬರ್ಜರ್‌ನ 'ನೋಡುವ ಬಗೆಗಳು.'

2) ಕೆ.ಎಸ್. ಶ್ರೀನಿವಾಸಮೂರ್ತಿಯವರ 'ಆಟ ಮಾಟ' (ಮೂಲ: ಕೆ.ಜಿ. ಸುಬ್ರಮಣಿಯನ್).

3) ಎಸ್.ಎಸ್. ಶ್ರೀಮತಿಯವರ ಅನುವಾದ: ರವೀಂದ್ರನಾಥ ಠಾಕೂರರ 'ಕಲೆಯ ಅರ್ಥ' (1988), ಕರ್ನಾಟಕ ಚಿತ್ರಕಲಾ ಪರಿಷತ್ತು.

ಕಣ್ಣು: ಓದುವಿಕೆ; ನೋಡುಗ ಮತ್ತು ನೋಡುವಿಕೆ

ಪರಂಪರೆಯಲ್ಲಿ: ಕಲಾಸೃಷ್ಟಿಕಾರ ಮತ್ತು ನೋಡುಗ/ಒಂದೇ ದೃಷ್ಟಿಯವರು ಆಗಿರುತ್ತಿದ್ದರು (ಆನಂದಕುಮಾರ ಸ್ವಾಮಿಯವರ ಆಕರಗಳು). 'ಅವನೇ ನನ್ನಿಂದ ಮಾಡಿಸುತ್ತಿದ್ದಾನೆ ಎಂದು ಕಲಾವಿದ/ಶಿಲ್ಪಿ ಭಾವಿಸಿದರೆ, ನೋಡುಗನು 'ನಾನು' ಅವನ ಕಣ್ಣಿನಿಂದ ನೋಡುತ್ತಿದ್ದೇನೆ ಎಂದು ನಂಬಿದ್ದನು.'ಸಮರಾಂಗಣ ಸೂತ್ರಧಾರ'ದಲ್ಲಿ 'ಕಣ್ಣಿನ ಮೂಲಕ ಭಾವನೆ' ಎಂದಿದೆ.ಬರ್ಜರ್ `Ways of seeing'ನಲ್ಲಿ ಕಣ್ಣಿನ/ಗಂಡಿನ/ಕಣ್ಣಿನ/ಮನಸ್ಸಿನ ರಾಜಕಾರಣವನ್ನು ಬಿಂಬಿಸಿದ್ದಾರೆ.

ನೋಡುವ ರಾಜಕಾರಣಕ್ಕೆ ಪೂರಕವಾಗಿ ಪಠ್ಯವೇ ಇಲ್ಲದ ಫೋಟೋ ಪ್ರಬಂಧಗಳೂ ಇವೆ; ಎಂ.ಎಸ್. ಮೂರ್ತಿಯವರ 'ದೃಶ್ಯ'–ಪಠ್ಯ ಅದೃಶ್ಯ ಕಲಾ ರಾಜಕಾರಣಕ್ಕೆ ಉದಾಹರಣೆ ಈ ಪುಸ್ತಕ.

ವಿದ್ಯಾರಣ್ಯರ 'ದೃಗ್‌ದೃಶ್ಯವಿವೇಕ'ದಲ್ಲಿ ಮೊದಲನೆಯ ಶ್ಲೋಕವೇ 'ರೂಪವು ನೋಟಕ್ಕೆ ವಿಷಯ; (Object–ಕಾಣಿಸುವ ತತ್ವ) ಕಣ್ಣು ಅಥವಾ ದೃಗಿಂದ್ರಿಯವು ಅದನ್ನು ನೋಡುವುದು; ಆ ದೃಗಿಂದ್ರಿಯವು ತಿಳಿವಳಿಕೆಗೆ ವಿಷಯವೇ, ಅದನ್ನು ನೋಡುವುದು ಮನಸ್ಸು. ಆ ಮನಸ್ಸಿನ ವೃತ್ತಿಗಳೂ ವಿಷಯಗಳೇ, ಅವನ್ನು ಅರಿಯುವುದು ಸಾಕ್ಷೀ.ಈ ಸಾಕ್ಷಿಯು ಮತ್ತೆ ಯಾವುದಕ್ಕೂ ವಿಷಯವಾಗುವುದೇ ಇಲ್ಲ; ಇದು ನೋಡಲ್ಪಡುವುದೇ ಇಲ್ಲ ॥ 1 ॥ ಎಂದು ಪ್ರಾರಂಭವಾಗುತ್ತದೆ.

"ನೀಲಿ ಹಳದಿ ಮೊದಲಾದ ಅನೇಕ ಬಣ್ಣಗಳೂ ಸಣ್ಣದು ದೊಡ್ಡದು ದಪ್ಪದು, ಮೋಟಾದದ್ದು ಉದ್ದನೆಯದು ಎಂಬುವ ಅನೇಕ ಆಕಾರಗಳೂ ಎಲ್ಲವೂ ಕಣ್ಣು ನೋಡುವ ರೂಪಗಳೇ.ಇವು ಬಗೆಬಗೆಯಾಗಿದ್ದರೂ ಇವನ್ನು ನೋಡುವ ಕಣ್ಣಿಗೆ ಇವುಗಳ ನಾನಾತ್ವವು ಅಂಟುವುದಿಲ್ಲ. ಅದು ಒಂದೇ ರೀತಿಯಾಗಿದ್ದುಕೊಂಡೇ ರೂಪಕಗಳನ್ನೂ ನೋಡುತ್ತದೆ ॥ 2 ॥" ಎಂದೂ ಹೇಳಲಾಗಿದೆ.

[ದೃಗ್‌ದೃಶ್ಯವಿವೇಕ, ವಿದ್ಯಾರಣ್ಯ, ಅನು.: ಅನುವಾದಕ(?) ಹೆಸರಿಲ್ಲ.]

ವಿದ್ಯಾರಣ್ಯರ 'ದೃಗ್‌ದೃಶ್ಯವಿವೇಕ'ದಲ್ಲಿ (ವಿಜಯನಗರದ ಪ್ರಾರಂಭದ ಕಾಲ) 36ನೆಯ ಶ್ಲೋಕದಲ್ಲಿ 'ಭೋಗ್ಯರೂಪಂ' ಎಂಬುವ ಪದಪುಂಜವಿದೆ. ಪಂಚಭೂತಗಳಿಂದ ಉಂಟಾದ ಪದಾರ್ಥಗಳ ರೂಪದಲ್ಲಿರುವ ಜಗತ್ತೆಲ್ಲವೂ ಭೋಗ್ಯರೂಪಂ ಎಂದರೆ ಅನುಭವಕ್ಕೆ ಅನುಭಾವ ರೂಪವಾಗಿ ಇದೆ, ಎಂಬ ಅರ್ಥಮೂಲದ ನೋಟವು ಅದು.

ನಾಗಾರ್ಜುನನ ಮೂಲಮಾಧ್ಯಮಿಕ ಕಾರಿಕಗಳಲ್ಲಿ ನೋಡುಗನ ಪ್ರಸ್ತಾಪವಿದೆ. ಪ್ರತಿಸಾರಿಯ ನೋಡುವಿಕೆಯಲ್ಲಿ ಅನುಭವಗಳು ನಿರಂತರ ಪ್ರವಾಹ ರೂಪದಲ್ಲಿ ಬದಲಾಗುತ್ತಿರುತ್ತವೆ. ಈ ನೋಟವು ಇಂದಿನ ಅನುಭವಗಳಿಗೂ ಸೂಕ್ತವಾಗಿವೆ. ನೋಡುಗನ ನೋಟ ಮತ್ತು ಅವನ ಮನೋಭೂಮಿಕೆಯ ಬಗೆಗೆ ಸೂಕ್ಷ್ಮ ನೋಟಗಳಿವೆ. (ಎಸ್. ನಟರಾಜ ಬೂದಾಳುರವರ 'ಬೌದ್ಧದೃಶ್ಯ ಮತ್ತು ಕಾವ್ಯಮೀಮಾಂಸೆ', ಪುಟಗಳು: 222–223, ಲಲಿತಕಲೆಗಳು, ಸಂ.: ಕೆ.ವಿ. ಸುಬ್ರಹ್ಮಣ್ಯಂ, ಸಂಪುಟ: 16, ಕನ್ನಡ ಸಾಹಿತ್ಯ ಪರಿಷತ್ತು, 2015.)

ಭರತನ ನಾಟ್ಯಶಾಸ್ತ್ರ ಮತ್ತು ಓದುಗರು

ಭರತನ ನಾಟ್ಯಶಾಸ್ತ್ರದಲ್ಲಿ ಉಲ್ಲೇಖಿಸಿರುವ ನೋಡುಗರಲ್ಲಿ 1.ಉತ್ತಮ, 2.ಅಧಮ, 3.ಮಧ್ಯಮ ಎಂದು ಎಲ್ಲ ತರದವರೂ ಇರುತ್ತಾರೆ.ಉತ್ತಮರ ಹಾವಭಾವಗಳನ್ನು ಅರಿತುಕೊಳ್ಳುವುದು

ಅಧಮರಿಗೆ ಸಾಧ್ಯವಿಲ್ಲ. ಅವರವರು ತಮತಮಗೆ ಪರಿಚಿತ ವಿಷಯಕ್ಕೆ ಸಂಬಂಧಿಸಿದಂತೆ ಶಿಲ್ಪವನ್ನೋ ವೇಷವನ್ನೋ, ಕೆಲಸವನ್ನೋ, ಮಾತನ್ನೋ, ಹಾವ-ಭಾವಗಳನ್ನೋ ತಿಳಿದುಕೊಳ್ಳುವರು ಎಂದು ಹೇಳಲಾಗಿದೆ.

``...with the composition of any work, this composition is determined by the logic of the theme to be communicated, and not for the comfort of the eye, and if the eye is satisfied, it is because a physical order in the organ of perception corresponds to the rational order present inöwhat ever is intelligible and not because the work of art was for the sake of the eye or ear alone."

– AKS, in 'Beauty and Truth', p. 106
(Christian and Oriental Philosophy of Art)

ಎಲ್ಲ ಕಲೆಗಳು ಎಲ್ಲರಿಗೂ ಅಲ್ಲ; ಎಲ್ಲ ಪ್ರಕಾರದ ಸಾಹಿತ್ಯವನ್ನು ಎಲ್ಲರೂ ಅರ್ಥಮಾಡಿಕೊಳ್ಳಲಾರರು.ಹಿನ್ನೆಲೆಯಾಗಿ ಸಾಕಷ್ಟು ಸಿದ್ಧತೆಯ ಅಗತ್ಯ ಇದೆ.

ಅನುಬಂಧ:

ಈ ಮೇಲಿನ ನನ್ನ ಮಾತುಗಳ ನಂತರದ ಪ್ರತಿಕ್ರಿಯೆಯ ಸಂದರ್ಭದಲ್ಲಿ ಹಿರಿಯ ಕಲಾವಿದರು ಎಸ್.ಜಿ. ವಾಸುದೇವ್ ಮತ್ತು ಯುವ ಶಿಲ್ಪಿ ಶಿವಾನಂದ ಬಂಟನೂರ್‌ರವರುಗಳು ಪಾಲ್ಗೊಂಡು ತಮ್ಮ ಪ್ರತಿಕ್ರಿಯಾರೂಪದ ಮಾತುಗಳನ್ನು ಆಡಿದರು.ಈ ಸಂದರ್ಭದಲ್ಲಿ ನಮ್ಮ ಹಿಂದಿನ ಲೇಖಕರ ಬರಹಗಳ ಕುರಿತು ಬಂದ ಪ್ರಶ್ನೆಗಳಲ್ಲೊಂದರಲ್ಲಿ ಆ ಪುಸ್ತಕಗಳ ಮತ್ತು ಬರಹಗಳ ಗುಣಮಟ್ಟ ಕುರಿತ 2016ರ ಸಂದರ್ಭದ ಕೆಲವರ ಅಸಮಾಧಾನದ ಧ್ವನಿ.ಆದರೆ ನಾವು ಆ ಹಿರಿಯರು ಬರೆದ ಸಂದರ್ಭ ಮತ್ತು ಕಾರಣಗಳನ್ನು ಗಮನದಲ್ಲಿಟ್ಟು, ಆ ಬರಹಗಳ ಐತಿಹಾಸಿಕ ಪ್ರಾಮುಖ್ಯತೆ ಹಾಗೂ ಇಂದಿಗೆ ಅವುಗಳ ಉಪಯುಕ್ತತೆ ಬಗ್ಗೆ ಅರಿತುಕೊಳ್ಳುವ ಅಗತ್ಯವಿದೆ.ಅವುಗಳನ್ನು ನಿಜವಾಗಿಯೂ, ಮತ್ತೆ ಮತ್ತೆ ಓದಬೇಕಾಗಿದೆ ಇವರು.ಅವರು ಅಂದು ಬರೆಯದೆ ಇದ್ದಲ್ಲಿ ನಮಗೆ ಆ ಸಂದರ್ಭದ ಪ್ರಜ್ಞೆ, ಪರಿಸರಗಳ ಅಜ್ಞಾತತೆ ಕಾಡಬಹುದಿತ್ತು.ಅ.ನ.ಕೃ., ವೀ.ಸಿ., ಶಿವರಾಮ ಕಾರಂತರು, ಬಿ.ವಿ.ಕೆ.ಶಾಸ್ತ್ರಿ, ಎಸ್.ಎನ್. ಚಂದ್ರಶೇಖರ್, ಪಿ.ಆರ್.ತಿಪ್ಪೇಸ್ವಾಮಿಯವರು, ಹೆಚ್.ಎನ್. ಸುರೇಶ್‌ರವರುಗಳ ಬರಹಗಳು ಇಂದಿಗೂ ಮಹತ್ವವನ್ನು ಉಳಿಸಿಕೊಡಿವೆ. ಆ ಬಗ್ಗೆ ಈ ಮುನ್ನ ಉಲ್ಲೇಖಿಸಲಾಗಿದೆ.

ಕೇವಲ 100 ವರ್ಷಗಳ ದೃಶ್ಯಕಲಾ ಇತಿಹಾಸವಿರುವ ನಮಗೆ ಆ ಬರಹಗಳು ಸರಳವಾಗಿದ್ದರೂ ಆ ಬರಹಗಳಲ್ಲಿ ಕಾಣಿಸಿಕೊಂಡಿರುವ ಕಲಾವಿದರು ಹಲವು ಕಾಲ ಕಲಾರಂಗದಲ್ಲಿ ಪರಿಚಿತರಾಗಿರುತ್ತಾರೆ. ಅ.ನ.ಕೃ.ರವರ 'ಚಿತ್ರಕಲೆ', ಪಿ.ಆರ್. ತಿಪ್ಪೇಸ್ವಾಮಿಯವರ 'ಕಲೋಪಾಸಕರು' ನಮ್ಮ ಹಿರಿಯ ತಲೆಮಾರಿನ ಕಲಾವಿದ/ಕಲಾವಿದೆಯರನ್ನು ಪರಿಚಯಿಸುತ್ತವೆ. ಆ ಪರಿಚಯವಿಲ್ಲದೆ ಇದ್ದಿದ್ದರೆ ಅವರುಗಳೆಲ್ಲರೂ ಬಹುತೇಕ ತೆರೆಮರೆಯಲ್ಲಿ ಉಳಿದುಬಿಡುತ್ತಿದ್ದರು! ಲಲಿತಕಲಾ ಅಕಾಡೆಮಿ, ಶಿಲ್ಪಕಲಾ ಅಕಾಡೆಮಿಗಳ ಕಲಾವಿದರ ಕುರಿತ ಪುಟ್ಟ ಪುಸ್ತಕಗಳೂ ಸಹ ಈ ಹಿನ್ನೆಲೆಯಲ್ಲಿ ಗಣನೀಯವಾದವು. ಆ ಬಗ್ಗೆ ಬರೆಯುವ ಮತ್ತು ಕಳೆದ 30 ವರ್ಷದಲ್ಲಿ

ಪ್ರತಿ ವಾರವೂ ಪ್ರಕಟಗೊಂಡ ಹಲವರ ಪತ್ರಿಕಾ ಬರಹಗಳನ್ನಾದರೂ, ಒಮ್ಮೆಯಾದರೂ ಎಲ್ಲವನ್ನೂ ಓದುವ ಸಂದರ್ಭ ಇವರಿಗೆ ಬಂದಿಲ್ಲ; ಎಲ್ಲರದನ್ನೂ 'ನಿಜವಾದ' ರೀತಿಯ ಓದಿನಿಂದ ಓದದೆ ಇಂದಿನವರು ಮುನ್ನಡೆಯುವುದು ಹೇಗೆ ಸಾಧ್ಯ! 'ನಿನ್ನೆಗಳ ಪ್ರಜ್ಞೆ'ಯ ಕೊರತೆಯ ಅಭಿಪ್ರಾಯಗಳು ಉಪಯುಕ್ತವಾಗಲಾರವು. ಬಹುತೇಕರು ಹೇಳುವಂತೆ ನಮ್ಮ ನಡುವೆ ಬರೆಯಲಾರಂಭಿಸಿರುವವರಲ್ಲಿ ಕನ್ನಡದ ಕಲಾಲೇಖಕರ ಎಲ್ಲರ, ಎಲ್ಲ ಪುಸ್ತಕಗಳ ಸಂಗ್ರಹವೇ ಇಲ್ಲ. ಬಹುತೇಕರ ಎಲ್ಲ ಪುಸ್ತಕಗಳನ್ನು ಇಡಿಯಾಗಿ 'ಮತ್ತೆ ಮತ್ತೆ' ಇರಲಿ ಒಮ್ಮೆಯಾದರೂ ಓದಿರುವ, ಟಿಪ್ಪಣಿಗಳನ್ನು ಮಾಡಿಕೊಂಡಿರುವ ಬರಹಗಾರರು ಯಾರಿದ್ದಾರೆ?ಎನ್ನಿಸುತ್ತದೆ.ಹೀಗಾಗಿ ಅವುಗಳನ್ನು ಟೀಕಿಸುವವರು ಅವುಗಳನ್ನು ಅಥವಾ ನಮ್ಮ ಸಂದರ್ಭದ ಕಲಾವಿದ/ಕಲಾವಿದೆಯರ ಬಗ್ಗೆ ಬರೆದಿದ್ದಾರೆಯೇ? ಹೆಚ್ಚು ಹೆಚ್ಚು ಬರೆಯುವ ಮೂಲಕ, ನಿರಂತರವಾಗಿ ಒಂದು ಐದು ವರ್ಷ ಬರೆಯುವ ಮೂಲಕ ನೀಡುವ ಕೊಡುಗೆ ಅತಿ ಅಗತ್ಯ; ಆ ನಂತರ ಅವರು ಮಾತನಾಡಬಹುದು. ಆಗ ಮಾತನಾಡಲು, ಪ್ರಶ್ನಿಸಲು, ಉತ್ತರಿಸಲು ಬಹಳ ಇರುತ್ತವೆ.

❑

ಕನ್ನಡ ಕಲಾ ಸಾಹಿತ್ಯ ವಿಮರ್ಶೆ

♦ ಚಿ.ಸು.ಕೃಷ್ಣಸೆಟ್ಟಿ

ಕರ್ನಾಟಕ ಲಲಿತಕಲಾ ಅಕಾಡೆಮಿಯು ವಿಶೇಷವಾಗಿ ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆ ಕುರಿತು ಪ್ರಪ್ರಥಮಬಾರಿಗೆ 2016ರ ಆಗಸ್ಟ್ 4 ಮತ್ತು 5ರಂದು ಬೆಂಗಳೂರಿನಲ್ಲಿ ವಿಚಾರಸಂಕಿರಣವನ್ನು ಆಯೋಜಿಸಿತ್ತು. ಈ ವಿಚಾರಸಂಕಿರಣದಲ್ಲಿ ಅನೇಕ ಕಲಾ ವಿದ್ವಾಂಸರು ಪ್ರಬಂಧ ಮಂಡಿಸುವುದರ ಜೊತೆಗೆ ಚರ್ಚೆಯೂ ನಡೆದಿದೆ. ಅಲ್ಲಿ ಮಂಡಿಸಿದ ಪ್ರಬಂಧ ಮತ್ತು ಆ ವಿಷಯ ಕುರಿತು ನಡೆದ ಸಂವಾದದ ತಿರುಳನೊಂದಿಗೆ ಪರಿಷ್ಕೃತ ಪ್ರಬಂಧದ ಹಸ್ತಪ್ರತಿಯನ್ನು ಅಕಾಡೆಮಿಗೆ ಕಲಾ ವಿದ್ವಾಂಸರು ನೀಡಿದ್ದಾರೆ. ಅಕಾಡೆಮಿಯು ಈ ವಿಚಾರಸಂಕಿರಣಗಳ ಎಲ್ಲಾ ವಿಷಯ ಮಂಡನೆ ಮತ್ತು ಚರ್ಚೆಗಳ ಸಂಗ್ರಹವನ್ನು 'ಕಲಾ' ಸಂಚಿಕೆಯ ಮೂಲಕ ಈ ವಿಚಾರಸಂಕಿರಣದಲ್ಲಿ ಭಾಗವಹಿಸದ ನಾಡಿನಾದ್ಯಂತದ ಎಲ್ಲಾ ಕಲಾವಿದರು, ಕಲಾ ವಿದ್ಯಾರ್ಥಿಗಳು ಮತ್ತು ವಿದ್ವಾಂಸರಿಗೂ ತಲುಪಿಸುವ ಸದಾಶಯ ಹೊಂದಿರುವುದು ಎಲ್ಲರಿಗೂ ತಿಳಿದ ವಿಷಯವಾಗಿದೆ.

ಈ ಕುರಿತಂತೆ ಈ ಸಂಚಿಕೆಯಲ್ಲಿ ವಿಚಾರ-ಪ್ರಬಂಧ ಮಂಡಿಸಿದ ಎಲ್ಲಾ ಕಲಾ ವಿದ್ವಾಂಸರ ಲೇಖನಗಳು ದಾಖಲಾಗಿವೆ. ಆದರೆ, ಈ ವಿಚಾರಸಂಕಿರಣದಲ್ಲಿ ಭಾಷಣ ಮಾಡಿದ ಶ್ರೀಯುತ ಚಿ.ಸು. ಕೃಷ್ಣಸೆಟ್ಟಿ ಅವರು **'ಕನ್ನಡ ಕಲಾ ಸಾಹಿತ್ಯ ವಿಮರ್ಶೆ'** ಕುರಿತ ತಮ್ಮ ಪ್ರಬಂಧವನ್ನು ಇಲ್ಲಿಯವರೆಗೂ ಅಕಾಡೆಮಿಗೆ ತಲುಪಿಸಿಲ್ಲ. ಅಕಾಡೆಮಿಯು ಈಗಾಗಲೇ ಹಲವು ಬಾರಿ ದೂರವಾಣಿ ಮತ್ತು ಲಿಖಿತರೂಪದ ಮೂಲಕವೂ ರಿಜಿಸ್ಟ್ರಾರ್ ಹಾಗೂ ಸಿಬ್ಬಂದಿಗಳು ಸಂಪರ್ಕಿಸಿ ವಿನಂತಿಸಿದ್ದಾರೆ. ಆದರೂ, ಇಲ್ಲಿಯವರೆಗೂ ಲೇಖನ ತಲುಪದ ಹಿನ್ನೆಲೆಯಲ್ಲಿ ಆ ಲೇಖನ ಈ ಸಂಚಿಕೆಯಲ್ಲಿ ಪ್ರಕಟಗೊಂಡಿಲ್ಲ.

ಈ ಪ್ರಬಂಧ ಮಂಡನೆಗಾಗಿ ಅಕಾಡೆಮಿಯು ನಿರ್ಧರಿಸಿರುವ ಹತ್ತು ಸಾವಿರ ರೂಪಾಯಿಗಳ ಗೌರವ ಸಂಭಾವನೆಯು ಎಲ್ಲಾ ಕಲಾ ವಿದ್ವಾಂಸರಿಗೆ ಸಂದಾಯವಾಗಿರುವಂತೆ ಕೃಷ್ಣಸೆಟ್ಟಿಯವರಿಗೂ ಈ ಸಂದರ್ಭದಲ್ಲಿ ಪಾವತಿಯಾಗಿದೆ. ಇದು ಕಲಾ ಸಮುದಾಯದ ಅವಗಾಹನೆಗೆ...

ಪ್ರಧಾನ ಸಂಪಾದಕರು

Art, Artists and Society Catalysing Social Change

♦ Nalini S Malaviya

A creative work of art, expressed as a painting, a poem or a play, has the ability to address social concerns and spark a re-think resulting in reforms, movements and changes at the societal level. The book Nicholas Nickleby by Charles Dickens published in 1838 is believed to have paved the way for much needed social reforms in the boarding schools of England. Whether these reforms can be directly attributed solely to the book is perhaps questionable, but the effect of the storyline and the characterization which mirrored real life situations did cause a furore in society contributing towards

This paper examines and considers the influence of an image or other forms of artistic interventions as a tool to stimulate change at the societal level. It also looks at the evolving role of the artist in contemporary society, the wide international reach of art in a technological world and its efficacy in generating awareness about specific social and political issues while enabling a critical re-think of existing customs, rituals, traditions and values.

large scale changes. The traditional belief that art mirrors life is true, and mimesis has the potential to trigger a critical reassessment of existing beliefs and values. At the same time, the opposite where art explores its capacity to visualise new, imaginary worlds can also be revolutionary.

Artists function within societal frameworks, as an observer and consumer, and externally as a commentator and influencer, and this deeply interlaced link between art, artist and society forms a complex, dynamic and meaningful relationship. A potent combination of message, intent, reach and visual communication, the artwork has the ability to become an influential catalyst for social change. Often the impact of art may not be tangible or immediately evident, however if it can trigger a dialogue around specific issues, its efficacy as a medium for change must be appreciated and explored further. Many artists across the world are demonstrating remarkable social responsibility by playing key roles in social movements and by focussing on local and global issues through their art.

Five TED talks compiled by writer Leigh Shulman are a testament to the power of art to affect positive change and in vocalizing social injustice in the world. She explains, "Art exposes and helps resolve issues of social justice. As a cultural tool, art helps humanize and actualize the emotions, grievances, and fears of those who may not have another place to voice concerns. As an illustrative and journalistic tool, art shocks and inspires us to action. What art depicts can elicit a visceral, almost cellular, reaction." In the contemporary context, this assumes

great importance when human rights violations, violence, gender inequalities, religious, caste and communal prejudices are creating a charged intolerant environment worldwide.

The influence of an image, a narrative, a performance, an installation, or other forms of intervention has the capacity to move emotions, inspire people for action and perhaps also provide sustainable solutions. The power of an image to impact policies is clearly evident in the following instance. The photographic image taken by journalist Nilüfer Demir of the three year old Syrian boy Alan Kurdi after he drowned on 2nd September 2015 in the Mediterranean Sea immediately went viral, and made global headlines prompting international response. The impact this heart-breaking photograph had on policy and public opinion in Canada and abroad helped shape a more humane approach towards immigrants by the new Liberal government that subsequently came to power.



Photo of Alan Kurdi's lifeless body on a beach

In a 2013 essay entitled "Change the Culture, Change the World," artist Favianna Rodriguez writes, "You may attend a rally or vote, but you also read books, listen to music, engage with visual art, turn on the radio and create your identity through culture. Artists are central, not peripheral, to social change. To have the movements that make the

wave, you need cultural workers."

The idea that artists are central, not peripheral, to social change is of vital consideration - it has the ability to empower artists and change societal perspectives, especially in countries like India where a career in art is often considered superfluous or self-indulgent. The validity and relevance of art as a profession, and as a means of triggering social movements is slowly gaining acceptance in our society. At the same time, when policy and decision makers become more sensitive to art and its role in society, integrating art and artists in conflict resolution and in mitigating humanitarian issues, we are likely to see significant movements that are innovative and ecologically balanced. Cultural workers and strategies may well be the solution.

Artistic interventions may not necessarily resort to activism, yet they may express powerful visuals that highlight injustices, inequalities and other pressing concerns, and could facilitate a dialogue between those directly affected or offer pathways for creative strategies. As a medium to create widespread awareness, the efficacy of art is unparalleled.

As stated earlier, many artists are moved by political and social concerns, which are reflected in their art, either as a passive theme or




I Dream – Farmer be the Monalisa of India by Paramesh D. Jolad

as provocative voices. They draw attention to specific issues plaguing societies and the artwork has the power to give voice to local concerns and reach out to global audiences. Or, they succeed in introducing a global dimension to local issues and form meaningful interconnections for local and international audiences.

One of the most cited artwork that makes a powerful political statement is Picasso's Guernica, painted in response to the Nazi's devastating casual bombing practice on the Basque town of Guernica during the Spanish Civil War. To this day, it has remained a potent anti-war symbol and is a constant reminder of the tragedies of war.

On the other hand, art as a tool for spreading misinformation or for the purpose of State propaganda has been used by dictators to influence public opinion and to limit access to information. During the Nazi regime, Hitler set up the Ministry of Propaganda and National Enlightenment, which ensured that nothing was published, performed, or exhibited without their approval. In China too, there is a long and involved history of artists rising up to have their voices heard for a cause, and their involvement with communities to engage in art activities is remarkable.



Ai Weiwei's "Fairytale" chairs (2007) (image via cimam.org)

As art continues to attempt to induce change, there are many contemporary artists who are increasingly resorting to social activism to raise their voices against the State policies and governance. For instance, Ai Weiwei, who is one of the most prominent Chinese artists in the international arena, has been campaigning for democracy and human rights in China. In Weiwei's 2007 'Fairytale' project in Kassel, Germany, he had installed a set of 1001 Ming and Qing dynasty chairs in Kassel, one for each of the 1001 Chinese travellers he also brought to Germany to symbolize displacement and to represent the rapidly altering Chinese identity. As a multimedia, activist artist, Weiwei elicits huge media interest in his works. He is currently working on projects that highlight the tragedy of the immigrant situation.


An artwork produced within the confines of a studio environment acquires meaning and intent only when exhibited in the public domain. The engagement with an audience conveys and deepens relevance and context to the artwork, thus creating avenues for change. Individual and community based art projects are conceptualized around specific issues to reach out to larger audiences, including policy makers.

Collaborative projects with communities involve active engagement with the affected communities and are designed to achieve specific targets and are therefore likely to have visible measurable impact. Activist art in particular utilises public space and aims for public participation to address socio-political issues. It involves negotiating multiple disciplines and facets such as art making, aesthetics and the issue at hand, again aimed towards assessable results. The premise here is to empower individuals and communities by engaging them, and employing creative tools to highlight issues and come up with strategies for resolution.

Solo projects operating within the white cube space have a limited audience, but have the potential to enhance their reach through print and broadcast media. The efficacy and reach of media to magnify the influence of art across the world in today's context is a desirable outcome of our times. Art is no longer limited to the elite gallery audience.

Digital and social media contributes greatly to information dissemination, at the same it is employed and assimilated by artists in their art to augment the impact.

In closing, here is an instance from Bangalore - on 19th June 2015, a 9 feet long crocodile 'found' in a pothole on one of the roads in Bangalore was enough to shake the civic authorities out of their inertia. Pictures of the art installation by Baadal Nanjundaswamy were shared by enthusiasts on social media networks and soon news agencies caught on to the story.



A 9 feet long crocodile 'found' in a pothole

By evening, the civic agency responsible for road repairs could no longer afford to ignore the reptile and the 15 feet pothole was filled up and repaired in no time. This is not the first time that Nanjundaswamy has used his art to stage a protest against potholes and broken medians in the city. The example clearly demonstrates how innovative art interventions have the capability to initiate action for immediate concerns by garnering support through social and mass media - change is possible, both at the micro and the macro level.

Thus, art does hold up a mirror to the society, it reflects the rot and forces a re-think of prevalent customs, rituals, traditions and values. It induces a critical means of re-evaluation and assessment, and encourages shifts in thinking and being, catalysing social change.

References:

1. Guernica, 1937 by Pablo Picasso http://www.pablopicasso.org/guernica.jsp
2. Dunn, Michael. What is the relationship between art and society? (10th May 2013). theoryofknowledge.net. http://www.theoryofknowledge.net/areas-of-knowledge/the-arts/what-is-the-relationship-between-art-and-society/
3. http://cloudhead.org/2013/09/03/the-power-of-art-to-affect-social-change-shown-in-5-ted-talks/
4. https://www.theguardian.com/world/2015/dec/31/alan-kurdi-death-canada-refugee-policy-syria-boy-beach-turkey-photo
5. Protest Art in China http://www.artnewsnviews.com/view-article.php?article=protest-art-in-china&iid=32&articleid=939 April 2012, Vol - 0 No - 27

❑

ದೃಶ್ಯಕಲೆ ಮತ್ತು ಸುದ್ದಿ ಮಾಧ್ಯಮಗಳು

♦ ರಾಜು ಮಳವಳ್ಳಿ

'ದೃಶ್ಯಕಲೆ ಮತ್ತು ಸುದ್ದಿ ಮಾಧ್ಯಮಗಳು' ಎಂಬ ವಿಷಯವೇ ಅತ್ಯಂತ ಆಕರ್ಷಕ ಮತ್ತು ಅರ್ಥಪೂರ್ಣ.ಚರ್ಚೆಗೆ ಉತ್ತಮ ವಸ್ತು.ಬಹುದಶಕಗಳಿಂದಲೂ ಇಂತಹದೊಂದು ವಿಷಯದ ಕುರಿತು ಚಿಂತನಮಂಂಥನ ನಡೆದಿಲ್ಲವೆಂಬುದೇ ಒಂದು ಸೋಜಿಗ ಮತ್ತು ಬೇಸರ.ಇದೀಗ ಬಹುಮಂದಿಯ ಕೊರಗು ನಿವಾರಣೆ ಆಯಿತೆಂಬ ಅಭಿಪ್ರಾಯ ನನ್ನದು.

ದೃಶ್ಯಕಲೆಯೂ ಸಹ ಸುದ್ದಿ ಮಾಡುವ ಒಂದು ಪ್ರಬಲ ಅಭಿವ್ಯಕ್ತಿ ಮಾಧ್ಯಮ. ಹಾಗಾಗಿ ಎರಡು ಸಶಕ್ತ ಸಂವಹನ ಮಾಧ್ಯಮಗಳ ನಡುವಿನ ಸಂಬಂಧ, ಕೊಡುಕೊಳ್ಳುವಿಕೆ, ಜುಗಲ್‌ಬಂದಿಯನ್ನು ಅರ್ಥೈಸುವ, ಅರಿತುಕೊಳ್ಳುವ ಸತ್ಪ್ರಯತ್ನದ ಭಾಗ ಈ ವಿಚಾರಮಂಂಥನ.

ಮೊದಲಿಗೆ ದೃಶ್ಯಕಲೆ ಹಾಗೂ ಸುದ್ದಿ ಮಾಧ್ಯಮಗಳ ವೈಶಿಷ್ಟ್ಯ, ಸಾಮ್ಯತೆ ಮತ್ತು ವ್ಯತ್ಯಾಸಗಳ ಸ್ಥೂಲವಾದ ಅವಲೋಕನ ಅತ್ಯಗತ್ಯ.ಪ್ರಜಾತಂತ್ರ ವ್ಯವಸ್ಥೆಯ ಮೂಲ ನಾಲ್ಕು ಆಧಾರಸ್ತಂಭಗಳಲ್ಲಿ ಮಾಧ್ಯಮರಂಗ ಸಹ ಒಂದು, ದೃಶ್ಯಕಲೆ ನಾಡಿನ ಸಂಸ್ಕೃತಿಯ ಮೂಲ ಬೇರುಗಳಲ್ಲೊಂದು. ದೃಶ್ಯಕಲೆ ಕುಂಚದಿಂದ ಅರಳಿದರೆ, ಮಾಧ್ಯಮ ಲೇಖನಿಯಿಂದ ಮೈದಳೆಯುತ್ತದೆ. ದೃಶ್ಯಕಲೆ ಬಣ್ಣಗಳ ಜಗತ್ತು, ಮಾಧ್ಯಮ ಅಕ್ಷರಗಳ ಪ್ರಪಂಚ. ಚಿತ್ರಕಲೆಯಲ್ಲಿ ಗೆರೆಗಳ ಅಲಂಕಾರ, ಮಾಧ್ಯಮಗಳಲ್ಲಿ ಪದಗಳ ಚಮತ್ಕಾರ..! ಎರಡೂ ಮಾಧ್ಯಮಗಳಲ್ಲಿ ಅಭಿವ್ಯಕ್ತಿಯೇ ಪ್ರಧಾನ. ಸಂವಹನವೇ ಗುರಿ.

ಸುದ್ದಿ ಮಾಧ್ಯಮಕ್ಕೆ ನಿರ್ದಿಷ್ಟ ಚೌಕಟ್ಟು ಉಂಟು ಆದರೆ, ದೃಶ್ಯಕಲೆ ಕಲ್ಪನಾತೀತ, ಚೌಕಟ್ಟುರಹಿತ, ಅನಂತ.ಅಮೂರ್ತವಾದುದನ್ನು ಮೂರ್ತರೂಪಕ್ಕಿಳಿಸುವುದು ದೃಶ್ಯಕಲೆಯ ಹೆಗ್ಗಳಿಕೆ, ಕಂಡುಂಡ ಅನುಭವ, ವಾಸ್ತವವನ್ನು ಅಕ್ಷರರೂಪಕ್ಕೆ ಇಳಿಸುವುದು ಮಾಧ್ಯಮದ ಅಗ್ಗಳಿಕೆ. ದೃಶ್ಯಕಲೆ ಮತ್ತು ಮಾಧ್ಯಮಗಳೆರಡರ ಬೆನ್ನಿಗೂ ಘನ ಇತಿಹಾಸ, ಪರಂಪರೆ ಮತ್ತು ಪಾವಿತ್ರತೆಯಿದೆ. ಪ್ರಾರಂಭಿಕ ಹಂತದಲ್ಲಿ ಬಣ್ಣಗಳ ಅಭಿವ್ಯಕ್ತಿ 'ಚಿತ್ರಕಲೆ'ಯಾಗಿ ಗುರುತು ಪಡೆದಿತ್ತಾದರೂ ಇಪ್ಪತ್ತನೆಯ ಶತಮಾನದಿಂದೀಚಿಗೆ 'ದೃಶ್ಯಕಲೆ'ಯಾಗಿ ಕರೆಯಲ್ಪಡುತ್ತಿರುವುದು ಕಲಾಸಮುದಾಯಕ್ಕೆ ತಿಳಿದಿರುವ ವಿಷಯ.ಚಿತ್ರಕಲೆಗೆ ಸಾವಿರಾರು ವರ್ಷಗಳ ಹಿನ್ನೆಲೆ. ಈ ಮೌನಭಾಷೆ ಆದಿಮಾನವನ ಕಾಲದಿಂದಲೂ ಜೀವಂತ.ಮನುಕುಲವಿರುವರೆಗೂ ಪ್ರಚಲಿತ.ಸಾರ್ವಕಾಲಿಕ. ಆದರೆ, ಸುದ್ದಿಮಾಧ್ಯಮಗಳು ಮುಂಚೂಣಿಗೆ ಬಂದಿದ್ದು ಅಕ್ಷರ ಸಂಸ್ಕೃತಿ ಅರಳಿನಿಂತ ಮೇಲೆಯೇ.ನೂರಿನ್ನೂರು ವರ್ಷಗಳಿಂದೀಚೆಗೆ. ಹಾಗಾಗಿ ಸುದ್ದಿಮಾಧ್ಯಮಕ್ಕಿಂತಲೂ 'ದೃಶ್ಯಕಲಾ' ಮಾಧ್ಯಮ ಬಲು ಹಿರಿಯ ಮತ್ತು ಪುರಾತನ.

ಕಲಾಕೃತಿ ಮತ್ತು ಸುದ್ದಿ ಮಾಧ್ಯಮವೆರಡೂ ಸೃಜನಶೀಲ ಅಭಿವ್ಯಕ್ತಿಯೇ.ಕ್ರಿಯಾಶೀಲತೆ, ಪ್ರತಿಭಾಸಂಪನ್ನತೆ ಮತ್ತು ಸೃಜನಾತ್ಮಕತೆ ಇರದೆ ಈ ಮಾಧ್ಯಮಗಳಲ್ಲಿ ಸೈ ಎನಿಸಿಕೊಳ್ಳುವುದು, ಸಾಧನೆಗೈಯುವುದು ಕಷ್ಟಕರ.ಚಿತ್ರಕಲಾಕೃತಿಯೊಂದು ಕಲಾವಿದನ ಏಕಾಂತ ಮನದ ಕಲ್ಪನೆಯ ಮೂಸೆಯಲ್ಲಿ ಅರಳಿ ಬಹುಕಾಂತರ (ಕಲಾಸಕ್ತರ) ಮುಂದೆ ಅನಾವರಣಗೊಂಡು ಸಾರ್ಥಕಗೊಂಡರೆ, ಮಾಧ್ಯಮದ ಬರಹ ಬಹುಜನರ ನಡುವೆ ಅರಳಿ ಓದುಗನ ಏಕಾಂತದಲ್ಲಿ ಆಲೋಚನೆಯನ್ನು ಹುರಿಗಟ್ಟಿಸಿ ಧನ್ಯತೆ ಪಡೆದುಕೊಳ್ಳುತ್ತದೆ.ಮಾಧ್ಯಮದಲ್ಲಿ ಕಲ್ಪನೆ ಸಲ್ಲದು, ಅದು ಶುದ್ಧ ವಾಸ್ತವಗಳ ದರ್ಪಣವಾಗಿರಲೇಬೇಕು.ವಸ್ತುಸ್ಥಿತಿಯಾಚೆಗಿನ ಬರಹಗಳಿಗೆ ಮನ್ನಣೆ ದೊರೆಯದು.ಶ್ರೇಷ್ಠ ಕಲಾಕೃತಿಯೊಂದು ಬಹುಕಾಲ ನೆನಪಿನಲ್ಲಿ ಉಳಿಯುವಂತೆ ಮಾಧ್ಯಮದಲ್ಲಿನ ಅತ್ಯುತ್ತಮ ವರದಿ, ಬರಹ ಅಕ್ಷರಪ್ರೇಮಿಯ ನೆನಪಿನ ಬುತ್ತಿಯಲ್ಲಿ ಚಿರಂತನವಾಗಿರುವುದು ಸತ್ಯ.

ವಸ್ತುನಿಷ್ಠತೆ, ಪ್ರಾಮಾಣಿಕತೆ, ದೂರದೃಷ್ಟಿ, ಆರೋಗ್ಯಕರವಾದ ಪ್ರಾಂಜಲ ಮನಸ್ಥಿತಿ ಈ ಎರಡೂ ಸಂವಹನ ಮಾಧ್ಯಮಗಳಲ್ಲಿ ಕಾರ್ಯನಿರ್ವಹಿಸುವವರಿಗೆ ಅತ್ಯವಶ್ಯಕ.ಸಮಾಜದ ಓರೆಕೋರೆಗಳಿಗೆ ಕನ್ನಡಿಯಾಗಿ ಸತ್ಯದ ದರ್ಶನ ಮಾಡಿಸುವ ಸಾಮಾಜಿಕ ಜವಾಬ್ದಾರಿ ಎರಡೂ ಮಾಧ್ಯಮಗಳ ಮೇಲುಂಟು.ಆ ಹೊಣೆಗಾರಿಕೆಯಲ್ಲಿ ಅಲ್ಪಲೋಪವಾಗದಂತೆ ಎಚ್ಚರವಹಿಸುವುದು ಬಹಳ ಮುಖ್ಯ ಮಾತ್ರವಲ್ಲ, ಬಹುದೊಡ್ಡ ಸವಾಲು ಸಹ.ಆ ಎಚ್ಚರ ಕಲಾವಿದ ಹಾಗೂ ಸುದ್ದಿಮನೆಯ ಸಂಗಾತಿಗಳಲ್ಲಿ ಸದಾ ಜಾಗೃತವಾಗಿರಬೇಕು.ಸಮಾಜಮುಖಿತ್ವವಿಲ್ಲದ ಕಲಾಕೃತಿ ಮತ್ತು

ಮಾಧ್ಯಮದ ವರದಿ ನಿರರ್ಥಕ ಮತ್ತು ನಿಷ್ಪ್ರಯೋಜಕ.

ದೃಶ್ಯಕಲೆ ಮತ್ತು ಸುದ್ದಿ ಮಾಧ್ಯಮಗಳು ಸದಾ ಪರಸ್ಪರ ಪೂರಕ.ಎರಡರ ನಡುವೆ ಅನೂಹ್ಯ ಬಂಧ.ಕಲೆ, ಕಲಾವಿದ ಬೆಳಗಲು ಮಾಧ್ಯಮಗಳು ಅವಶ್ಯಕ, ಮಾಧ್ಯಮಗಳು ಚೆಂದಗಾಣಲು ದೃಶ್ಯಕಲೆ ಅತ್ಯಂತ ಅಗತ್ಯ.'ಕೂಡಿ ಬಾಳಿದರೆ ಸ್ವರ್ಗ ಸುಖ' ಎಂಬಂತೆ ಈ ಎರಡೂ ಮಾಧ್ಯಮಗಳು ಕೂಡಿ ಸಾಗಿದರೆ ಸರ್ವವೂ ಕಲಾತ್ಮಕ. ಮನರಂಜಕ, ಬೋಧಪ್ರದಾಯಕ ಜೊತೆಗೆ ಮಾರ್ಗದರ್ಶಕವೂ ಹೌದು.

ಮಾಧ್ಯಮಗಳಲ್ಲಿ ಕಲಾಭಿವ್ಯಕ್ತಿ

ಮಾಧ್ಯಮಗಳು ಮತ್ತು ಕಲೆಯ ಅವಿನಾಭಾವ ಅನುಬಂಧಕ್ಕೆ ಶತಮಾನಗಳ ಇತಿಹಾಸವುಂಟು. ಮಾಧ್ಯಮಗಳ ಬೆಳವಣಿಗೆಯಲ್ಲಿ ಕಲೆಯ ಪಾತ್ರ ಮಹತ್ತರ.ಅಂತೆಯೇ ಕಲೆಯ ಉನ್ನತಿಯಲ್ಲಿ ಮಾಧ್ಯಮಗಳ ಕಾಣ್ಕೆ ದೊಡ್ಡದು.ಇದೊಂದು ಬಗೆಯ ಕರುಳುಬಳ್ಳಿಯ ಸಂಬಂಧ.

ಆಧುನಿಕೋತ್ತರ ಕಾಲಘಟ್ಟದಲ್ಲಿ ಸುದ್ದಿಮಾಧ್ಯಮಗಳ ಹರವು, ಆಳ ಮತ್ತು ಅಗಲಗಳು ವಿಸ್ತಾರಗೊಂಡಿವೆ. ಅಭಿವ್ಯಕ್ತಿಯ ಮಾಧ್ಯಮಗಳು ಹೆಚ್ಚಾದಂತೆಲ್ಲಾ ಸುದ್ದಿ ಮಾಧ್ಯಮಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ.ಮುದ್ರಣ ಮಾಧ್ಯಮ (ವೃತ್ತ ಪತ್ರಿಕೆಗಳು), ವಿದ್ಯುನ್ಮಾನ ಮಾಧ್ಯಮ (ದೂರದರ್ಶನ ವಾಹಿನಿಗಳು) ಮತ್ತು ಶ್ರವ್ಯ ಮಾಧ್ಯಮ (ಬಾನುಲಿ, ಎಫ್, ಎಂ ರೇಡಿಯೋ) ಪ್ರಮುಖ ಸುದ್ದಿ ಮಾಧ್ಯಮಗಳು. ತಂತ್ರಜ್ಞಾನದ ಈ ಯುಗದಲ್ಲಿ ಸಾಮಾಜಿಕ ಜಾಲತಾಣಗಳಾದ ವಾಟ್ಸಾಪ್, ಫೇಸ್‌ಬುಕ್, ಟ್ವಿಟ್ಟರ್ ಸಹ ಸುದ್ದಿಯನ್ನು ಪಸರಿಸುವ, ಸುದ್ದಿಯನ್ನು ವಿಶ್ಲೇಷಿಸುವ ಮಾಧ್ಯಮಗಳಾಗಿ ಹೊರಹೊಮ್ಮಿವೆಯಾದರೂ ಈ ಜಾಲತಾಣಗಳಿಗೆ ಸಾಮಾಜಿಕ ಚೌಕಟ್ಟು, ನಿಯಮ, ದಿಕ್ಕುದೆಸೆ, ಕಾನೂನಾತ್ಮಕ ಪರಿಧಿ ಮತ್ತು ಸಾಮುದಾಯಿಕ ಹಿತಾಸಕ್ತಿಗಳಿಲ್ಲದ ಕಾರಣ ಅವುಗಳ ಗಂಭೀರ ಪರಿಗಣನೆ ಅಸಾಧ್ಯ. ಇಲ್ಲಿನ ವಯಕ್ತಿಕ ಅಭಿವ್ಯಕ್ತಿ-ಸುದ್ದಿ ಹಂಚುವಿಕೆಗೆ ಸಾಮೂಹಿಕ ಮನ್ನಣೆ ಮರೀಚಿಕೆಯೇ.

ಸುದ್ದಿಮಾಧ್ಯಮಗಳ ಕಾರ್ಯವೈಖರಿ ಒಂದಕ್ಕಿಂತ ಮತ್ತೊಂದು ಭಿನ್ನ-ವಿಭಿನ್ನ.ವ್ಯಾಪ್ತಿ, ಶೈಲಿ, ಅಭಿವ್ಯಕ್ತಿಯ ಕ್ರಮ, ಸೆಳೆಯುವ ಬಗೆ, ಬೀರುವ ಪರಿಣಾಮ ಮತ್ತು ಮಿತಿಗಳು ಬೇರೆ ಬೇರೆ.ಅಕ್ಷರ, ದೃಶ್ಯ ಮತ್ತು ಶ್ರವ್ಯ ಮೂರೂ ಮಾಧ್ಯಮಗಳು ಜನಪ್ರಿಯ ಹಾಗೂ ಜನಾನುರಾಗಿ ಮಾಧ್ಯಮಗಳೇ.ಆ ಪೈಕಿ ಹೆಚ್ಚು ವಿಶ್ವಾಸಾರ್ಹವೆಂಬ ಹೆಗ್ಗಳಿಕೆ ಮುದ್ರಣ ಮಾಧ್ಯಮದ್ದು.ಸಾಮಾಜಿಕ ವಲಯದಲ್ಲಿ ಹೆಚ್ಚು ಪ್ರಭಾವಶಾಲಿಯಾಗಿರುವ ಮುದ್ರಣ ಮಾಧ್ಯಮಗಳು ಅರ್ಥಾತ್ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳಲ್ಲಿ ದೃಶ್ಯಕಲೆ ಅಭಿವ್ಯಕ್ತಗೊಳ್ಳುತ್ತಿರುವ ಬಗೆ ಹತ್ತಾರು.ಅವುಗಳ ಸ್ವರೂಪ ಕಾಲದ ನಡಿಗೆಯ ಜೊತೆಜೊತೆಗೆ ಬದಲಾಗುತ್ತಲೇ ಇರುವುದು ಕಾಲನಿರ್ಣಯ. ಹೊಸ ಹೊಸ ಆವಿಷ್ಕಾರ, ಚಿಂತನೆ, ಮನೋಧರ್ಮ ಮತ್ತು ಕಾಲಧರ್ಮಕ್ಕನುಗುಣವಾಗಿ ಮುದ್ರಣ ಮಾಧ್ಯಮಗಳಲ್ಲಿ ದೃಶ್ಯಕಲೆಯ ಅಭಿವ್ಯಕ್ತಿ ನವನವೀನವಾಗಿ ಹೊರಹೊಮ್ಮುತ್ತಲೇ ಇದೆ. ಭೂತ, ವರ್ತಮಾನ ಮತ್ತು ಭವಿಷ್ಯತ್‌ನ ಅಗತ್ಯ, ನಿರೀಕ್ಷೆಗಳಿಗೆ ಸ್ಪಂದಿಸುತ್ತಾ ರೂಪಾಂತರಗೊಳ್ಳುತ್ತಲೇ ಇದೆ.

ಮುದ್ರಣ ಮಾಧ್ಯಮಗಳಲ್ಲಿ ದೃಶ್ಯಕಲಾಭಿವ್ಯಕ್ತಿಯ ಸ್ಥಿತ್ಯಂತರಗಳೇನೇ ಇರಲಿ ಈ ಕಲೆಯ

ಅನಾವರಣದ ಹೆಜ್ಜೆಗುರುತುಗಳು ಮಾತ್ರ ಎಂದಿಗೂ ಮಾಸದಅಚ್ಚಳಿಯದ ಛಾಪು ಮೂಡಿಸಿವೆ. ಮುದ್ರಣ ಮಾಧ್ಯಮಗಳಲ್ಲಿ ವೃತ್ತಪತ್ರಿಕೆಗಳಿಗೆ ಹೆಚ್ಚಿನ ಮಾನ್ಯತೆ.ವೃತ್ತಪತ್ರಿಕೆಗಳಲ್ಲಿ ದೃಶ್ಯಕಲೆಯ ಅಭಿವ್ಯಕ್ತಿಯೆಂದಾಕ್ಷಣ ತಟ್ಟನೆ ನೆನಪಾಗುವುದು ವ್ಯಂಗ್ಯಚಿತ್ರಗಳು.ದಿನಪತ್ರಿಕೆಗಳ ಪಾಲಿಗೆ ವ್ಯಂಗ್ಯಚಿತ್ರಗಳು ಬಹುದೊಡ್ಡ ಆಸ್ತಿ.ಸಾವಿರ ಪದಗಳು ಹೇಳಲಾಗದ್ದನ್ನು ಒಂದೆರಡು ಗೆರೆಗಳು ಧ್ವನಿಸುವುದು ವ್ಯಂಗ್ಯಚಿತ್ರಗಳ ವಿಶೇಷತೆ, ತಾಕತ್ತು. ವ್ಯಂಗ್ಯಚಿತ್ರಗಳ ಗಮ್ಮತ್ತಿನಿಂದಲೇ ಪತ್ರಿಕೆಗಳು ಜನಮನ್ನಣೆ ಗಳಿಸಿ ಪ್ರಸಾರಸಂಖ್ಯೆ ವೃದ್ಧಿಸಿಕೊಂಡ(ಕೊಳ್ಳುತ್ತಿರುವ) ಉದಾಹರಣೆಗಳು ಸಾರ್ವತ್ರಿಕ, ಸಾರ್ವಕಾಲಿಕ.

ದೃಶ್ಯಕಲೆಯ ಮೂಲ ಬೇರಾದ ರೇಖೆಗಳೇ ವ್ಯಂಗ್ಯಚಿತ್ರಗಳ ಜೀವಾಳ.ಬಿಂದುವಿನಿಂದ ಬಿಂದುವಿನೆಡೆಗೆ ಚಲಿಸುವ ಗೆರೆಗಳು ರೇಖಾಚಿತ್ರವಾಗುವ ಪರಿ ಅನನ್ಯ.ವರ್ತಮಾನದ ಬದುಕು, ವಿದ್ಯಮಾನಗಳನ್ನು ಕಲಾವಿದ ಗ್ರಹಿಸಿ ಅದನ್ನು ರೇಖಾಚಿತ್ರದ ಮೂಲಕ ಪರಿಣಾಮಕಾರಿಯಾಗಿ ಬಿಂಬಿಸುವ ವ್ಯಂಗ್ಯಚಿತ್ರಗಳು ಕಲಾವಿದನ ಒಳನೋಟದ ಸಾಕ್ಷಾತ್ ರೂಪ. ಕಲಾವಂತಿಕೆ, ಕ್ರಿಯಾಶೀಲತೆಗೆ ಹಿಡಿದ ಕೈಗನ್ನಡಿ.ವ್ಯಂಗ್ಯಚಿತ್ರಗಳಲ್ಲಿ ವ್ಯಕ್ತವಾಗುವ ವ್ಯಂಗ್ಯ, ವಿಡಂಬನೆ, ವಿಷಾದ, ಕೀಟಲೆ, ಚುಚ್ಚುವ ರೀತಿಗಳು ಓದುಗನೆದೆಯಲ್ಲಿ ಎಬ್ಬಿಸುವ ತರಂಗ, ಪ್ರಶ್ನೆಗಳು ವರ್ಣಾತೀತ.ಈ ಕಲಾಭಿವ್ಯಕ್ತಿ ಪತ್ರಿಕೆಯ ಗುಣಧರ್ಮದ ಪ್ರತೀಕವೂ ಹೌದು. ಹಾಗಾಗಿ ಪ್ರತಿ ಪತ್ರಿಕೆಯಲ್ಲೂ ವ್ಯಂಗ್ಯಚಿತ್ರಗಳಿಗೆ ಪ್ರತ್ಯೇಕ ಸ್ಥಾನ. ಮುಂಜಾನೆದ್ದು ಪತ್ರಿಕೆ ಕೈಗೆತ್ತಿಕೊಳ್ಳುವ ಓದುಗ ಮೊದಲು ಕಣ್ಣಾಡಿಸುವುದೇ ವ್ಯಂಗ್ಯಚಿತ್ರಗಳತ್ತಲೇ ಎಂಬುದು ವ್ಯಂಗ್ಯಚಿತ್ರಗಳಿರುವ ಜನಪ್ರಿಯತೆಗೆ ಸಾಕ್ಷಿ. ದಿ ಕಾಮನ್ ಮ್ಯಾನ್, ಚುಚ್ಚುಮದ್ದು, ಚಿನಕುರಳಿ, ಪಂಚತಂತ್ರ, ಮುಂತಾದ ವ್ಯಂಗ್ಯಚಿತ್ರಾಂಕಣಗಳು ಸದಾ ಸ್ಮರಣೀಯ.ಇದು ಪತ್ರಿಕೆಗಳಲ್ಲಿ ಎಲ್ಲಾ ಕಾಲದಲ್ಲೂ ಕಾಣಸಿಗುವ 'ಚಿರ ಅಂಕಣ'. ಆರ್.ಕೆ.ಲಕ್ಷ್ಮಣ್, ಅನಂತಪೈ, ಎಸ್.ಕೆ.ನಾಡಿಗ್, ಗೋಪಿಕಾಮತ್, ಮಾಯಾ ಕಾಮತ್, ಎಸ್.ವಿ. ಪದ್ಮನಾಭ್, ಮಾರಿಯೊ ಡಿ. ಮಿರಾಂಡ, ಮೊಹಮ್ಮದ್, ಫ್ರಾನ್ಸ್‌ನ ಬರ್ನಾಡ್ ಬೌಟನ್, ರೊಮೇನಿಯಾದ ಕಾನ್ಸ್‌ಟಾಂಟಿನ್ ಪೊವೆಲ್, ಹಾಲೆಂಡ್‌ನ ಎರಿಕ್ ವ್ಯಾಂಡೆರ್ ವಾಲ್, ಸರ್ಬಿಯಾದ ಜವಾನ್ ಪ್ರೊಕೊಪಿವಿಜೆಕ್, ಇಂಗ್ಲೆಂಡ್‌ನ ವಿಲಿಯಂ ಹೊಗಾರ್ತ್ ಹೀಗೆ ನೂರಾರು ವ್ಯಂಗ್ಯಚಿತ್ರಕಾರರ ಅಭಿವ್ಯಕ್ತಿಗಳು ಓದುಗರ ಸ್ಮೃತಿಯಲ್ಲಿ ಎಂದೆಂದಿಗೂ ಸಜೀವ. ಸುದ್ದಿಮಾಧ್ಯಮಗಳಲ್ಲಿ ದೃಶ್ಯಕಲೆಯ ಈ ಅಭಿವ್ಯಕ್ತಿಗೆ ಆದಿ ಮಾತ್ರ ಅಂತ್ಯವೆಂಬುದು ಇಲ್ಲವೇ ಇಲ್ಲ.

ವೃತ್ತಪತ್ರಿಕೆಗಳಲ್ಲಿ ವ್ಯಂಗ್ಯಚಿತ್ರಗಳಾಚೆಗೂ ದೃಶ್ಯಕಲೆಯ ಅನಾವರಣ ನಿರಂತರ. ಜನಪ್ರತಿನಿಧಿ, ಸಾಹಿತಿ, ಪರಿಸರತಜ್ಞ ಹೀಗೆ ನಿರ್ದಿಷ್ಟ ವ್ಯಕ್ತಿಯ ಕುರಿತ ಬರಹ, ವರದಿಗಳಲ್ಲಿ ಆ ವ್ಯಕ್ತಿಯ 'ವ್ಯಕ್ತಿಚಿತ್ರ' (ಪೋರ್ಟ್ರೇಟ್)ಗಳಾಗಿ ದೃಶ್ಯಕಲೆ ಮೂಡುತ್ತದೆ. ಈ ಚಿತ್ರಗಳು ಆ ವ್ಯಕ್ತಿಯ ಸಾಮಾಜಿಕ ವರ್ತನೆ, ವ್ಯಕ್ತಿತ್ವವನ್ನು ಬಿಂಬಿಸುವುದು ವಿಶೇಷ. ಲೇಖನ-ಸುದ್ದಿಗೆ ವಿಶೇಷ ಮೆರುಗು ನೀಡಿ ಓದುಗನನ್ನು ಆಕರ್ಷಿಸುವ ಇಂತಹ 'ಚಿತ್ರ' ಗಳು ವಿಶೇಷ ಸಂದರ್ಭಗಳಲ್ಲಿ ಬಳಸಲ್ಪಡುತ್ತವೆ. ಪ್ರಮಾಣ ಕಡಿಮೆಯಿದ್ದರೂ ಇವುಗಳ ಅಸ್ತಿತ್ವ ಮಾತ್ರ ಅನಂತ.ದಿನಪತ್ರಿಕೆಗಳ ಸಂಪಾದಕೀಯ ಪುಟದಲ್ಲಿ ಪ್ರಕಟಗೊಳ್ಳುವ ಅಂಕಣಗಳ ಶೀರ್ಷಿಕೆ ವಿನ್ಯಾಸದಲ್ಲೂ ಚಿತ್ರಕಲೆ ಅಭಿವ್ಯಕ್ತಗೊಳ್ಳುತ್ತದೆ. ಅಂಕಣದ ಆಕರ್ಷಣೆ ಹೆಚ್ಚಿಸುವ ಜೊತೆಗೆ ಅವುಗಳಿಗೊಂದು ಗುರುತುಗಳನ್ನು 'ಕುಂಚಕುಸುರಿ' ತಂದುಕೊಡುವುದು ಗಮನಾರ್ಹ.

ದಿನಪತ್ರಿಕೆಗಳ ಪುಟಗಳ ವೈಶಿಷ್ಟ್ಯವನ್ನು ಪ್ರಚುರಪಡಿಸುವಲ್ಲಿಯೂ ಸಹ ದೃಶ್ಯಕಲೆ ಅನಾವರಣಗೊಳ್ಳುತ್ತದೆ. ದಿನಪತ್ರಿಕೆಯ ಮುಂದಲೆ ಶೀರ್ಷಿಕೆ (ಮಾಸ್ಟರ್ ಹೆಡ್)ಗಳ ವಿನ್ಯಾಸ, ಬಣ್ಣಗಳ ಬಳಕೆ, ಅಕ್ಷರಗಳ ಜೋಡಣೆ, ರಚನೆಯು ಕಲಾವಿದ(ವಿನ್ಯಾಸಕಾರ)ನ ಕೈಚಳಕವೇ ಆಗಿದ್ದು ಕಲೆಯ ಸುಂದರ ಅಭಿವ್ಯಕ್ತಿಯಾಗಿದೆ.

ಆಧುನಿಕ ಕಾಲಘಟ್ಟ ಪೈಪೋಟಿಯ ಯುಗವೂ ಆಗಿರುವ ಹಿನ್ನೆಲೆಯಲ್ಲಿ ಪ್ರತಿ ಪತ್ರಿಕೆಗಳು ವಿಶೇಷತೆ, ಪ್ರತ್ಯೇಕ ವೈವಿಧ್ಯತೆಗಳಿಂದ ಗುರುತಿಸಿಕೊಳ್ಳಲು ಹೆಣಗುವುದು ಸಹಜ.ಸುದ್ದಿ, ಬರಹಗಳಲ್ಲಿ ಮಾತ್ರವಲ್ಲದೇ ಕಾಣಿಸುವ ಬಗೆಯಲ್ಲೂ ತುರುಸಿನ ಸ್ಪರ್ಧೆಯಿರುವುದು ವಾಸ್ತವ. ಆ ನೆಲೆಯಲ್ಲಿ ಪತ್ರಿಕೆಗಳಲ್ಲಿ ಬಳಸುವ ಅಕ್ಷರಗಳ ಗಾತ್ರ, ಅಕ್ಷರಗಳ ಆಕಾರ, ಅಕ್ಷರಗಳ ತರಹೇವಾರಿ ಬಗೆಯ ವಿನ್ಯಾಸವು ಸೃಜನಾತ್ಮಕವಾದ ಕಲೆಯ ಕೊಡುಗೆಯೇ.ಈ ಕಾರ್ಯಕ್ಕೆಂದೇ ಪತ್ರಿಕೆಗಳಲ್ಲಿ ಕಲಾವಿದನ ನಿಯೋಜನೆಯಾಗುವುದು ಮಾಧ್ಯಮಗಳಲ್ಲಿ ಕಲೆ-ಕಲಾವಿದನ ಅನಿವಾರ್ಯತೆಗೆ ಶಾಶ್ವತ ಕುರುಹು.

ವೃತ್ತಪತ್ರಿಕೆಗಳ ಮತ್ತೊಂದು ಪ್ರಮುಖಭಾಗವಾಗಿರುವ 'ಪುರವಣಿ' ಮತ್ತು 'ನಿಯತಕಾಲಿಕೆ' ಗಳಲ್ಲಿ ದೃಶ್ಯಕಲಾಭಿವ್ಯಕ್ತಿಗೆ ಹೇರಳ ಅವಕಾಶ. ಕಥೆ, ಕವನ, ಧಾರಾವಾಹಿ, ಪ್ರಬಂಧ, ಹಾಸ್ಯ ಲೇಖನ, ಜೀವನಚರಿತ್ರೆ, ಲೇಖನ, ಚುಟುಕು ಮುಂತಾದ ಬರಹಗಳಲ್ಲಿ ರೇಖಾಚಿತ್ರಗಳಾಗಿ ದೃಶ್ಯಕಲೆಯ ಅನಾವರಣ ಭರಪೂರ.ಓದಿನ ಪಯಣದಾರಂಭಕ್ಕೆ ಪ್ರಥಮಾಕರ್ಷಣೆ, ಪ್ರವೇಶವೇ ಈ ಚಿತ್ರಗಳೆಂಬುದು ನಿಜದ ಮಾತು.ಈ ಪ್ರಾಕಾರಗಳಲ್ಲೂ ವ್ಯಂಗ್ಯಚಿತ್ರಗಳ ಸದ್ದು ಬಲು ಜೋರು.ಶೀರ್ಷಿಕೆ, ಅಕ್ಷರ ಮತ್ತು ಪುಟವಿನ್ಯಾಸಗಳಲ್ಲೂ ಕಲೆಯ ಗುರುತು ಸುಸ್ಪಷ್ಟ.ದಿನಪತ್ರಿಕೆ, ಪುರವಣಿ ಮತ್ತು ನಿಯತಕಾಲಿಕೆಗಳ ಮುಖಪುಟ ಮತ್ತು ಒಳಪುಟ ವಿನ್ಯಾಸದಲ್ಲೂ ಕಲೆಯ ಛಾಯೆ ಅಬಾಧಿತ.

ಸುದ್ದಿಮನೆಗಳಲ್ಲೀಗ ಅಂತರ್ಜಾಲ, ವೆಬ್‌ತಾಣಗಳಿಗೆ ರಾಜಾತಿಥ್ಯ. ಆಯಾ ಪತ್ರಿಕೆಗಳ ವೆಬ್‌ತಾಣ, ಅಂತರ್ಜಾಲ ಪತ್ರಿಕೆ (ಈ-ಪೇಪರ್)ಗಳ ವಿನ್ಯಾಸ ಮತ್ತು ಅಭಿವ್ಯಕ್ತಿಯಲ್ಲೂ ದೃಶ್ಯಕಲೆಯ ಇಣುಕುನೋಟ ಜೋರಾಗಿದ್ದು ವಿಶೇಷ ಮನ್ನಣೆಗೆ ಪಾತ್ರವಾಗಿರುವುದು ಗಮನಿಸಲೇಬೇಕಾದ ಸಂಗತಿ.

ವಿದ್ಯುನ್ಮಾನ ಮಾಧ್ಯಮ

ಸುದ್ದಿಮನೆಗಳನ್ನು 'ತಾಂತ್ರಿಕ ಗೂಡಾ' ಗಿಸಿದ ಕೀರ್ತಿ ವಿದ್ಯುನ್ಮಾನ ಮಾಧ್ಯಮಗಳದ್ದು.ಸುದ್ದಿಗಳ ಪ್ರಸಾರ, ಪ್ರಚಾರ, ವಿಶ್ಲೇಷಣೆ, ಅಭಿವ್ಯಕ್ತಿ, ಧಾಟಿಸುವ ಪರಿ ಸೇರಿದಂತೆ ಎಲ್ಲದರಲ್ಲೂ ಮುದ್ರಣ ಮಾಧ್ಯಮಕ್ಕಿಂತ ತುಂಬಾ ಭಿನ್ನವಾದ ನಡೆ ವಿದ್ಯುನ್ಮಾನ ಮಾಧ್ಯಮಗಳ ವೈಶಿಷ್ಟ್ಯ.ಆಧುನಿಕ ಜಗತ್ತಿನಲ್ಲಿ ಅತಿ ಹೆಚ್ಚು ವೀಕ್ಷಕರನ್ನು ಹೊಂದಿರುವ ವಿದ್ಯುನ್ಮಾನ ಮಾಧ್ಯಮಗಳಲ್ಲೂ ಕಲೆಯ ಹೆಜ್ಜೆಗುರುತುಗಳು ಅಪಾರ.

ವಿದ್ಯುನ್ಮಾನ ಮಾಧ್ಯಮ ಅಪ್ಪಟ ದೃಶ್ಯ ಮಾಧ್ಯಮವಾಗಿರುವುದರಿಂದ ನೋಡುವಿಕೆಗೇ ಪ್ರಾಧಾನ್ಯತೆ. ಆ ನೋಡುವಿಕೆಯನ್ನು ಮತ್ತಷ್ಟು ಆಹ್ಲಾದಕರ-ಸುಂದರಮಯಗೊಳಿಸುವಲ್ಲಿ ಕಲೆಯ ಪಾತ್ರ ಪ್ರಮುಖ. ವಿದ್ಯುನ್ಮಾನ ಮಾಧ್ಯಮಗಳ ಜನಪ್ರಿಯತೆ ಹೆಚ್ಚಿದ ಬೆನ್ನಲ್ಲೇ

ಸುದ್ದಿವಾಹಿನಿಗಳ ಸಂಖ್ಯೆಯಲ್ಲೂ ಗಣನೀಯವಾಗಿ ಏರಿಕೆಯಾಗಿದೆ. 24 ಗಂಟೆಗಳೂ ಸುದ್ದಿ ಬಿತ್ತರಿಸುವ ಧಾವಂತದಲ್ಲಿರುವ ಸುದ್ದಿವಾಹಿನಿಗಳಲ್ಲಿ ಸುದ್ದಿಗಳ ಬಿತ್ತರಿಸುವಿಕೆಯ ಕ್ರಮ (ಪ್ರಸಂಟೇಷನ್)ಕ್ಕೆ ಹೆಚ್ಚು ಆದ್ಯತೆ. ವಿನ್ಯಾಸಕ್ಕೆ ಪ್ರಾಶಸ್ತ್ಯ.ವಾಹಿನಿಗಳ ವಿಶೇಷ ಕಾರ್ಯಕ್ರಮಗಳ ಶೀರ್ಷಿಕೆಯ ವಿನ್ಯಾಸ ಆಕರ್ಷಕವಾಗಿದ್ದಷ್ಟು ಗ್ರಾಹಕರನ್ನು ಆಯಸ್ಕಾಂತದಂತೆ ಸೆಳೆಯಬಹುದು. ಆ ದೆಸೆಯಲ್ಲಿ ಶೀರ್ಷಿಕೆ ಬರಹದ ರಚನೆ, ಅಕ್ಷರ ವಿನ್ಯಾಸ, ಕಾರ್ಯಕ್ರಮಗಳ ಹಿಂಬದಿ ವಿನ್ಯಾಸ (ಬ್ಯಾಕ್‌ಡ್ರಾಪ್), ವೇದಿಕೆಯ ರೂಪುರೇಷೆ (ಸ್ಟೇಜ್ ಡಿಸೈನಿಂಗ್)ಗಳಲ್ಲಿ ಕಲೆಯದ್ದೇ ಕರಾಮತ್ತು. ಹಾಸ್ಯಭರಿತ ಕಾರ್ಯಕ್ರಮಗಳು, ವಿಡಂಬನಾತ್ಮಕ ಕಾರ್ಯಕ್ರಮಗಳ ಪರಿಕಲ್ಪನೆಯನ್ನು ಜಗಜ್ಜಾಹೀರುಗೊಳಿಸುವಲ್ಲಿ ರೇಖಾಚಿತ್ರಗಳ ರೂಪದಲ್ಲಿ ದೃಶ್ಯಕಲೆ ಗೋಚರಿಸಿ ಗಮನಸೆಳೆಯುವುದು ಖಂಡಿತ.

ಮಾಧ್ಯಮಗಳ ಕ್ಯಾಮೆರಾದ ಪ್ರವೇಶಕ್ಕೆ ಅವಕಾಶವಿಲ್ಲದ ನ್ಯಾಯಾಲಯ, ಕಾರಾಗೃಹದ ಕಲಾಪ-ಚಟುವಟಿಕೆ, ಇಬ್ಬರು ವ್ಯಕ್ತಿಗಳ ನಡುವೆ ನಡೆದ ಗೌಪ್ಯ ದೂರವಾಣಿ ಸಂಭಾಷಣೆ, ಮಧ್ಯರಾತ್ರೀಲಿ ನಡೆದ ದರೋಡೆ, ರಸ್ತೆ ಅಪಘಾತ, ಅತ್ಯಾಚಾರ, ಸರಗಳ್ಳತನ ಮುಂತಾದ ಸುದ್ದಿಗಳನ್ನು ನಿರೂಪಿಸುವ ಸಂದರ್ಭಗಳಲ್ಲಿ ಗ್ರಾಫಿಕ್ ಡಿಸೈನ್‌ಗಳಾಧಾರಿತ ಚಿತ್ರಗಳನ್ನು ಬಳಸುವುದುಂಟು. ಒಂದು ಘಟನೆಯನ್ನು ರಸವತ್ತಾಗಿ, ಸುಲಲಿತವಾಗಿ ವೀಕ್ಷಕರಿಗೆ ತಲುಪಿಸುವಲ್ಲಿ ನವೀನ ತಂತ್ರಜ್ಞಾನಾಧಾರಿತ ಕಲೆ ನೆರವಾಗುತ್ತಿದ್ದು ಕಾಲಾನುಕ್ರಮದಲ್ಲಿ ಈ ಬಳಕೆ ಮತ್ತಷ್ಟು ತೀವ್ರ, ವಿಸ್ತಾರವಾಗಿ ವಿದ್ಯುನ್ಮಾನ ಮಾಧ್ಯಮಗಳಲ್ಲಿ ಹರಡಿಕೊಳ್ಳುವುದಂತೂ ಖಚಿತ.

ಬಾನುಲಿ ಮಾಧ್ಯಮದಲ್ಲಿ ಕಲೆಯ ಅಭಿವ್ಯಕ್ತಿ ಅವೆರಡು ಮಾಧ್ಯಮಗಳಿಗಿಂತಲೂ ಬಹಳ ಕಡಿಮೆ.ಶ್ರವ್ಯವೇ ಪ್ರಧಾನವಾಗಿರುವುದರಿಂದ ಮಾತಿಗೇ ಮನ್ನಣೆ. ಕಲೆಯ ಕುರಿತ ಮಾತುಗಳಲ್ಲಿಯೇ ಕಲಾಭಿವ್ಯಕ್ತಿ..! ಇನ್ನು ಮುದ್ರಣ, ವಿದ್ಯುನ್ಮಾನ ಮತ್ತು ಶ್ರವ್ಯ ಮೂರೂ ಮಾಧ್ಯಮಗಳಲ್ಲಿನ ಜಾಹೀರಾತು ಹಾಗೂ ಮಾಧ್ಯಮಗಳ ಕುರಿತ ಪ್ರಚಾರಗಳಲ್ಲಿ ದೃಶ್ಯಕಲೆಯ ಪಾತ್ರವಿರುವುದು ಸರ್ವವಿಧಿತ.

ಮಾಧ್ಯಮಗಳಲ್ಲಿ ಕಲಾಬರಹ-ವರದಿ

ಸುದ್ದಿಮಾಧ್ಯಮಗಳಲ್ಲಿ ಕಲಾಭಿವ್ಯಕ್ತಿಯ ಪರಿ ಒಂದಾದರೆ ಸುದ್ದಿ ಮಾಧ್ಯಮಗಳಲ್ಲಿ ಕಲೆ ಮತ್ತು ಕಲಾವಿದನ ಚಿತ್ರಣ ಅನ್ಯಬಗೆಯದ್ದು.ಮುದ್ರಣ ಮಾಧ್ಯಮಗಳಲ್ಲಿ ಕಲೆ, ಕಲಾವಿದನ ಬಿಂಬಿಸುವಿಕೆಯ ರೀತಿಗಳು ಹಲವು.ಕಲಾಬರಹ, ವರದಿಗಳು ತರಹೇವಾರಿ.ದಿನಪತ್ರಿಕೆಗಳಲ್ಲಿ ಸರ್ವೇಸಾಮಾನ್ಯವಾಗಿ ಹೆಚ್ಚು ಗೋಚರವಾಗುವುದು ಕಲಾಪ್ರದರ್ಶನಗಳ ವರದಿ ಮತ್ತು ಬರಹಗಳು.ಆನಂತರದ ಸ್ಥಾನ ಹೆಸರಾಂತ ಕಲಾವಿದರ ಸಂದರ್ಶನ, ಕಲಾವಿದರ ವ್ಯಕ್ತಿಚಿತ್ರ ಲೇಖನ. ಕಲಾವಿದರಿಗೆ ಪ್ರಶಸ್ತಿ-ಸನ್ಮಾನ, ಕಲಾವಿದನ ವಯಕ್ತಿಕ ಬದುಕಿನ ಏರುಪೇರು, ದುರಂತ, ಸಾವು-ನೋವುಗಳ ಕುರಿತ ವರದಿಗಳದ್ದು.

ಕಲಾಬರಹಗಳಲ್ಲಿ ಚಿತ್ರಗಳ ಪ್ರಕಟಣೆಗೇ ಪ್ರಥಮಾದ್ಯತೆ.ಕಲಾಕೃತಿಗಳ ಚಿತ್ರಗಳೊಡನೆ ಆ ಕಲಾಪ್ರದರ್ಶನದ ವಿಶೇಷ, ಅವಧಿ, ಕಲಾವಿದನ ವಿವರಗಳ ನೀಡಿಕೆ ಮಾಮೂಲು. ಕಲಾವಿದನ ಸಂದರ್ಶನ ಮತ್ತು ಆತನ ವ್ಯಕ್ತಿಚಿತ್ರ ಬರಹಗಳು ಹಾಗೊಮ್ಮೆ ಹೀಗೊಮ್ಮೆ

ಪ್ರಕಟಗೊಳ್ಳುವುದುಂಟು.ಈ ಬರಹಗಳಲ್ಲಿ ಕಲಾವಿದನ ಭಾವಚಿತ್ರ, ಕಲಾಕೃತಿಯ ಚಿತ್ರಗಳ ಪ್ರಕಟಣೆ ಬಹುತೇಕ ಕಡ್ಡಾಯ.ದಿನಪತ್ರಿಕೆಗಳಿಗಿಂತಲೂ ನಿಯತಕಾಲಿಕೆ, ಪುರವಣಿಗಳಲ್ಲಿ ಕಲಾಬರಹಕ್ಕೆ ಹೆಚ್ಚಿನ ಜಾಗ, ಮನ್ನಣೆ.ಈ ಪ್ರಾಕಾರದ ಪತ್ರಿಕೆಗಳ ಆಕರ್ಷಣೆ, ಓದಿಸಿಕೊಳ್ಳುವಿಕೆಯನ್ನು ವೃದ್ಧಿಸುವುದು ಕಲಾಬರಹಗಳ ಹೆಚ್ಚುಗಾರಿಕೆ.

ಮುದ್ರಣ ಮಾಧ್ಯಮಗಳಲ್ಲಿ ಕಲಾವಿದರ ಬರಹ.ಅಂಕಣ, ವಿಮರ್ಶೆಗಳು ಪ್ರಕಟಗೊಳ್ಳುತ್ತವೆ. ನಾಡಿನ ಸಾಕಷ್ಟು ಕಲಾವಿದರು ಕಲೆಯ ಅಂತಃಸತ್ವ, ಕಲಾಬೆಳವಣಿಗೆ, ಕಲಾಕೃತಿಗಳ ಆಂತರ್ಯ ಮತ್ತು ಅನ್ಯ ಕಲಾವಿದರ ಬದುಕು-ಸಾಧನೆ ಕುರಿತು ಬರೆಯುವುದು ಸಾಮಾನ್ಯ.ಕಲೆಯನ್ನು ಹೊರೆತುಪಡಿಸಿ ಸಾಮಾಜಿಕ ವಿದ್ಯಮಾನ. ತವಕ, ತಲ್ಲಣಗಳ ಕುರಿತು ಬರೆಯುವ ಕಲಾವಿದ ಲೇಖಕ ವರ್ಗವೂ ಸಾಕಷ್ಟಿದೆ.ಪ್ರಮುಖ ಘಟನೆಗಳಿಗೆ ಕಲಾವಿದರು ಖುದ್ದಾಗಿ ಪ್ರತಿಕ್ರಿಯೆ ನೀಡುವುದು, ಪತ್ರ ಬರೆಯುವುದು ಸಹ ಕಲಾಬರಹವೇ.

ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕಲಾವರದಿಗಾರಿಕೆಗೆ ಸಾಕಷ್ಟು ಅವಕಾಶವುಂಟು. ಅನಕ್ಷರಸ್ಥರನ್ನೂ ಸುಲಭವಾಗಿ ತಲುಪುವ, ವೀಕ್ಷಕರ ಸಂಖ್ಯೆ ಹೆಚ್ಚು ಇರುವುದರಿಂದ ಸಹಜವಾಗಿಯೇ ಕಲೆ ಮತ್ತು ಕಲಾವಿದನಿಗೆ ಈ ಮಾಧ್ಯಮಗಳ ಬಗೆಗಿನ ಸೆಳೆತ ಕೊಂಚ ಜಾಸ್ತಿ. ಜನರ ಪ್ರೀತಿ, ಗೌರವಾದರಗಳನ್ನು ಕ್ಷಿಪ್ರಗತಿಯಲ್ಲಿ ಸಂಪಾದಿಸಲು ವಿದ್ಯುನ್ಮಾನ ಮಾಧ್ಯಮಗಳು ಬಲು ಸಹಾಯಕಾರಿ. ಈ ಮಾಧ್ಯಮದಲ್ಲಿ ಕಲಾಪ್ರದರ್ಶನವಿರಲಿ, ಕಲಾವಿದನ ಕುರಿತ ವರದಿಯಿರಲಿ ಕಲಾಕೃತಿಗಳ ಪ್ರದರ್ಶನದ ಜೊತೆಗೆ ಕಲಾವಿದನೊಡನೆಯ ಮಾತುಕತೆಯ ಚಿತ್ತರಿಸುವಿಕೆ ಕಟ್ಟಿಟ್ಟಬುತ್ತಿ.ಕಲೆಯಷ್ಟೇ ಕಲಾವಿದನೂ ಜನಮನದೊಳಗೆ ಇಣುಕುವಿಕೆ ಬಲು ಸಲೀಸು.

ಇನ್ನು ಶ್ರವ್ಯ ಮಾಧ್ಯಮದ ಬಾನುಲಿ(ಆಕಾಶವಾಣಿ, ಎಫ್‌ಎಂ ಇತ್ಯಾದಿ)ಗಳಲ್ಲಿ ಮಾತೇ ಬಂಡವಾಳ, ಮಾತೇ ಜೀವಾಳ. ಹಾಗಾಗಿ ಕಲಾಪ್ರದರ್ಶನ, ಕಲಾವಿದನ ಪರಿಚಯ ಎಲ್ಲವೂ ಮಾತಿನ ಮೂಲಕವೇ. ಕಲಾವಿದ ಕಲಾಕೃತಿಯನ್ನು ರಚಿಸುವಾಗ ಬಳಸುವ ಬಣ್ಣ, ಕಲ್ಪನೆಯನ್ನು ಮೂರ್ತರೂಪಕ್ಕಿಳಿಸುವ ವಿಧಾನ, ಕಲಾವಿದನ ಆಕಾಂಕ್ಷೆ, ಕನಸು ಎಲ್ಲವೂ ನಿರೂಪಕ ಇಲ್ಲವೆ ಕಲಾವಿದನ ಮಾತಿನಿಂದಲೇ ವ್ಯಕ್ತವಾಗುವುದರಿಂದ ಈ ಮಾಧ್ಯಮದಲ್ಲಿ ಕಲೆ ಮತ್ತು ಕಲಾವಿದನ ಅಸ್ತಿತ್ವವೆರಡೂ 'ಮಾತಿನ ಕಲೆ' ಯ ಮೇಲೆಯೇ ಅವಲಂಬಿತ.

ಸಂಘರ್ಷ-ಸಂಕಷ್ಟದ ಹಾದಿ

ಸುದ್ದಿ ಮಾಧ್ಯಮಗಳಲ್ಲಿ ಕಲೆ ಮತ್ತು ಕಲಾವಿದನ ಕುರಿತ ಬರಹ, ವರದಿ, ಪ್ರಸಾರಗಳೆಲ್ಲವೂ ಸಕಾರಾತ್ಮಕವಾಗಿಯೇ ಇರದು. ಹಲವು ಬಾರಿ ನಕಾರಾತ್ಮಕ ವಿಷಯಗಳೂ ಪ್ರಕಟಗೊಳ್ಳುತ್ತದೆ. ಕಲಾಕೃತಿಯೊಂದರಲ್ಲಿ ಜಾತಿ, ಧರ್ಮ, ವ್ಯಕ್ತಿ, ಸಂಪ್ರದಾಯ, ನಂಬಿಕೆ ಇತ್ಯಾದಿ ಕುರಿತ ನಿಂದನೆಯ ಆರೋಪಗಳು ಕೇಳಬರುವುದುಂಟು. ಕೆಲವೊಮ್ಮೆ ವಿವಾದಗಳು ಭುಗಿಲೆದ್ದು ಕಂಟಕ ತರುವುದು ಸಹ. ಕಲಾವಿದ ಮತ್ತು ಕಲಾಕೃತಿಯ ಬಗೆಗಿನ ತಪ್ಪುಗ್ರಹಿಕೆಯೋ?ಪೂರ್ವಾಗ್ರಹ ಪೀಡನೆಯೋ?ಸಂಚೋ?ದ್ವೇಷವೋ? ಮತ್ತಿನ್ನೇನೋ ಕಾರಣಗಳು ಸುದ್ದಿ ಮನೆಯಲ್ಲಿ ನುಸುಳಿ ಅವಾಂತರ ಸೃಷ್ಟಿಯಾಗುವುದು ಸುಳ್ಳಲ್ಲ. ಅಂತಹ ಸನ್ನಿವೇಶಗಳಲ್ಲಿ ಕಲಾವಿದನ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆಯಾದ ಉದಾಹರಣೆಗಳಿಗೆ ಕಡಿಮೆಯಿಲ್ಲ. ಕೆಲವು ಬಾರಿ ಸುದ್ದಿ ಮಾಧ್ಯಮ ಮತ್ತು

ದೃಶ್ಯಕಲಾ ಮಾಧ್ಯಮದ ನಡುವೆ ಸಂಘರ್ಷಗಳು ನಡೆದದ್ದು ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. 'ಕೂಡಿನಡೆಯದೆ' ಪರಸ್ಪರ ಸಂಘರ್ಷಕ್ಕಿಳಿಯುವ ಇಂತಹ ಸಂದರ್ಭಗಳು ಕಲಾವಿದನ ಪಾಲಿಗೆ ಅತ್ಯಂತ ಸಂಕಷ್ಟದ ಕ್ಷಣಗಳು.

ಮಾಧ್ಯಮಗಳಲ್ಲಿನ ತಪ್ಪು ವರದಿ, ವ್ಯಾಖ್ಯಾನಗಳಿಂದ ಕಲಾವಿದ ಅನುಭವಿಸುವ ತಳಮಳ, ತೊಂದರೆಗಳು ಅನೇಕ.ಸುದ್ದಿ ಮಾಧ್ಯಮಗಳಲ್ಲಿ ಆಗುವ ಎಡವಟ್ಟು-ತಪ್ಪು 'ಇಂಟರ್‌ಪ್ರಿಟೇಷನ್' ಗಳು ಜಾತಿ, ಧರ್ಮ, ಮತ, ಪಂಥ ಕೇಂದ್ರಿತ, ಕುತ್ಸಿತ ಹಾಗೂ ಅವಕಾಶವಾದಿ ಮನಸ್ಥಿತಿಗಳ ಅಬ್ಬರಕ್ಕೆ ಕಾರಣವಾಗುವುದು ಸತ್ಯ.ಕಲಾವಿದ ಅದರ ಘೋರ ಪರಿಣಾಮವನ್ನು ಅನುಭವಿಸುವುದು ನಿಜಕ್ಕೂ ಬೇಸರದ ಸಂಗತಿ.ಆ ದೆಸೆಯಲ್ಲಿ ಅಂತಾರಾಷ್ಟ್ರೀಯ ಕಲಾವಿದ ಎಂ.ಎಫ್ ಹುಸೇನ್ ಅವರ ಗಡಿಪಾರು ಎಂದಿಗೂ ಅಳಿಸಲಾಗದ ಕಪ್ಪುಚುಕ್ಕೆ, ಆರದ ಗಾಯ, ಮಾಸದ ಕಹಿನೆನಪು.

ಕಲಾ ಚಿಂತನೆ ಕ್ಷೀಣ

ಸುದ್ದಿ ಮಾಧ್ಯಮಗಳಲ್ಲಿ ಕಲೆ ಮತ್ತು ಕಲಾವಿದನ ಚಿತ್ರಣ ಅಬಾಧಿತವಾಗಿರುವುದು ಸಂತೋಷದ ವಿಚಾರ. ಆದರೆ, ಈ ಕಲಾ ಚಿಂತನೆ ನಿರೀಕ್ಷಿತ ಪ್ರಮಾಣದಲ್ಲಿದೆಯೇ? ಎಂಬ ಪ್ರಶ್ನೆಗೆ 'ಇಲ್ಲ' ಎಂಬುದೇ ಉತ್ತರ!.ಸಂಸ್ಕೃತಿಯ ಪ್ರಮುಖ ಭಾಗವಾಗಿರುವ ಕಲೆಯ ಬಗೆಗಿನ ಬರಹ, ಕಲಾವಿದನ ಸಾಮಾಜಿಕ ಗ್ರಹಿಕೆ-ದೃಷ್ಟಿಕೋನಗಳನ್ನು ಬಿಂಬಿಸುವ ಲೇಖನಗಳು ಜನಸಾಮಾನ್ಯರ ಜೀವನಶೈಲಿ, ಆಲೋಚನಾ ಕ್ರಮ ಮತ್ತು ಮನೋಧರ್ಮವನ್ನು ಆರೋಗ್ಯಪೂರ್ಣ ನೆಲೆಗೆ ಕೊಂಡೊಯ್ಯುವುದು ಸತ್ಯ. ಹಾಗಾಗಿ ಸ್ವಾಸ್ಥ ಸಮಾಜ ನಿರ್ಮಾಣದಲ್ಲಿ ಕಲೆ-ಕಲಾವಿದನ ಪಾತ್ರ ಪ್ರಮುಖ ಹಾಗೂ ಅತ್ಯಂತ ಜರೂರು ಕೂಡ. ಆದರೆ, ರಾಜಕೀಯ, ಅಪರಾಧ, ಸಿನಿಮಾ ಸುದ್ದಿಗಳ ಬೆನ್ನಿಗೆ ಬಿದ್ದಿರುವ ಮಾಧ್ಯಮಗಳಲ್ಲಿ 'ಕಲಾ ಚಿಂತನೆ' ದಿನೇ ದಿನೇ ಕ್ಷೀಣಿಸುತ್ತಿರುವುದು ಖಂಡನಾರ್ಹ.

ಜಾಗತೀಕರಣ ಮತ್ತು ವ್ಯಾಪಾರೀಕರಣದ ಫಲವಾಗಿ ಪೇಜ್3 ಸಂಸ್ಕೃತಿ ಮಾಧ್ಯಮದೊಳಗೆ ನುಸುಳಿದ ಮೇಲೆ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಬಗೆಗಿನ ಚಿಂತನೆಯಿಂದ ಮಾಧ್ಯಮಗಳು ವಿಮುಖವಾಗುತ್ತಿರುವುದು ಅನಾರೋಗ್ಯಕರ ಬೆಳವಣಿಗೆ. ಇತ್ತೀಚೆಗಂತೂ ಮಾಧ್ಯಮ ಜಗತ್ತಿನಲ್ಲಿ ಕಲಾವರದಿಗಾರಿಕೆ ಆಟಕ್ಕುಂಟು ಲೆಕ್ಕಕ್ಕಿಲ್ಲ. ಉದ್ದೇಶಿತ ಕಡೆಗಣನೆ. ಆ ಪೈಕಿ ವಿದ್ಯುನ್ಮಾನ ಮಾಧ್ಯಮಗಳ ಮೇಲಾಟ ಜೋರು, ಮುದ್ರಣ ಮಾಧ್ಯಮಗಳಲ್ಲಿ ಕಲಾ ಚಿಂತನೆಯ ಪರಿಸ್ಥಿತಿ ಕೊಂಚ ವಾಸಿಯಾದರೂ ಸಮಸ್ಯೆ ಬಗೆಹರಿದಿಲ್ಲ. ದಿನಪತ್ರಿಕೆಗಳಲ್ಲಿ ಕಲಾಕಾರ್ಯಕ್ರಮಗಳ ವರದಿ ಬಂದರೆ ಅದೃಷ್ಟ ಎಂಬಂತಹ ಸ್ಥಿತಿ..!

'ಕಡಿಮೆ ಪದಗಳು ಹೆಚ್ಚು ಸುದ್ದಿ' (ಲೆಸ್ ವರ್ಡ್ಸ್ ಮೋರ್ ನ್ಯೂಸ್) ಸೂತ್ರ ಸದ್ದಿಲ್ಲದೆ ಮಾಧ್ಯಮಗಳಲ್ಲಿ ಸ್ಥಾಯಿಯಾಗಿರುವ ಹಿನ್ನೆಲೆಯಲ್ಲಿ ಎಲ್ಲಾ ಸುದ್ದಿಗಳಿಗೂ ಈಗ ಮೊಟಕಿನ ಭಾಗ್ಯ.!ಕಲಾಬರಹ-ವರದಿಗಳು ಈ 'ಭಾಗ್ಯ'ದ ಹೆಚ್ಚು ಫಲಾನುಭವಿ.ಪರಿಣಾಮ ಕಲಾವಿದನಿಗೆ ಪ್ರಶಸ್ತಿ-ಮನ್ನಣೆ ದೊರೆತ ಸುದ್ದಿಯಾಗಲಿ, ಪದ್ಮಭೂಷಣದಂತಹ ಶ್ರೇಷ್ಠ ಗೌರವ ಪಡೆದ ಕಲಾವಿದನ ಸಾವಿನ ಸುದ್ದಿಯಾಗಲಿ 'ಸಿಂಗಲ್ ಕಾಲಂ' ಗೆ ಸೀಮಿತ.ಅದೂ ತಕ್ಷಣ ಗಮನಕ್ಕೆ ಬಾರದ ಕಡೆ ಪ್ರಕಟಗೊಳ್ಳುತ್ತಿರುವುದು ನೋವಿನ ಸಂಗತಿ.ಮುಖಪುಟಗಳೇನಿದ್ದರೂ ರಾಜಕೀಯ, ರೋಚಕ ಮತ್ತು ರಂಜಕ ಸುದ್ದಿಗಳಿಗೆ ಮೀಸಲು.ವಿದ್ಯುನ್ಮಾನ ಮಾಧ್ಯಮಗಳಲ್ಲಂತೂ ಸ್ಕ್ರೋಲಿಂಗ್' ಅಷ್ಟೇ.

ಪುರವಣಿ, ನಿಯತಕಾಲಿಕೆಗಳಲ್ಲಿ ಕಲೆಯ ಕುರಿತ ಚಿಂತನಾಲಹರಿಗಳು ಆಗಾಗ ಪ್ರಕಟಗೊಂಡರೂ ದಿನಕಳೆದಂತೆ ಅವುಗಳ ಪ್ರಮಾಣ ಸಹ ಕಡಿಮೆಯಾಗುತ್ತಿರುವುದು ಕಟುವಾಸ್ತವ. ಕಲಾ ಅಂಕಣ-ಅವಲೋಕನಗಳು ಮರೆಯಾಗಿವೆಯೇನೋ ಎಂಬಷ್ಟು ವಿರಳ.ಕಲಾವಿಮರ್ಶೆಯ ಪ್ರಕಟಣೆಗೂ ಇಂತಹುದೇ ಸಮಸ್ಯೆ. ವಿಮರ್ಶೆ ಪ್ರಕಟಗೊಂಡರೂ ಅದು ವಿಸ್ತೃತವಾಗಿರದೆ ಒಂದು ಸ್ಥೂಲನೋಟಕ್ಕಷ್ಟೆ ಸೀಮಿತವಾಗಿರುವುದು ವಿಷಾದನೀಯ. ವಿದ್ಯುನ್ಮಾನ ಮಾಧ್ಯಮಗಳಲ್ಲಿ ಕಲಾ ಅವಲೋಕನ ಅಪರೂಪಕ್ಕೊಮ್ಮೆ ಬಂದರೆ ಹೆಚ್ಚು. ಕನ್ನಡದ ಸುದ್ದಿ ಮಾಧ್ಯಮಗಳಿಗೆ ಹೋಲಿಸಿದರೆ ಆಂಗ್ಲ ಸುದ್ದಿ ಮಾಧ್ಯಮಗಳಲ್ಲಿ ಕಲಾಚಿಂತನೆ, ಕಲೆ-ಕಲಾವಿದನ 'ಎಕ್ಸ್‌ಪೋಸ್' (ಪ್ರತಿಬಿಂಬಿಸುವಿಕೆ)ಗೆ ಈಗಲೂ ಉತ್ತಮ ಅವಕಾಶವಿರುವುದು ಸಮಾಧಾನಕರ ಸಂಗತಿ. ಆ ದೂರದೃಷ್ಟಿಯ ಅಳವಡಿಕೆ ಪ್ರಾದೇಶಿಕ ಸುದ್ದಿ ಮಾಧ್ಯಮಗಳಲ್ಲೂ ಆಗಬೇಕಿದೆ.ಇನ್ನು ಶ್ರವ್ಯ ಮಾಧ್ಯಮಗಳಲ್ಲಿ ಕಲಾಚಿಂತನೆಯದ್ದು ಬದಲಾಗದ ಸ್ಥಿತಿ.ಈ ಮುಂಚೆ ಇದ್ದಷ್ಟೇ ಅವಕಾಶ ಮತ್ತು ಬಿತ್ತರಿಸುವಿಕೆ ಪ್ರಸ್ತುತವೂ ಮುಂದುವರೆದಿರುವುದು ಸಂತೋಷದ ಸಮಾಚಾರ.

ಆಗಬೇಕಿರುವುದೇನು..?

ರಾಜಕೀಯ, ನ್ಯಾಯಾಂಗ, ಅಪರಾಧ, ಪತ್ತೇದಾರಿ, ಸಿನಿಮಾ, ಫ್ಯಾಷನ್, ಸಚಿವಾಲಯದ ವರದಿಗಾರಿಕೆಗೆ ನೀಡುವಷ್ಟೇ ಪ್ರಾಧಾನ್ಯತೆಯನ್ನು ಸುದ್ದಿ ಮಾಧ್ಯಮಗಳು 'ಸಾಂಸ್ಕೃತಿಕ ವರದಿಗಾರಿಕೆ' ಗೂ ಕೊಡುವುದು ಅತ್ಯವಶ್ಯ. ಅದೊಂದೇ ಮಾಧ್ಯಮಗಳಲ್ಲಿ ಕಲಾಚಿಂತನೆಯ ಅವಗಣನೆಯ ನಿವಾರಣೆಗೆ ಇರುವ ಪರಿಹಾರ. ಕಲೆ, ಸಂಸ್ಕೃತಿಯ ಬಗ್ಗೆ ವಿಶೇಷ ಆಸಕ್ತಿ, ಅಭಿರುಚಿ ಮತ್ತು ದೂರದೃಷ್ಟಿ ಇರುವಂತಹವರು ಮಾಧ್ಯಮಗಳ ಬಹುಮುಖ್ಯ ಸ್ಥಾನಗಳಲ್ಲಿದ್ದರೆ ಪರಿಸ್ಥಿತಿ ಸುಧಾರಣೆಯಾಗುವುದರಲ್ಲಿ ಎರಡು ಮಾತಿಲ್ಲ. ಸಂಸ್ಕೃತಿಯನ್ನು ಬಿಂಬಿಸುವ ಮೂಲಕ ಆರೋಗ್ಯವಂತ ಸಮಾಜ ಕಟ್ಟುವ ಮೂಲ ಕರ್ತವ್ಯ-ಪ್ರಜ್ಞೆಗೆ ಮಾಧ್ಯಮಗಳು ಬೆನ್ನು ತೋರಿಸುವುದು ನ್ಯಾಯವಲ್ಲ. ಸಂಸ್ಕೃತಿ ಮನುಷ್ಯತ್ವವನ್ನು ಅರಳಿಸುತ್ತದೆ, ಸಂಬಂಧಗಳನ್ನು ಬೆಸೆಯುತ್ತದೆ, ಮನಸಾಕ್ಷಿಯನ್ನು ಜಾಗೃತಗೊಳಿಸಿ ಸಮಾಜವನ್ನು ಸಂರಕ್ಷಿಸುತ್ತದೆ ಎಂಬ ಸತ್ಯವನ್ನು ಮಾಧ್ಯಮಗಳು ಮರೆಯಬಾರದು.ಸಾಂಸ್ಕೃತಿಕ ಪತ್ರಿಕೋದ್ಯಮ, ಕಲೆ, ಕಲಾವಿದ, ಕಲಾಬರಹಗಳಿಗೆ ಸಿಗಲೇಬೇಕಾದ ನ್ಯಾಯೋಚಿತ ಮನ್ನಣೆ-ಅವಕಾಶಗಳನ್ನು ನೀಡುವತ್ತ ಸುದ್ದಿಮನೆಯ ಮುಖ್ಯಸ್ಥರು ಇನ್ನಾದರೂ ಚಿಂತಿಸಬೇಕು.

ಪ್ರಶ್ನೆ, ಅಸಮಾಧಾನಗಳ ಸರಮಾಲೆ

ಸುದ್ದಿ ಮಾಧ್ಯಮಗಳಲ್ಲಿ ಪ್ರಕಟ, ಬಿತ್ತರಗೊಳ್ಳುವ ಕಲಾವರದಿ, ಬರಹ ಮತ್ತು ಚಿಂತನೆಗಳು ಸವ ರ್ಪಕವಾಗಿವೆಯೇ?ನಿಷ್ಪಕ್ಷಪಾತವಾಗಿದೆಯೇ?ಕಲಾ ವರದಿಗಾರಿಕೆಯಲ್ಲಿ ತೊಡಗುವ ಮಾಧ್ಯಮ ಮಂದಿಗೆ ಇರಬೇಕಾದ ಅರ್ಹತೆಗಳೇನು?ಪತ್ರಕರ್ತರಲ್ಲಿ ರಸಗ್ರಹಣದ ಕೊರತೆ ಇದೆಯೇ?ಸುದ್ದಿ ಮಾಧ್ಯಮಗಳಲ್ಲಿ ಕಲಾವಿದರಿಗೆ ಸಮಾನ 'ಅಭಿವ್ಯಕ್ತಿ' ಮತ್ತು ಪ್ರಚಾರ ಸಿಗುತ್ತಿದೆಯೇ?ಪತ್ರಕರ್ತರು ಹಾಗೂ ಕಲಾವಿದರ ನಡುವೆ ಕಂದಕಗಳಿವೆಯೇ?ಸಂವಹನ-ಅರ್ಥವಂತಿಕೆ-ಗ್ರಹಿಕೆಯಲ್ಲಿ ಲೋಪಗಳಾಗುತ್ತಿವೆಯೇ? ದೃಶ್ಯಕಲೆಗೆ ಮಾಧ್ಯಮಗಳಲ್ಲಿ ಯಾವ ತೆರನಾದ ಮಾನ್ಯತೆಗಳು

ಸಿಗಬೇಕಿದೆ..? ಕಲಾಬರಹ, ವಿಮರ್ಶೆ, ಅವಲೋಕನಗಳು ಯಾವ ಸ್ವರೂಪದಲ್ಲಿರಬೇಕು?

ಇಂತಹ ಹತ್ತು ಹಲವಾರು ಪ್ರಶ್ನೆಗಳು ಕಲಾವಲಯದಲ್ಲಿ ಅಂದಿಗೂ ಇಂದಿಗೂ ಜೀವಂತವಾಗಿವೆ. ಇವುಗಳಿಗೆ ಉತ್ತರ ಹುಡುಕುವ ಪ್ರಯತ್ನ ಅಲ್ಲಲ್ಲಿ ನಡೆದಿದೆಯಾದರೂ ಪೂರ್ಣಪ್ರಮಾಣದಲ್ಲಿ ಆಗಿಲ್ಲದಿರುವುದು ಮಾಧ್ಯಮಗಳ ಬಗೆಗಿನ ಕಲೆ-ಕಲಾವಿದರ ಅಸಮಾಧಾನವನ್ನು ಜೀವಂತವಾಗಿಟ್ಟಿರುವುದು ಸರ್ವರೂ ಒಪ್ಪಲೇಬೇಕಾದ ಸತ್ಯ.

ಸುದ್ದಿ ಮಾಧ್ಯಮಗಳಲ್ಲಿ ಬರುವ ಕಲಾವರದಿ, ಬರಹಗಳು ಸಮರ್ಪಕವಾಗಿಲ್ಲವೆಂಬ ಮಾತು ಇಂದು ನೆನ್ನೆಯದಲ್ಲ. ಆದರೆ, ನಿರೀಕ್ಷಿತ ಮಾದರಿಯಲ್ಲಿ ಕಲೆ-ಕಲಾವಿದನನ್ನು ಹಂಸಕ್ಷೀರ ನ್ಯಾಯಾನುಸಾರ 'ಪ್ರತಿಬಿಂಬಿಸು' ವಲ್ಲಿ ಮಾಧ್ಯಮಗಳು ಹಿನ್ನೆಡೆ ಸಾಧಿಸಿರುವುದು ಮಾತ್ರ ಅಪ್ಪಟ ಸತ್ಯ.ಪತ್ರಿಕೋದ್ಯಮ ಸಾಹಿತ್ಯ ಶುದ್ಧ ಅವಸರದ ಸಾಹಿತ್ಯ.ಮಾಧ್ಯಮ ಮಂದಿಗೆ ಆಳವಾದ ಅಧ್ಯಯನ, ಸಂಶೋಧನೆಗೆ ಸಮಯಾವಕಾಶವಿರುವುದಿಲ್ಲ. ಆ ಕ್ಷಣಕ್ಕೆ ಸಂಪಾದಕರ ಸೂಚನೆಗನುಗುಣವಾಗಿ ವರದಿ, ಬರಹಗಳನ್ನು ಸಿದ್ಧಪಡಿಸುವುದು ಅನಿವಾರ್ಯ. ಹಾಗಾಗಿ ಕಲೆ-ಕಲಾವಿದನನ್ನು ಪೂರ್ಣವಾಗಿ ಅಧ್ಯಯನಿಸಲಾಗದು ಎಂಬುದು ಆ ಕ್ಷೇತ್ರೀಯರಿಗಿರುವ ಮಿತಿ. ಆದರೂ, ಕುಂಚಕಲೆ ಅರಳುವ ಬಗೆ, ಬಣ್ಣಗಳ ಚಿನ್ನಾಟ, ಗೆರೆಗಳ ಬಳಕೆಯ ಕ್ರಮ, ಕಲೆಯ ಪರಿಭಾಷೆ, ಪಾರಿಭಾಷಿಕ ಪದಗಳು, ಕಲಾ ಇತಿಹಾಸದ ಕೆಲ ಮಾಹಿತಿ, ಆ ಕಲೆ ಬೆಳೆದುಬಂದ ಹಾದಿ, ಕಲಾವಿದರು ರೂಪಗೊಳ್ಳುವ ರೀತಿ ಮತ್ತು ನಿರ್ದಿಷ್ಟ ಕಲಾವಿದನ ಬಗ್ಗೆ ಪ್ರಾಥಮಿಕ ಅರಿವು ಇರಲೇಬೇಕು.ಅರಿವೆಂಬುದು ಅರಿತು ತಿಳಿದುಕೊಳ್ಳುವುದಾಗಿರುವುದರಿಂದ ಓದಿಯೋ, ಕೇಳಿಯೋ ಇಲ್ಲವೆ ವಿಷಯ ಸಂಗ್ರಹಿಸಿಯೋ ಈ ಎಲ್ಲಾ ಮಾಹಿತಿಗಳನ್ನು ಸಾಂಸ್ಕೃತಿಕ ವರದಿಗಾರಿಕೆ ಮಾಡುವ ಪತ್ರಕರ್ತ ತಿಳಿದುಕೊಂಡಿರಲೇಬೇಕು.ಇನ್ನು ಕಲಾವಿದನ ಹುಟ್ಟು, ಹಿನ್ನೆಲೆ, ಅಭಿವ್ಯಕ್ತಿಯ ಮಾದರಿ ಮತ್ತು ಮನೋಧರ್ಮವನ್ನು ಗ್ರಹಿಸಿದರೆ ಕಲಾಕೃತಿಯನ್ನು ಅರ್ಥ ಮಾಡಿಕೊಂಡಂತೆಯೇ. ಇಂತಹದೊಂದು ಗ್ರಹಿಕೆ ದಕ್ಕಬೇಕಾದರೆ ಪತ್ರಕರ್ತನಾದವನಿಗೆ ಕಲೆ, ಸಂಸ್ಕೃತಿಯ ಕುರಿತು ಆಸಕ್ತಿ, ಅಭಿರುಚಿ ಅತ್ಯವಶ್ಯ. ಕಲೆ-ಸಂಸ್ಕೃತಿಯ ಪರಂಪರೆ, ಇತಿಹಾಸದ ಬಗ್ಗೆ ಸ್ಥೂಲವಾದ ಜ್ಞಾನ ಅಗತ್ಯ. ಆಗಿದ್ದಾಗ ಕಲಾ ಬರಹದಲ್ಲಾಗಲಿ, ವರದಿಯಲ್ಲಾಗಲಿ ಗುರುತರ ಲೋಪವಾಗದು.

ಮಾಧ್ಯಮದ ವರದಿಗಳಲ್ಲಿ ಕಲೆ ಮತ್ತು ಕಲಾವಿದರ ಬಗ್ಗೆ ಪಕ್ಷಪಾತದ ಧೋರಣೆ ಇಲ್ಲವೆಂದೇನಿಲ್ಲ. ಮಾಧ್ಯಮಗಳು ಆರಂಭದಿಂದ ಇಂದಿಗೂ 'ಕೆಲವೇ ಮಂದಿ'ಯ ಬಿಗಿಹಿಡಿತದಲ್ಲಿರುವ ಕಾರಣ ಕೆಲವರಿಗಷ್ಟೇ ಮನ್ನಣೆ-ವಿಶೇಷ 'ಪ್ರಚಾರ'ದ ಸುಯೋಗ. ಹೀಗಾಗಿ ಎಲೆಮರೆಯಕಾಯಿಯಂತಿರುವ ಅಸಂಖ್ಯ ಪ್ರತಿಭೆಗಳು ಬೆಳಕಿಗೆ ಬರುವುದು ಕಷ್ಟಸಾಧ್ಯ. ಕಲಾ ಸಾಹಿತ್ಯ ಮತ್ತು ಕಲಾಕೃತಿಯ ವಿಮರ್ಶೆಯಲ್ಲೂ ಅಷ್ಟೇ.ಒಂದು ನಿರ್ದಿಷ್ಟ ಗುಂಪು ಆ ಗುಂಪಿನಲ್ಲಿರುವ ಸದಸ್ಯ ಕಲಾವಿದರನ್ನು 'ಪ್ರತಿಬಿಂಬಿಸಲು' ಪರಸ್ಪರ ಒಳಒಪ್ಪಂದದ ಮೇರೆಗೆ ಸದಾ ಒಗ್ಗಟ್ಟಾಗಿ ಶ್ರಮಿಸುತ್ತದೆ. ವಿಮರ್ಶೆಯ ನೆಪದಲ್ಲಿ ಕೆಲವರಿಗೆ ಶ್ರೇಷ್ಠತೆಯ ಪುಷ್ಪಾರ್ಚನೆ, ಹಲವರಿಗೆ ತೆಗಳಿಕೆಯ ಚೂರಿ ಇರಿತ ಅನೂಚಾನವಾಗಿ ನಡೆಯುತ್ತಲೇ ಇದೆ.ಕಲೆ ಮತ್ತು ಕಲಾವಿದನನ್ನು ನಿಷ್ಪಕ್ಷಪಾತವಾಗಿ ನೋಡುವ ಪರಿಪಾಠವೇ ಸುದ್ದಿ ಮಾಧ್ಯಮ ಮತ್ತು ಕಲಾವಲಯದಲ್ಲಿ ಬೆಳೆದಿಲ್ಲದಿರುವುದು ನಿಜಕ್ಕೂ ದುರಂತ.ಕಲಾವಿದರಲ್ಲಿ ಪರಸ್ಪರ ಕಾಲೆಳೆಯುವಿಕೆ, ತೇಜೋವಧೆ, ಅಗೌರವದಿಂದ ಕಾಣುವ, ನಡೆದುಕೊಳ್ಳುವ, ಕಲಾವಿದರ ಬದಲಾಗದ ವರ್ತನೆಗಳು ಕಲಾ

ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿರುವುದು ಕಟುವಾಸ್ತವ ಮತ್ತು ವಿಪರ್ಯಾಸದ ಸಂಗತಿ.

ಕರಗಲಿ ಕಂದರ

ಸಾಂಸ್ಕೃತಿಕ ಪತ್ರಿಕೋದ್ಯಮದಲ್ಲಿ ಸಕ್ರಿಯವಾಗಿರುವ ಪತ್ರಕರ್ತರು ಮತ್ತು ಕಲಾವಿದರ ನಡುವಿನ ತಪ್ಪುಗ್ರಹಿಕೆ ಹಾಗೂ ತಪ್ಪು ವರದಿಗಾರಿಕೆಯನ್ನು ಹೋಗಲಾಡಿಸುವ ಪ್ರಯತ್ನ ಅತ್ಯಂತ ಜರೂರಾಗಿ ನಡೆಯಬೇಕಿದೆ.ಆ ದೆಸೆಯಲ್ಲಿ ಸಾಹಿತ್ಯ ಅಕಾಡೆಮಿ, ಚಲನಚಿತ್ರ ಅಕಾಡೆಮಿಗಳು ಪತ್ರಕರ್ತರಿಗಾಗಿಯೇ ಆಯೋಜಿಸುವ ರಸಗ್ರಹಣ ಶಿಬಿರಗಳು ಮಾದರಿ.ಈವರೆಗೂ ಕರ್ನಾಟಕ ಲಲಿತಕಲಾ ಅಕಾಡೆಮಿ ಮತ್ತು ಕಲಾವಲಯ ಅಂತಹದೊಂದು ಚಿಂತನೆಯನ್ನೂ ನಡೆಸಿಲ್ಲದಿರುವುದು ಆಶ್ಚರ್ಯಕರ ಮತ್ತು ವಿಷಾದಕರ.ಮುಂಬರುವ ದಿನಗಳಲ್ಲಿ ಅಂತಹ ಶಿಬಿರ ಹಮ್ಮಿಕೊಳ್ಳಲು ಅಕಾಡೆಮಿ ಬಳಗ ಕಾರ್ಯೋನ್ಮುಖವಾಗುತ್ತಿದೆಯೆಂಬ 'ಮಾಹಿತಿ' ಆಶಾಭಾವ ಮೂಡಿಸಿರುವುದು ನಿಜ. ಇದೊಂದು ಮೇಲ್ಪಂಕ್ತಿಯ ವಿಚಾರವಂತೂ ಹೌದು.

ಕಲಾವಿದರೆಲ್ಲರೂ ಧರ್ಮ, ಜಾತಿ, ಮತ, ಪಂಥಗಳ ಭೇದಭಾವವಿಲ್ಲದೆ, ಸಿನಿಕತನವಿಲ್ಲದೆ ಒಂದೆಡೆ ಕಲೆತು ಹೊಸದಾಗಿ ರಚಿಸಲ್ಪಟ್ಟ ಕಲಾಕೃತಿ ಮತ್ತು ಉದಯೋನ್ಮುಖ ಕಲಾವಿದನ ಅಭಿವ್ಯಕ್ತಿಯ ಕ್ರಮ-ಪ್ರತಿಭೆ-ಚಿಂತನಾಲಹರಿಯ ಕುರಿತು ಚರ್ಚಿಸುವ, ಸೂಕ್ತ ಸಲಹೆ-ಮಾರ್ಗದರ್ಶನ ಮಾಡುವ ಈ ಹಿಂದೆ ಇದ್ದಂತಹ ಪರಿಪಾಠ ಈಗ ಕಣ್ಮರೆಯಾಗಿದೆ. ಕಲಾವಿದರು ಯಾವುದೇ ವಯೋಮಾನದವರಿರಲಿ, ಪರಸ್ಪರ ಗೌರವ, ಸಮನ್ವಯ ಮತ್ತು ಅಭಿಮಾನಗಳೇ ಇಲ್ಲದಂತಹ ವಿಚಿತ್ರ ಪರಿಸ್ಥಿತಿ ಇಂದು ನಿರ್ಮಾಣವಾಗಿದೆ.ಕಲೆ ಮತ್ತು ಕಲಾ ಸಮುದಾಯಕ್ಕೆ ಮಾರಕವಾಗಿರುವ ಇಂತಹ ನಡವಳಿಕೆ-ಪದ್ಧತಿಗಳ ಮೂಲೋತ್ಪಾಟನೆ ಮೊದಲಾಗಬೇಕು.ಕಲಾವಿದರು ಈರ್ಷ್ಯೆಗಳನ್ನು ತೊರೆದು ತೆರೆದ ಮನಸ್ಸಿನಿಂದ ಪರಸ್ಪರ ಕಲೆತು ಬೆರೆತು ಸಂವಾದಿಸಬೇಕು.ಅಂತೆಯೇ ಮಾಧ್ಯಮದ ಮಂದಿಯೊಂದಿಗೂ ಬೆರೆಯಬೇಕು. ಮೇಲು-ಕೀಳೆಂಬ ಒಣಪ್ರತಿಷ್ಠೆ, ಬುದ್ಧಿವಂತ-ದಡ್ಡನೆಂಬ ಛಿದ್ರಭಾವವನ್ನು ಬದಿಗೊತ್ತಿ ಕಲೆ-ಕಲಾಕೃತಿಯ ಕುರಿತು ಪತ್ರಕರ್ತರೊಡನೆ ಒಮ್ಮನಸ್ಸಿನಿಂದ ಮುಕ್ತವಾಗಿ ಚರ್ಚಿಸಬೇಕು.ಆಗಷ್ಟೇ ಕಲಾಬರಹಗಳಲ್ಲಿನ ಅಸಮತೋಲನ ನಿವಾರಣೆಗೊಂಡು ಗಟ್ಟಿತನ ಮೂಡಲು ಸಾಧ್ಯ.ಇದರೊಟ್ಟಿಗೆ ಚರ್ವಿತಚರ್ವಣದಂತಹ, ಕ್ಲೀಷೆ ಹುಟ್ಟಿಸುವ ಕಲಾಕೃತಿಗಳ ರಚನೆ, ಕಲಾಪ್ರದರ್ಶನಗಳನ್ನು ಬಿಟ್ಟು ಹೊಸ ದೃಷ್ಟಿಕೋನ, ಆಯಾಮ ಮತ್ತು ಚೌಕಟ್ಟಿನ ನೋಡುಗರನ್ನು ಕೆಣುಕುವಂತಹಕ ಕಲಾಕೃತಿಗಳನ್ನು ರಚಿಸಿ ಮಾಧ್ಯಮಗಳ ಗಮನಸೆಳೆಯಬೇಕು.ಚರ್ಚೆ ಹುಟ್ಟುಹಾಕುವಂತಿರಬೇಕು. ಆಗ ಕಲಾಚಿಂತನೆ, ಬರಹಗಳ ಪ್ರಮಾಣಗಳು ಮಾಧ್ಯಮಗಳಲ್ಲಿ ಸಹಜವಾಗಿಯೇ ಹೆಚ್ಚಾಗುವುದು ಖಂಡಿತ.ಜೊತೆಗೆ ಕಲಾವಿದರು ಕೇವಲ ತಮ್ಮ ವ್ಯಯಕ್ತಿಕ ಸಾಧನೆ ಮತ್ತು ಸಂಪಾದನೆಗಷ್ಟೇ ಸೀಮಿತವಾಗದೆ ಸಮುದಾಯದ ಏಳ್ಗೆಗೆ ಚಿಂತಿಸಬೇಕು. ಸಮುದಾಯವನ್ನು ಸದೃಢವಾಗಿ ಬೆಳೆಸಿ ಮುಂದಿನ ಪೀಳಿಗೆಗೆ ದಾಟಿಸುವತ್ತ ಆದ್ಯ ಗಮನಹರಿಸಬೇಕು.ಸಮುದಾಯದ ಹಿತಾಸಕ್ತಿಯಲ್ಲೇ ಕಲಾವಿದನ ಹಿತವೂ ಅಡಗಿದೆ ಎಂಬ ಸಾರ್ವಕಾಲಿಕ ಸತ್ಯವನ್ನು ಕಲಾವಿದರೆಲ್ಲರೂ ಅರಿತು ಈ ಸಾಮುದಾಯಿಕ ಪ್ರಜ್ಞೆಯನ್ನು ತಮ್ಮ ಬದುಕಿನ 'ಮೌಲ್ಯ' ವಾಗಿ ಅಳವಡಿಸಿಕೊಂಡು ಚಾಚೂತಪ್ಪದೆ ಅನುದಿನ ಅನುಕ್ಷಣ ಅನೂಚಾನವಾಗಿ ಜೀವನಪರ್ಯಂತ ಪಾಲಿಸಬೇಕು.

ಇನ್ನು ಕಲಾಬರಹದ ಸ್ವರೂಪದ ಬಗ್ಗೆಯೂ ಸ್ಪಷ್ಟತೆ ಮೂಡಬೇಕಿದೆ.ಈ ಬರಹಗಳಲ್ಲಿ ಕಲಾವಿದನ ಆಂತರ್ಯ ಕ್ಯಾನ್ವಾಸ್ ಮೇಲೆ ಪ್ರತಿಬಿಂಬಿತವಾಗಿರುವ ಬಗೆಯನ್ನು ಅಕ್ಷರರೂಪಕ್ಕಿಳಿಸುವ ಪ್ರಾಮಾಣಿಕ ಪ್ರಯತ್ನವಾಗಬೇಕಿದೆ.ಕಲಾವಿದನ ವಯಕ್ತಿಕ ವಿವರಗಳಿಗಿಂತಲೂ ಆತನ ಆಲೋಚನಾ ಕ್ರಮ, ಬೆಳೆದ ಪರಿಸರ, ಸಾಗುತ್ತಿರುವ ಹಾದಿ ಮತ್ತು ಬಣ್ಣಗಳೊಡನೆ ಆತನಿಗಿರುವ ಬಂಧ-ಭಾವನಾತ್ಮಕತೆಯನ್ನು ಹಿಡಿದಿಡುವುದು ಬಲು ಮುಖ್ಯ. ವಿಮರ್ಶೆಗಳು ವಸ್ತುನಿಷ್ಠವಾಗಿರುವಂತೆ ಎಚ್ಚರವಹಿಸಬೇಕು.ವೈಭವೀಕರಣಕ್ಕಾಗಲಿ, ತುಷ್ಟೀಕರಣಕ್ಕಾಗಲಿ ಅವಕಾಶ ನೀಡಲೇಬಾರದು.ಕಲಾವಿದ ಲೇಖಕರೂ ಸಹ ಪ್ರಾಂಜಲ ಮನಸ್ಸಿನಿಂದ ಯುವಪೀಳಿಗೆಯ ಕಲಾಕೃತಿಗಳನ್ನು ವಿಮರ್ಶಿಸಿ ಪ್ರೋತ್ಸಾಹಿಸಬೇಕು.ಯುವಕಲಾವಿದ ಬರಹಗಾರರು ಹಿರಿಯ ಕಲಾವಿದರ ಬಗೆಗಿನ ಲೇಖನಗಳನ್ನು 'ಪತ್ರಿಕಾ ಚೌಕಟ್ಟಿ'ಗೆ ಅನುಗುಣವಾಗಿ ಸಂಕ್ಷಿಪ್ತವಾಗಿ ಮತ್ತು ಆರಾಧಾನಭಾವರಹಿತವಾಗಿ ಬರೆಯಬೇಕು.

ಮಾಧ್ಯಮಗಳು ಕಲಾಬರಹಗಳಿಗೆ ಪ್ರತ್ಯೇಕ 'ಜಾಗ' (ಸ್ಪೇಸ್)ವನ್ನು ನಿಗದಿಪಡಿಸಿ ನ್ಯಾಯ ಸಲ್ಲಿಸಬೇಕು. ದೃಶ್ಯಕಲೆಯ ಪರಂಪರೆ, ಸಮಕಾಲೀನ ಪರಿಸ್ಥಿತಿ, ಭವಿಷ್ಯದ ನಡೆ, ಕಲಾವಿದರ ಸಾಮರ್ಥ್ಯ, ಕಲಾವಂತಿಕೆಗಳನ್ನು ವಸ್ತುನಿಷ್ಠವಾಗಿ, ಅಧ್ಯಯನಶೀಲವಾಗಿ ಅವಲೋಕನ ಮಾಡುವ ಮೂಲಕ ಕಲಾಬೆಳವಣಿಗೆಗೆ ನೀರೆರೆಯಬೇಕು.ಆಗ ದೃಶ್ಯಕಲೆಯ ಜೊತೆಗೆ ಸದ್ಯ ಸುದ್ದಿಮಾಧ್ಯಮಗಳೂ ಸಹ ಬೆಳಗಲು ಸಾಧ್ಯ.ಆ ಬೆಳಗು ಮೂಡುವ ದಿನ ಬರುವುದೆಂತೋ ತಿಳಿಯದು.ಆದರೆ, ಆ ದೆಸೆಯಲ್ಲಿ ಇಡುವ ಹೆಜ್ಜೆಗಳೂ, ಮಾಡುವ ಪ್ರಯತ್ನಗಳೆಲ್ಲವೂ ದೃಶ್ಯಕಲೆಯನ್ನು ಬೆಳಗುವ ಬೆಳ್ಳಿಕಿರಣಗಳು ಎಂಬುದನ್ನು ಸುದ್ದಿಮಾಧ್ಯಮಗಳು ಮತ್ತು ದೃಶ್ಯಕಲಾಧ್ಯಾನಿಗಳು ಸದಾ ನೆನಪಿಟ್ಟುಕೊಳ್ಳಬೇಕು.

❑

Ethics of Art criticism

♦ Suresh Jayaram

My personal journey as a writer stared 30 years ago in Bangalore,there was very little space for conversation about art in the media. I took this opportunity to write in the City Tab and the Times of India from the 90's. We know that serious arts criticism by informed critics in Kannada is limited to few but the space and scope for writing in English has a long history in Bangalore. My journey as an art writer/critic was an attempt to occupy a public space for visual culture, a bridge between the audience and the artist.

The art ecology consists of Artists, Art critics

today work not only in print media-in specialist art magazines as well as newspapers, but also on the internet, on TV and on radio and in art museums and galleries. Many are also employed in universities or as art educators for museums. Art critics curate exhibitions and are frequently employed to write exhibition catalogues.

Art Critics have often had an uneasy relationship with their critics. Artists usually need positive opinions from critics for their work to be viewed and purchased; unfortunately for the artists, only later generations may understand it.[2]

I believe we need to understand the constraints facing arts institutions when conceiving, developing, producing and marketing arts projects. But I am glad they are there, watching, listening, critiquing and expounding.

"Tolstoy defines that "Art is a human activity consisting in this, that one man consciously, by means of certain external signs, hands on to others feelings he has lived through, and that other people are infected by these feelings and also experience them."

The value of art, then, is one with the value of empathy."

Aesthetics is a branch of philosophy dealing with the nature of beauty, art, and taste, and with the creation and appreciation of beauty. It is more scientifically defined as the study of sensory or sensori-emotional values, sometimes called judgments of sentiment and taste. More broadly, scholars in the field define aesthetics as " Various attempts have been made to define Post-modern aesthetics critical reflection on art, culture and nature."

The foundation of the Indian aesthetic theory can be traced to Bharatamuni's Natyashastra (natya meaning "drama" and shastrameaning "science of") where he gave his theory of beauty (theory of rasa) which was later elaborately developed by learned scholars. The nine emotions or navarasa described in ancient indian aesthetic philosophy can be seen as being indicative of prime human emotions. The nine rasas were the backbone of Indian and formed the premise from which traditions of dance,music, theatre, art and literature evolved.

Art is an important part of being human and can be found through all aspects of our lives, regardless of the culture or times. There are

many different variables that determine one's judgment of art such as aesthetics, cognition or perception. Art can be objective or subjective based on personal preference toward aesthetics and form. It can be based on the elements and principle of design and by social and cultural acceptance. Art is a basic human instinct with a diverse range of form and expression. Art can stand-alone with an instantaneous judgment or can be viewed with a deeper more educated knowledge. Aesthetic, pragmatic, expressive, formalist, relativist, processional, imitation, ritual, cognition, mimetic and postmodern theories are some of many theories to criticize and appreciate art. Art criticism and appreciation can be subjective based on personal preference toward aesthetics and form, or it can be based on the elements and principle of design and by social and cultural acceptance

Artists usually need positive opinions from critics for their work to be viewed and purchased; unfortunately for the artists, only later generations may understand it.

They wrote not to be admired for cleverness or precious turns of phrase but to communicate clearly and immediately fundamental insights regarding the deep cultural significance of works of art and the way we look at them. None conceived of art freed from history, or as bloodless disembodied theory disconnected from material art objects.

Robert C. Morgan who wrote Art Criticsm and the Marketing of Contemproary Art "By the mid-'90s, the "global" art market had seriously encroached on the New York mind-set, at least among the burgeoning audience of investors.

One might concur that publications with an alternative business model preferred keeping the two together. Also it was probably better to hire "art writers"—rather than critics—who would make less trouble. To publish an overtly critical piece of art criticism became risky and therefore was discouraged for fear of upsetting clients. Predictably, revenue began to return in the late '90s, and criticism was generally preempted as a euphemism for carefully written descriptive reviews with a catchy punch line at the end. The quality experts had shifted toward investment, not criticism; and again, the institutions, such as museums and art schools, appeared ready to meet the change. This

change became an international phenomenon with very few apertures, other than high quality cultural magazines, in which criticism is actually read, and, in some cases, allowed to take an original point of view.

The problems involved in the intersection between art criticism and the marketing of art on a global level have seriously augmented since the acceleration of advanced communications technologies. This suggests that transactions in art are made faster than ever before, and that there is more art available to the market than ever before. This mitigates the probability that any reflection on the historical or aesthetic value of a particular work might be important. More attention is give to the name of the artist—the logo—than to the actual quality of a particular work. One might postulate that this is true in any field; but the subject I am dealing with here is the possible loss of any notion of a qualitative standard in looking at works of art, which arguably signifies a loss of cultural values by which we choose to live."

We also see the demise of pure art criticism, the close relationship between art and business, and the function of catalogue essays as promotional or advertising material.

I wish to quote Barry Schwabsky, art critic for The Nation and co-editor of international reviews for Artforum;who spoke at the India Art Fair.``Though Stallabrass notes that writing that was more promotional than critical in nature had a function when contemporary art was relatively unpopular and needed defending, "now that contemporary art is an enormous industry as you see at the Fair, that ideal is also gone."

Yet, especially in the years following the global financial crisis, Stallabrass argues that art writing should expose the ideological questions and conflicts in power - to make the control of writing by those in power visible, to make clear the extraordinary complicity of contemporary art with inequality, corruption, globalisation, development, all of these things, clear - and to reveal some of the counterpoints."

Ethics is fundamental for every writer and a context of art history and art criticism is essential to be critically engaged and grounded for art writing and criticism in contemporary times.

❑

ಕಲಾಕೃತಿ ಮತ್ತು ಕಲಾ ಚಿಂತನೆ

♦ ರಮೇಶಚಂದ್ರ

ಕಲಾ ಚಿಂತನೆಯು ಕಲಾಕೃತಿಯ ಹಲವು ಆಯಾಮಗಳನ್ನು ಅರಿಯಲು ಇರುವ ಸಾಧ್ಯತೆಯಾಗಿದೆ. ದೃಶ್ಯಕಲೆಯ ಮಟ್ಟಿಗೆ ಹೇಳುವುದಾದರೆ, ಕಲೆಯ ಅಭಿವ್ಯಕ್ತಿಯನ್ನೂ, ಅನನ್ಯತೆಯನ್ನು ಅಂತರ್ಗತ ಮಾಡಿಕೊಳ್ಳುತ್ತಾ ಆ ಮೂಲಕ ಕಲಾಕೃತಿಯ ವಸ್ತು-ದೃಶ್ಯ ರೂಪವನ್ನು ಮೀರಿ ಸಿಗುವ ಜೀವನದ ಅನುಭೂತಿಯನ್ನು ಕಲಾಚಿಂತನೆಯು ಸಾಧ್ಯಮಾಡುತ್ತದೆ.

ಭಾರತೀಯ ಮತ್ತು ಪಾಶ್ಚಾತ್ಯ ಕಲಾ ಮೀಮಾಂಸಕಾರರು ಈ ಕುರಿತು ವ್ಯಕ್ತಪಡಿಸಿರುವ ಅನೇಕ ವಿಚಾರಗಳಲ್ಲಿ ಸಾಮ್ಯತೆಯೂ ಇದೆ. ಆದರೆ ಆಧುನಿಕ ದೃಶ್ಯಕಲೆಯು ಈ ಶಾಸ್ತ್ರೀಯ ಕಲಾಚಿಂತನೆಗಳಿಂದ ಹೊರತಾಗಿ ಅನೇಕ ಬದಲಾವಣೆಗಳನ್ನು ಕಂಡಿದೆ.ಇದಕ್ಕೆ ಅನೇಕ ಕಾರಣಗಳಿದ್ದು, ಮುಖ್ಯವಾಗಿ ಕೈಗಾರಿಕೀಕರಣ, ರಾಜಕೀಯ

ಸ್ಥಿತ್ಯಂತರ, ವೈಜ್ಞಾನಿಕ ಮತ್ತು ತಂತ್ರಜ್ಞಾನಗಳ ಬೆಳವಣಿಗೆ ಬದುಕಿನ ಗ್ರಹಿಕೆಯನ್ನೇ ಬದಲಾಯಿಸಿತು.ಇದರ ನೇರ ಪರಿಣಾಮ ದೃಶ್ಯಕಲೆಯ ಮೇಲೆ ಆಗಿ ಕಲೆಯ ಅಭಿವ್ಯಕ್ತಿಯ ವಿಧಾನಗಳು ಮತ್ತು ಮಾಧ್ಯಮಗಳಲ್ಲಿ ಅನೇಕ ಬದಲಾಣೆಗಳಾಯಿತು.ಶಾಸ್ತ್ರೀಯ ಕಲೆಗಳ ಮೂಲಕ ಪ್ರತಿಪಾದಿಸಲ್ಪಟ್ಟ ಸೌಂದರ್ಯ ಪ್ರಜ್ಞೆ ಆಧುನಿಕ ಕಲಾಕೃತಿಗಳಲ್ಲಿ ಪ್ರಶ್ನಾರ್ಥಕವಾಯಿತು.ಸಂಪ್ರದಾಯಿಕ ನಿರೂಪಣೆಯ ವಿಧಾನಗಳನ್ನು ತಿರಸ್ಕರಿಸಿ, ವೈಯಕ್ತಿಕವಾದ, ಕಟ್ಟುಪಾಡುಗಳಿಲ್ಲದ ಮುಕ್ತವಾದ ಅಭಿವ್ಯಕ್ತಿಯನ್ನು ಈ ಕಾಲದ ಕಲಾವಿದರು ಅನುಕರಿಸಿದರು. ಅಸ್ಥಿತ್ವವಾದ ಈ ಕಾಲದ ಸಾಹಿತ್ಯವನ್ನು ಪ್ರಭಾವಿಸಿದಂತೆ ದೃಶ್ಯಕಲೆಯನ್ನೂ ಆವರಿಸಿತ್ತು.

ಸಮಕಾಲೀನ ಅಥವಾ ಆಧುನಿಕೋತ್ತರ ಕಲೆಯ ಸಂದರ್ಭದಲ್ಲಿ ಕಲೆಯನ್ನು ಪ್ರಭಾವಿಸಿರುವ ಮತ್ತು ಪ್ರೇರೇಪಿಸಿರುವ ವಿಚಾರಗಳಲ್ಲಿ ಪಾರಂಪರಿಕ ಸಂಸ್ಕೃತಿ, ತತ್ವಶಾಸ್ತ್ರ, ಕಲೆ, ಸಾಹಿತ್ಯ, ಸಂಪ್ರದಾಯ, ಭಾಷೆ ಇತ್ಯಾದಿಗಳನ್ನು ಪ್ರಶ್ನಿಸುವ, ತಿರಸ್ಕರಿಸುವ ಮತ್ತು ಪುನರ್ ವಿಶ್ಲೇಷಿಸುವ ಪ್ರವೃತ್ತಿಯನ್ನು ಕಾಣುತ್ತೇವೆ. ಸಾಮಾಜಿಕ, ಚಾರಿತ್ರಿಕ ಮತ್ತು ರಾಜಕೀಯ ಪ್ರೇರಣೆಗಳೇ ಈ ಸಂದರ್ಭದ ಕಲಾಕೃತಿಗಳಲ್ಲಿ ನಾವು ಕಾಣುವ ಬಹುಮುಖ್ಯವಾದ ಬದಲಾವಣೆ. ಸ್ವ-ವಿಮರ್ಶೆ, ಸ್ವ-ಪ್ರತಿಪಾದನೆ ಮತ್ತು ಬಹುಮುಖಿಯಾದ (ಸೆಲ್ಫ್ ಕ್ರಿಟಿಕಲ್, ಸೆಲ್ಫ್ ರೆಫೆರೆನ್‌ಷಿಯಲ್ ಮತ್ತು ಪ್ಲೂರಲಿಸ್ಟ್) ವಿಚಾರಗಳನ್ನು ಈ ಕಲಾವಿದರು ತಮ್ಮ ಕಲಾಕೃತಿಗಳ ಮೂಲಕ ಪ್ರತಿಪಾದಿಸಲು ತೊಡಗಿಸಿಕೊಂಡಿದ್ದಾರೆ. ನಿರೂಪಣಾತ್ಮಕ ಮತ್ತು ಅಮೂರ್ತ ಅಭಿವ್ಯಕ್ತಿ ಕ್ರಮಗಳು ಹಾಗೂ ಶೈಲೀಕೃತ ಚಿತ್ರ ರಚನೆಯು ಹಿನ್ನೆಲೆಗೆ ಸರಿದು ಕಲಾವಿದನ ಭಾವನೆಗಳಿಗೆ ಬದಲಾಗಿ, ಬೌದ್ಧಿಕ ಮತ್ತು ವೈಚಾರಿಕ ಅಂಶಗಳು ಸೇರಿವೆ. ಬದುಕಿನಿಂದ ನೇರವಾಗಿ ಆಯ್ದ ವಿಚಾರಗಳನ್ನು ಪ್ರಜ್ಞಾಪೂರ್ವಕವಾಗಿ ಅಭಿವ್ಯಕ್ತಿಸುವ ಕ್ರಮಗಳು ಹುಟ್ಟಿಕೊಂಡಿವೆ. ಪರಿಸರ ಸಂವೇದನೆ, ಗ್ರಾಹಕ ಸಂಸ್ಕೃತಿ, ಸ್ತ್ರೀ ಸಂವೇದನೆಗಳು, ಲಿಂಗಭೇದ ವಿಚಾರಗಳು ಹೀಗೆ ಸಮಾಜವನ್ನು ಕಾಡುತ್ತಿರುವ ಹಲವು ಹತ್ತು ಸವಾಲುಗಳು ಕಲಾವಿದರನ್ನೂ ಕಾಡಿವೆ. ಈ ಸಂಕೀರ್ಣವಾದ ವೈಚಾರಿಕತೆಯನ್ನು ಸಾಂಪ್ರದಾಯಿಕ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುವಲ್ಲಿ ಉಂಟಾಗಿರುವ ತೊಡಕುಗಳನ್ನು ಹೊಸ ಮಾಧ್ಯಮಗಳು ಪರಿಹರಿಸಲು ಪ್ರಯತ್ನಿಸಿವೆ. ಹೆಚ್ಚು ಮುಕ್ತವಾದ ಛಾಯಾಚಿತ್ರ, ಇನ್ಸ್ಟಲೇಷನ್, ವಿಡಿಯೋ ಕಲೆ, ಡಿಜಿಟಲ್ ಕಲೆ ಮತ್ತು ಪರ್ಫಾರ್ಮೆನ್ಸ್ ಇತ್ಯಾದಿ ಅನೇಕ ಹೊಸ ಮಾಧ್ಯಮಗಳು ಸಂವಹನದ ಸಾಧ್ಯತೆಯನ್ನು ಮಾತ್ರವಲ್ಲದೇ, ಕಲಾ ಚಿಂತನೆಯನ್ನೂ ಬದಲಾಯಿಸಿದೆ. ಆಧುನಿಕರ ಮೇಲೆ ಪ್ರಿಮಿಟಿವ್ ಕಲೆ ಪ್ರಭಾವ ಬೀರಿದ ಹಾಗೆ ತಂತ್ರಜ್ಞಾನ ಆಧುನಿಕೋತರ ಕಲೆಯನ್ನು ಪ್ರಭಾವಿಸಿದೆ.

ಭಾರತೀಯ ಶಾಸ್ತ್ರೀಯ ಕಲೆಯನ್ನು ಕುರಿತ ಶಾಸ್ತ್ರೀಯ ಗ್ರಂಥಗಳಲ್ಲಿ ಕಲಾಕೃತಿಯ ರಚನೆಗೆ ಬೇಕಾದ ಪ್ರೇರಣೆ, ರಚನೆಯ ನಿಯಮಗಳಲ್ಲದೆ, ಕಲಾಕೃತಿಯನ್ನು ನೋಡಲು ಬೇಕಾದ ಪೂರ್ವಸಿದ್ಧತೆಯ ಕುರಿತೂ ಸವಿಸ್ತಾರವಾಗಿ ವಿವರಿಸಲಾಗಿದೆ. ಪ್ರಸ್ತುತ ಈ ಲೇಖನದ ಉದ್ದೇಶ, ಈ ಶಾಸ್ತ್ರಗ್ರಂಥಗಳನ್ನು ಕುರಿತು ಅಲ್ಲವಾದರೂ ಒಂದೆರಡು ಅಂಶಗಳನ್ನು ಇಲ್ಲಿ ಉಲ್ಲೇಖಿಸುವುದು ಪ್ರಸ್ತುತವೆಂದು ಭಾವಿಸುತ್ತೇನೆ.

ಭರತನ ನಾಟ್ಯಶಾಸ್ತ್ರದ ವಿಶ್ಲೇಷಣೆಯನ್ನು ಮಾಡುತ್ತಾ, ಅಭಿನವ ಗುಪ್ತ ತನ್ನ "ಅಭಿನವ ಭಾರತಿ" ಗ್ರಂಥದಲ್ಲಿ ನಿಜ ಜೀವನದ ಜಗತ್ತಿಗೂ, ಕಲಾಕೃತಿಯೊಂದರ ನಾಟಕೀಯ ಜಗತ್ತಿಗೂ



ಸ್ಪಷ್ಟವಾದ ವ್ಯತ್ಯಾಸವನ್ನು ಗುರುತಿಸುತ್ತಾನೆ. ಕಲಾಕೃತಿಯೊಂದರ ಮೂಲಕ ಸಹಜವಾದ ದಿನನಿತ್ಯದ ಅನುಭವಗಳಿಂದ ಸೂಕ್ಷ್ಮವಾದ ಅಭಿವ್ಯಕ್ತಿ ಮತ್ತು ಅನುಭವಗಳತ್ತ ನಾವು ಚಲಿಸುತ್ತೇವೆ. ವೈಯಕ್ತಿಕ ಅನುಭವಗಳಿಂದ ಸಾರ್ವತ್ರಿಕ ನಿರೂಪಣೆಯತ್ತ ವಾಲುತ್ತೇವೆ ಮತ್ತು ಅನೇಕದಿಂದ ಏಕರೂಪಕ್ಕೆ ಮುನ್ನಡೆಯುತ್ತೇವೆ ಎಂದು ಅಭಿನವಗುಪ್ತ ಅಭಿಪ್ರಾಯಪಡುತ್ತಾನೆ. ಅವನ ಪ್ರಕಾರ ನಿಜಜೀವನದ ನೋವು ಕಲಾಕೃತಿಯಲ್ಲಿ ನೋಡುಗನಿಗೆ ಆನಂದದ ಅನುಭೂತಿಯನ್ನು ಉಂಟುಮಾಡಿದರೆ ಅಚ್ಚರಿಯೇನಿಲ್ಲ. ಉದ್ದೇಶಪೂರ್ವಕವಾಗಿ ಅಪನಂಬುಗೆಯನ್ನು ದೂರಸರಿಸುವ ಕ್ರಿಯೆಯು ಕಲಾಕೃತಿಯೊಂದನ್ನು ನೋಡಲು ನೋಡುಗನಿಗೆ ಬೇಕಾದ ಪೂರ್ವಸಿದ್ಧತೆಯನ್ನು ಒದಗಿಸುತ್ತದೆ (``wilful suspension of disbelief''). ಒಂದೊಮ್ಮೆ ಈ ನಂಬುಗೆಯನ್ನು ಅವನು ಪ್ರಶ್ನಿಸುತ್ತಾನೋ ಆ ಕ್ಷಣದಿಂದ ಅವನು ಕಲಾಕೃತಿಯ ಸೌಂದರ್ಯವನ್ನು ಆನಂದಿಸುವ ಅವಕಾಶದಿಂದ ವಂಚಿನಾಗುತ್ತಾನೆ. ಕಲಾಕೃತಿ ಅವನ ಪಾಲಿಗೆ ಕೇವಲ ಒಂದು ಸಾಮಾನ್ಯವಾದ ವಸ್ತುವಾಗುತ್ತದೆ. ಹಾಗಾಗಿಯೇ ಕಲಾಕೃತಿಯೊಂದು ತನ್ನ ಸಾರ್ಥಕ್ಯತೆಯನ್ನು ಪಡೆದುಕೊಂಡಿದೆಯೆಂದರೆ ಅದು ನೋಡುಗನು ಸಿದ್ಧಿಸಿಕೊಳ್ಳುವ ಆನಂದದ ಸೌಂದರ್ಯಾನುಭೂತಿಯಿಂದ.ಆದ್ದರಿಂದ ನೋಡುಗನ ಹೃದಯಲ್ಲಿ ಉತ್ಪತ್ತಿಯಾಗುವ ಭಾವೋದ್ವೇಗದ ಮೂಲವೇ "ರಸೋತ್ಪತ್ತಿ" ಮತ್ತು ಅವನು ಸಹೃದಯನೇ ಆಗಿ ಕಲಾಕೃತಿಯ

ರಸಾನುಭವದ ಆನಂದದಲ್ಲಿ ಭಾಗಿಯಾಗುತ್ತಾನೆ. ಇದು ಅಭಿನವ ಗುಪ್ತನ ವಿವರಣೆ.

ಚಿತ್ರ ಸೂತ್ರದಲ್ಲಿ, ವರ್ಣಚಿತ್ರವೊಂದರ ಗುಣ-ಲಕ್ಷಣಗಳನ್ನು ಕುರಿತು ಈ ರೀತಿಯಾಗಿ ಹೇಳುತ್ತದೆ. "ಚಿತ್ರವೊಂದನ್ನು ಅತ್ಯಂತ ಗಮನ ಹರಿಸಿ, ನೋಡುಗನ ಕಣ್ಣುಗಳಿಗೆ ಮುದನೀಡುವಂತೆಯೂ, ಅತ್ಯಂತ ಬುದ್ಧಿವಂತಿಕೆಯನ್ನೂ ಸೃಜನಶೀಲತೆಯನ್ನು ಬಳಸಿಯೂ, ಅತ್ಯಂತ ಸೌಂದರ್ಯಪೂರ್ಣವಾಗಿ ರಚಿಸುವಲ್ಲಿ ಶ್ಲಾಘನೀಯವೂ, ಪ್ರತಿಭಾಶಾಲಿಯೂ, ಉನ್ನತ ಮಟ್ಟದ ಅಭಿರುಚಿಯೂ ಮತ್ತು ಈ ಬಗೆಯ ಇನ್ನಿತರ ಗುಣಗಳನ್ನು ಹೊದಿರುವ ಕಲಾವಿದ ರಚಿಸುವ ಕಲಾಕೃತಿಯು ನೋಡುಗನ ಕಣ್ಣುಗಳಿಗೆ ಆನಂದದ ಮತ್ತು ಅನನ್ಯವಾದ ಅನುಭವವನ್ನೂ ಕೊಡುತ್ತದೆ." "ಚಿತ್ರವೊಂದರಲ್ಲಿ, ಸೂಕ್ತವಲ್ಲದ ಸಂಯೋಜನೆ, ಭಾವನೆಗಳಿಲ್ಲದ ಶೂನ್ಯದೃಷ್ಟಿ, ಅಸ್ಪಷ್ಟ ಮತ್ತು ಗಾಢ ವರ್ಣಗಳ ಬಳಕೆ, ಚಲನಶೀಲತೆಯಿಲ್ಲದ, ಸತ್ವಹೀನವಾದ ಅಂಶಗಳೇ ಹೆಚ್ಚಾಗಿ ಇದ್ದರೆ ಅಂತಹ ಚಿತ್ರವು ಅಶುಭದ ಸಂಕೇತವೇ ಆಗಿರುತ್ತದೆ.". "ಚಿತ್ರವು, ಮನಸ್ಸಿನ ಅಶಾಂತಿ, ಉದ್ವೇಗಗಳನ್ನು ಶುದ್ಧಗೊಳಿಸಿ, ಆನಂದವನ್ನು ಉಂಟುಮಾಡುತ್ತದೆ."

ಆನಂದ ಕೂಮಾರಸ್ವಾಮಿಯ, ಕಲಾಪ್ರದರ್ಶನ ಏಕೆ ಬೇಕು? ಎನ್ನುವ ಲೇಖನದ ನನ್ನದೇ ಭಾವಾನುವಾದದ ಕೆಲವು ಸಾಲುಗಳನ್ನು ಇಲ್ಲಿ ಪ್ರಸ್ತಾಪಿಸಿತ್ತೇನೆ. ಪಾಶ್ಚಾತ್ಯ ತತ್ವಜ್ಞಾನಿ ಪ್ಲೇಟೋವಿನ ಕಲೆ ಮತ್ತು ಕಲಾಕೃತಿಯ ಕುರಿತಾದ ಅಭಿಪ್ರಾಯವನ್ನು ಆನಂದಕುಮಾರ ಸ್ವಾಮಿಯವರು ಈ ಲೇಖನದಲ್ಲಿ ಪ್ರಸ್ತಾಪಿಸುತ್ತಾ, ಕಲಾಕೃತಿಯ ಹಲವು ಹಂತಗಳಲ್ಲಿ ನೋಡುಗ ಮತ್ತು ಕೃತಿಯ ನಡುವಿನ ಅನನ್ಯತೆ ಮತ್ತು ಕಲಾಕೃತಿಯಿಂದಾಚೆಗಿನ ಬದುಕಿನ ದರ್ಶನ ವನ್ನು ಕಾಣಿಸಲು ಕೃತಿಯು ನಿಮಿತ್ತವಾಗುವ ಬಗೆಯನ್ನು ಚರ್ಚಿಸುತ್ತಾರೆ.

ಕುಮಾರಸ್ವಾಮಿಯವರು ತಮ್ಮ ಲೇಖನದಲ್ಲಿ "ಪ್ಲೇಟೋವಿನ ಪ್ರಕಾರ ಕಲೆ ಯಾವಾಗಲೂ ಅದೃಶ್ಯವಾದ ಆದರೆ, ಅನುಭವಕ್ಕೆ ದಕ್ಕಬಲ್ಲ ಆಕಾರಗಳನ್ನು ಕುರಿತಾದದ್ದು.ಕಲಾವಿದ ಮನುಷ್ಯ ಮಾತ್ರನಾದದ್ದರಿಂದ ಅವನ ಭಾವನೆಗಳೂ ಮನುಷ್ಯನಿಗೆ ಸೀಮಿತವೇ ಆಗಿರುತ್ತದೆ.ಇವುಗಳನ್ನು ಮೀರಲಾರದ ಕವಿ/ಕಲಾವಿದನಿಗೆ ಆದರ್ಶ ಸಮಾಜದಲ್ಲಿ ಸ್ಥಾನವಿಲ್ಲದೇ ಹೋಗುತ್ತದೆ" ಎಂದು ಹೇಳುತ್ತಾರೆ.ಇಲ್ಲಿ ಕುಮಾರಸ್ವಾಮಿಯವರು ಪ್ಲೇಟೋವಿನ ಎರಡು ವಿಷಯಗಳನ್ನು ನಮ್ಮ ಗಮನಕ್ಕೆ ತರುತ್ತಾರೆ.ಕಲೆ ನಮ್ಮ ಅನುಭವಕ್ಕೆ ದಕ್ಕಬಲ್ಲದು.ನಮ್ಮ ಕಣ್ಣಿಗೆ ಗೋಚರವಾಗುವ ಅಂಶಗಳನ್ನು ಹೊರತುಪಡಿಸಿಯೂ ಅಗೋಚರವಾದ ಅಸ್ಥಿತ್ವ ಅದಕ್ಕೆ ಇದೆ.ಹಾಗಾದಾಗ ಅದು ನಿರಾಕಾರ ಮತ್ತು ವಸ್ತು ರೂಪವಲ್ಲದೇ ಇರುವಂಥದ್ದು.ಮನಸ್ಸಿನ ಒಳಸ್ಥರದಲ್ಲಿ ಇರಬಹುದಾದದ್ದು.ಆದ್ದರಿಂದ ಕಲೆ ಸಂಪೂರ್ಣವಾಗುವುದು, ಸಮಗ್ರ ಅನುಭವವಾಗಿ ಅದು ಪರಿವರ್ತನೆಯಾದಾಗ ಮಾತ್ರ.ಈ "ಅನುಭವ" ಕಲೆಯನ್ನು ಗ್ರಹಿಸುತ್ತಾ ಹೋಗುವ ಪರಿಕ್ರಮದಲ್ಲಿ ಹುಟ್ಟಿಕೊಳ್ಳುವಂಥದ್ದು. ಹಾಗಾಗಿ ಕಲೆ ಕೇವಲ ವಸ್ತು ಮತ್ತು ದೃಶ್ಯ ಈ ಎರಡೂ ಅಲ್ಲ. ಕಲಾಕೃತಿ ಕೇವಲ ಒಂದು ನೆಪಮಾತ್ರ. ಎರಡನೆಯದಾಗಿ ಅವರು ಹೇಳುವುದು ಆದರ್ಶ ಸಮಾಜವು ಮನುಷ್ಯರ ಮಿತಿಗಳನ್ನು ಮೀರಿದ್ದು. ಅಲ್ಲಿ ನ್ಯೂನತೆಗಳಾಗಲೀ, ಭಾವನೆಗಳ ಅತಿರೇಖವಾಗಲೀ ಇರುವುದಿಲ್ಲ. ಆದರ್ಶವಾದ ಸಮಾಜವು ಪ್ರಜ್ಞಾವಂತವಾಗಿದ್ದು, ಕಲಾವಿದ ಅಲ್ಲಿ ತನ್ನ ಅಸ್ಥಿತ್ವವನ್ನು ಸ್ಥಾಪಿಸಬೇಕಿದ್ದರೆ ಸಾಮಾನ್ಯ ಮನುಷ್ಯರ ಮಿತಿಗಳನ್ನು ಮೀರಬೇಕಾಗುತ್ತದೆ.

ಕುಮಾರಸ್ವಾಮಿಯವರು ಮತ್ತೊಂದು ಉದಾಹರಣೆಯನ್ನು ನಮ್ಮ ಮುಂದಿಡುತ್ತಾರೆ. " ಕಲೆಯ

ಉದ್ದೇಶವೇ ಮೂಲಭೂತ ಸತ್ಯವನ್ನು ಅರಿಯುವುದು, ಕೇಳಲಾಗದ್ದನ್ನು ಕೇಳಿಸುವುದು, ಮೂಲ ಶಬ್ಧ ಮತ್ತು ಚಿತ್ರ ಇವುಗಳನ್ನು ಪುನರ್ಸೃಷ್ಟಿಸುವುದು". ನಮ್ಮ ಜ್ಞಾನೇಂದ್ರಿಯಗಳ ಒಳ ಗ್ರಹಿಕೆಗೆ ಮಾತ್ರವೇ ಸಿಗಬಲ್ಲ, ಅಂತರಾಳದಲ್ಲಿ ಮಾತ್ರವೇ ಅನುಭವಿಸಬಲ್ಲ, ಭಾವನೆಗಳ ಅತಿರೇಕವಿಲ್ಲದ ಜಗತ್ತಿನ ಮೂಲಭೂತ ಅರಿವನ್ನು ಮಾಡಿಸುವುದೇ ಕಲೆಯ ಗುರಿಯೆಂದು ಈ ಮಾತಿನ ಅರ್ಥವಾಗಿರಬೇಕು. "ಕಲೆ ಒಂದು ಸಾಂಕೇತಿಕವಾದ ಅಭಿವ್ಯಕ್ತಿ" ಎಂದು ಕುಮಾರಸ್ವಾಮಿಯವರು ಹೇಳುತ್ತಾರೆ.ಕಲೆ ಜೀವನದ ಅನುಭವಗಳಿಗೆ ಕಲಾವಿದನ ಪ್ರತಿಕ್ರಿಯೆಯಾಗಬಹುದೇ ಹೊರತು, ಕಲೆಯೇ ನಿಜವಾದ ಜೀವನವಾಗಲು ಸಾಧ್ಯವಿಲ್ಲ. ಕಲೆ ಮಾನಸಿಕ ಅಭಿವ್ಯಕ್ತಿಗೆ ಕೊಡುವ ಸೂಚ್ಯರೂಪವಷ್ಟೇ.ಈ ಅರ್ಥದಲ್ಲಿ ಕಲೆ ಬುದ್ಧಿಗೆ ನಿಲುಕುವಂಥದ್ದು.ಆದರೆ ದೃಶ್ಯಕಲೆಯ ಶಿಕ್ಷಣವು ಕಾಣುವ ಜಗತ್ತಿನ ವಿವರಗಳನ್ನು ಅಧ್ಯಯನ ಮಾಡುವಂಥದ್ದು.ಈ ಅರ್ಥದಲ್ಲಿ, ನಿಜವಾದ ಕಲೆಯು ದೃಶ್ಯಶಿಕ್ಷಣಕ್ಕೆ ವ್ಯತಿರಿಕ್ತವಾದದ್ದು ಮತ್ತು ಹೊರತಾದದ್ದು.ಆದ್ದರಿಂದ ಕಲೆ ನಾವು ಏನನ್ನು ನೋಡಲಾಗುವುದಿಲ್ಲವೋ ಅದನ್ನು ಕುರಿತಾದದ್ದು.ಮತ್ತು ಅದನ್ನು ನಮಗೆ ಕಾಣಿಸಲು ಪ್ರಯತ್ನಿಸುತ್ತದೆ.

ಕಲೆಯು, ಕಲಾಕೃತಿಯೊಂದನ್ನು ಸೃಷ್ಟಿಸುವ ರೇಖೆ, ಆಕಾರಗಳಲ್ಲಿಲ್ಲ ಎಂಬ ಅಭಿಪ್ರಾಯಕ್ಕೆ ಸಮರ್ಥನೆಯಾಗಿ ಕುಮಾರಸ್ವಾಮಿಯವರು ಪ್ಲೇಟೋವಿನ ಮಾತುಗಳನ್ನು ಇಲ್ಲಿ ಉದ್ಧರಿಸುತ್ತಾರೆ. "ಸೌಂದರ್ಯ ಮತ್ತು ಅದನ್ನು ಹೊಂದಿರುವ ವಸ್ತು ಪರಸ್ಪರ ಪೂರಕವಾಗಿರುತ್ತವೆ ಮತ್ತು ಮನುಷ್ಯಜನ್ಯ ಸಂವೇದನೆಯನ್ನು ಆಶಿಸುತ್ತವೆ. ಪ್ಲೇಟೋಹೇಳುವ ಹಾಗೆ ಗಣಿತಜ್ಞನ ಚಮತ್ಕಾರಿಕ ಸೂತ್ರ ಮತ್ತು ಕಲಾವಿದನ ರೂಪನಿಷ್ಟ ದರ್ಶನ ಎರಡರಲ್ಲೂ ವ್ಯತ್ಯಾಸವೇನೂ ಕಾಣುವುದಿಲ್ಲ. ಜ್ಯಾಮಿತಿಯ ರೇಖೆ, ವರ್ತುಲ ಮತ್ತು ಸಮಪಾತಳಿಯು ಅಭಿವ್ಯಕ್ತಿಸುವ ಸೌಂದರ್ಯವು ಅವುಗಳನ್ನು ಬಳಸಿಯೇ ರಚಿಸುವ ಘನವಾದ ಮಾನವಾಕೃತಿಗಳ ಮಟ್ಟಿಗೂ ನಿಜವೇ. "ಆದ್ದರಿಂದ ದೃಶ್ಯಕಲೆಯ ಮೂಲ ತತ್ವಗಳನ್ನು ಬಳಸಿ ರಚಿಸುವ ಚಿತ್ರ–ಶಿಲ್ಪಗಳು ಅವುಗಳಲ್ಲಿ ಅಡಕವಾಗಿರುವ ಭೌತಿಕ ಸೌಂದರ್ಯದಾಚೆಗಿನ ಅರಿವಿಗೆ ನಮ್ಮನ್ನು ಒಯ್ಯಲು ಒಂದು ನಿಮಿತ್ತವಷ್ಟೇ.ಆದ್ದರಿಂದ ಅದೇ ಕಲೆಯಲ್ಲ. ಅದು ಸಂಪೂರ್ಣವೂ ಅಲ್ಲ. ನಿಜವಾದ ಕಲಾಕೃತಿಯಲ್ಲ, ಅದನ್ನು ಮೀರಿದ ಒಳಮನಸ್ಸಿಗೆ ದಕ್ಕುವ ಅರಿವು.

"'ರೂಪ' ಎನ್ನುವುದು ಕೇವಲ ಸ್ಪರ್ಶಕ್ಕೆ ಸಂಬಂಧಿಸಿದ್ದಲ್ಲ. ಕಲಾವಿದನ ವಿಚಾರದಿಂದ, ವಸ್ತುವೊಂದರ ಮೂಲಕ ರೂಪತಳೆಯುವ ಕ್ರಿಯೆಯಲ್ಲಿ ಅದು ಕಲಾಕೃತಿಯಾಗುತ್ತದೆ. ಹಾಗಾಗಿ ಕಲಾಕೃತಿಯು ಕೇವಲ ಸ್ಪರ್ಶ ಮಾತ್ರವಾಗಿ ಉಳಿಯುವುದಿಲ್ಲ. ಈ ವಿಚಾರ – ಆಕಾರಗಳ ಸಮ್ಮೇಳನವನ್ನು ಸೌಂದರ್ಯವೆನ್ನುವುದಾದರೆ, ವಿಚಾರವಿಲ್ಲದ ಕೇವಲ ಆಕಾರವು ಸೌಂದರ್ಯರಹಿತವಾದ ವಸ್ತುವಾಗುತ್ತದೆ."

"ಬಹುತೇಕ ಕಲಾಕೃತಿಗಳ ಅಲಂಕಾರಿಕ ಅಂಶಗಳು, ಆಯಾಕಾಲದ ನಂಬಿಕೆಗಳನ್ನು ತುಂಬಿಕೊಂಡ ಸಾಂಕೇತಿಕ ರೂಪಗಳಾಗಿರಬಹುದು.ಆದರೆ ಕಾಲಾಂತರದಲ್ಲಿ ಇವು ಕೇವಲ ಬಹುತೇಕ ಅಲಂಕಾರಗಳಾಗಿ ಅರ್ಥಶೂನ್ಯವಾಗಿ ಉಳಿದಿರುತ್ತವೆ."

Examples of Art works RAVIVARMA

ಹಂಸ-ದಮಯಂತಿ, ಈ ಚಿತ್ರದಲ್ಲಿ ರವಿವರ್ಮ ದಮಯಂತಿ ಹಂಸದೊಂದಿಗೆ ನಡೆಸುತ್ತಿರುವ ಸಂಭಾಷಣೆಯನ್ನು ಚಿತ್ರಿಸಿದ್ದಾನೆ. ಬಾಗಿಲು ಆಕಾರದ ಕ್ಯಾನ್ವಾಸಿನ ಮೇಲೆ ತೈಲ ಮಾಧ್ಯಮದಲ್ಲಿ ರಚಿಸಿದ ಚಿತ್ರವಿದು. ನಳ ದಮಯಂತಿಯರ ನಡುವಿನ ಪ್ರೇಮವನ್ನು ಕುರಿತ ಶೃಂಗಾರದ ವಸ್ತುವನ್ನು ರವಿವರ್ಮ ಕೇಂದ್ರ ವಸ್ತುವನ್ನಾಗಿ ಈ ಚಿತ್ರದಲ್ಲಿ ನಿರೂಪಿಸಲು ಹೊರಟಿದ್ದಾನೆ. ಚಿತ್ರದಲ್ಲಿ ದಮಯಂತಿ ಇದ್ದಾಳೆ, ಆದರೆ ನಳ ಇಲ್ಲ. ಆದರೆ ನಳನಿಗೆ ಸಂದೇಶ ತಲುಪಿಸುವ ವಾಹಕ ಹಂಸ ಪಕ್ಷಿಯು ದಮಯಂತಿಗೆ ಮುಖಾ-ಮುಖಿಯಾಗಿ ಚಿತ್ರದಲ್ಲಿ ಇದೆ. ನಾಟಕೀಯ ಭರಿತ-ವಾಸ್ತವತೆಯ ಅನುಭವವನ್ನು ನೋಡುಗರಿಗೆ ಉಂಟುಮಾಡುವ ಸಲುವಾಗಿ ದೃಶ್ಯ ನಿರೂಪಣೆಯ ರಚನೆಯಲ್ಲಿ ನೆರಳು ಬೆಳಕಿನ, ವರ್ಣ ಸಂಯೋಜನೆಯ ಅಂಶಗಳನ್ನು ಕಲಾವಿದ ಬಳಸಿಕೊಂಡಿದ್ದಾನೆ.



ರವಿವರ್ಮನ ಚಿತ್ರಗಳು ಕಾಲ್ಪನಿಕವಾದ, ಕಾವ್ಯಾತ್ಮಕವಾದ ಆದರ್ಶರೂಪಗಳನ್ನು ಹೊಂದಿವೆ. ರವಿವರ್ಮ ಯೂರೋಪಿನ ವಾಸ್ತವ ಚಿತ್ರಣ ಕ್ರಮದಲ್ಲಿ ಚಿತ್ರಿಸುವ ಮೂಲಕ

ಭಾರತೀಯ ಪರಂಪರೆಗೆ ಹೊಸತಾದ ಪಾಶ್ಚಿಮಾತ್ಯದ ದೃಷ್ಟಿಯನ್ನು ಪ್ರಯೋಗಿಸಿದ. ಇಲ್ಲಿ ವಾಸ್ತವದ ಭ್ರಮೆಯನ್ನುಂಟು ಮಾಡುವ ಹಾಗೆ ಚಿತ್ರಿತ ವ್ಯಕ್ತಿಗಳ ಹಿನ್ನೆಲೆ ಕಂಡುಬರುತ್ತದೆ. ಹೇಳಬಹುದಾದರೆ ನಾಟಕಗಳಲ್ಲಿ ತೋರುವ ದೃಶ್ಯಗಳಂತೆ ಬಣ್ಣಗಳ ಬಳಕೆ, ದೃಶ್ಯದ ಸಂಯೋಜನೆ, ಬೆಳಕಿನ ಅನುಭವ, ಚಿತ್ರವ್ಯಕ್ತಿಗಳ ಆಂಗಿಕ ಅಭಿವ್ಯಕ್ತಿ, ಮುಖಭಾವ ಮೊದಲಾದ ವಿವರಗಳು ರೂಪತಳೆಯುತ್ತವೆ. ಅವನು ರಚಿಸಿದ ಇನ್ನಿತರೆ ಭಾವಚಿತ್ರಗಳಲ್ಲಿಯೂ ಈ ವಾಸ್ತವದ ಅನುಕರಣೆಯ ಅಭಿವ್ಯಕ್ತಿಯಾಗಿದೆ.

ಭಾವಚಿತ್ರಗಳನ್ನು ಹೊರತುಪಡಿಸಿದರೆ ರವಿವರ್ಮನ ಚಿತ್ರಗಳು ಬಹುಮಟ್ಟಿಗೆ ಭಾರತೀಯ ಸಂಸ್ಕೃತಿಯ ಸಾಹಿತ್ಯ, ನಾಟಕ ಮೊದಲಾದ ಮಾಧ್ಯಮಗಳ ಮೂಲಕ ಜನಪ್ರಿಯತೆಯನ್ನು ಪಡೆದುಕೊಂಡ ಪೌರಾಣಿಕ ಕಥೆಗಳನ್ನು ಅಭಿವ್ಯಕ್ತಿಸಿವೆ. ರವಿವರ್ಮ ಈ ಮೂಲಕ ಚಿತ್ರಕಲೆಯನ್ನು ಜನಪ್ರಿಯಗೊಳಿಸಲು ಪ್ರಯತ್ನಿಸಿದ್ದಾನೆ.

ಅಮೃತಾ ಶೇರ್-ಗಿಲ್ / Amrutha Sher-Gil



ಕಲಾವಿದೆ ಅಮೃತಾ ಶೇರ್‌ಗಿಲ್‌ಳ ಅಧ್ಯಯನವು ಪ್ಯಾರೀಸ್‌ನಲ್ಲಿ ಆಗಿದ್ದರೂ ಭಾರತಕ್ಕೆ ಬಂದ ನಂತರ ಇಲ್ಲಿ ಸಂಸ್ಕೃತಿ, ಕಲೆ, ಸಾಮಾನ್ಯ ಜನರ ಜೀವನ ಮುಂತಾದವುಗಳಿಗೆ ತೆರೆದುಕೊಂಡಳು.ಪಾಶ್ಚಿಮಾತ್ಯರ ವಾಸ್ತವ ಚಿತ್ರಣ ಕ್ರಮದ ಪದ್ಧತಿಯ ಪ್ರಭಾವವು ಆಕೆಯ ಮೇಲೆ ಸಾಕಷ್ಟು ಆಗಿದ್ದ ಅದನ್ನು ಭಾರತೀಯ ದೃಷ್ಟಿಗೆ, ತಂತ್ರ, ಶೈಲಿ ಹಾಗೂ ವರ್ಣಸಂಯೋಜನೆಗಳಿಗೆ ಹೊಂದಿಸಿಕೊಂಡರು. ಆಕೆಯ ದೃಷ್ಟಿಯಲ್ಲಿ ಆಧುನಿಕತೆಯು ಕೇವಲ ಮಾಧ್ಯಮದಿಂದ ಮಾತ್ರವೇ ಸೃಷ್ಟಿಯಾದದ್ದಲ್ಲ. ಬದಲಾಗಿ ವಸ್ತುವಿನ ದೃಷ್ಟಿಯಿಂದಲೂ ಹಾಗೂ ಅದರ ಅಭಿವ್ಯಕ್ತಿ ಕ್ರಮದಿಂದಲೂ ಹೆಚ್ಚು ಪಡೆದುಕೊಂಡದ್ದು, ಶಾಸ್ತ್ರೀಯ ಅಥವಾ ಜನಪ್ರಿಯ ಎನ್ನುವುದಕ್ಕಿಂತ ತಮ್ಮ ಚಿತ್ರಗಳನ್ನು

ತಮ್ಮ ಅನುಭವಗಳ ಗ್ರಹಿಕೆಯ ಮೂಲಕ ಅಭಿವ್ಯಕ್ತಿಸಿದ್ದಾಳೆ. ಜೊತೆಗೆ ಅಮೃತಾ ಅಜಂತೆಯ ಚಿತ್ರಗಳಿಂದ ಸಾಕಷ್ಟು ಪ್ರಭಾವಿತರಾಗಿದ್ದು, ಆ ಚಿತ್ರಗಳಲ್ಲಿನ ನಿರೂಪಣಾಕ್ರಮ, ಗಾಢ ಕಂದು ಬರ್ಣಗಳ ಬಳಕೆ, ಭಾರತೀಯವೇ ಎನ್ನಿಸುವಂಥ ವರ್ಣಗಳ ಸಂಯೋಜನೆ, ತಮ್ಮ ಕಾಲದ ಜೀವನದ ಗಾಢ ಅನುಭವ ಇವುಗಳನ್ನು ಕೃತಿಗಳಲ್ಲಿ ತಮ್ಮದಾಗಿಸಿಕೊಂಡಿವೆ. ದಿನನಿತ್ಯದ ಜೀವನದಲ್ಲಿ ಕಾಣುವ ಸಂಗತಿಗಳು, ಹೆಂಗಸರು, ಹಾದಿಯಲ್ಲಿ ಹೋಗುತ್ತಿರುವ ಬ್ರಾಹ್ಮಣರು, ಹಿನ್ನೆಲೆಯ ನಿಸರ್ಗ, ಇವುಗಳ ಜೊತೆಗೆ ಸ್ವ-ಭಾವಚಿತ್ರಗಳು ಆಕೆಯ ಕೃತಿಗಳಲ್ಲಿ ಪ್ರಮುಖ ಸ್ಥಾನವನ್ನು ಪಡೆಯುತ್ತಾ ಹೋಗುತ್ತವೆ.

ಹೀಗೆ ಅಮೃತಾಳ ಚಿತ್ರಗಳು ದೃಶ್ಯಭಾಷೆಯೊಂದು ವೈಯಕ್ತಿಕವಾಗಿ ನೆಲೆಯುಳ್ಳ ಖಾಸಗಿಯಾದ ಅನುಭವಗಳಿಗೆ ತೆರೆದುಕೊಳ್ಳಬಹುದು ಎನ್ನುವುದಕ್ಕೆ ನಿದರ್ಶನವಾಗುತ್ತದೆ.

ಇಲ್ಲಿ ಗಮನಕ್ಕೆ ಬರುವ ಸಂಗತಿಗಳು.

ನಿಜಜೀವನದ ಅನುಭವಗಳ ಗ್ರಹಿಕೆಯಲ್ಲಿ ಹೊಸ ಕ್ರಮವೊಂದು ಹುಟ್ಟಿಕೊಂಡದ್ದು.

ಭಾರತೀಯ ಕಲಾ ಸಂವೇದನೆಯಲ್ಲಿ 'ಅಧುನಿಕತೆ' ಎನ್ನುವ ಅಭಿವ್ಯಕ್ತಿ ಸಾಧ್ಯವಾದದ್ದು.

ಕಲಾಕೃತಿ ಮತ್ತು ಕಲಾವಿದನ ಸಂಬಂಧ ಖಾಸಗಿಯಾಗತೊಡಗಿದ್ದು.

ಪರಂಪರೆಯ ಪುನರ್ ಪರಿಶೀಲನೆಯು ಕಲಾಕೃತಿಗಳಲ್ಲಿ ಸಾಧ್ಯವೆಂದು ಕಂಡುಕೊಡಿದ್ದು.

ಕಲಾಕೃತಿಯ ಹುಟ್ಟಿಗೆ ಕಾರಣವಾದ ಮೂಲ ಅನುಭವಗಳ ಅಭಿವ್ಯಕ್ತಿಯನ್ನು ಮಾಧ್ಯಮದ ಮೂಲ ದ್ರವ್ಯಗಳಾದ ರೇಖೆ, ಬಣ್ಣ, ಆಕಾರ, ಆವರಣಗಳ ಮೂಲಕ ಸರಳಗೊಳಿಸುತ್ತಾ, ಕಲಾಕೃತಿಗೆ ಹೊಸ ಆಯಾಮವನ್ನು ತಂದಿದ್ದು.

ಈ ಕಲಾವಿದರ ಕಲಾಕೃತಿಗಳ ಉದಾಹರಣೆಗಳನ್ನು ತೆಗೆದುಕೊಂಡಾಗ ಗಮನಿಸಬಹುದಾದ ಸಂಗತಿಗಳು.

ಕಲಾಕೃತಿಗಳಲ್ಲಿ ಕಂಡು ಬರುವ ಕಲಾವಿದನ ಗ್ರಹಿಕೆಯ ಕ್ರಮಗಳು ಮತ್ತು ಪ್ರಜ್ಞೆಯ ಕೇಂದ್ರಗಳು.

ಈ ಗ್ರಹಿಕೆಯನ್ನು ನಿಯಂತ್ರಿಸುವ ಪ್ರಭಾವಿಸುವ ಕೇಂದ್ರಗಳು : ಪೂರ್ವಸಿದ್ಧ ಪರಂಪರೆ, ಸಂಪ್ರದಾಯ ಮತ್ತು ವೈಯಕ್ತಿಕ ಆಸಕ್ತಿ-ಮನಸ್ಥಿತಿ.


ಜೀವನಾನುಭವ

ಅಮೃತಾ ಶೇರ್-ಗಿಲ್ ತಮ್ಮ ಈ ಕಲಾಕೃತಿ, "ಬ್ರೈಡ್ಸ್ ಟಾಯ್‌ಲೆಟ್" ನಲ್ಲಿ ಮಹಿಳೆಯರು ಅಭ್ಯಂಜನಕ್ಕೆ ಅಣಿಯಾಗುವ ದೈನಂದಿನ ಬದುಕಿನ ಒಂದು ಸಾಮಾನ್ಯವಾದ ಸಂದರ್ಭವೊಂದನ್ನು ಬಳಸಿಕೊಳ್ಳುವ ಮೂಲಕ ತಮ್ಮ ಎರಡು ಉದ್ದೇಶಗಳನ್ನು ನೋಡುಗನ ಮುಂದೆ ಇಡುತ್ತಾರೆ. ಒಂದು ತೀರಾ ಸಾಮಾನ್ಯವಾದ ವಿಷಯವನ್ನು ಅತ್ಯಂತ ಸರಳವಾಗಿ ಸಂಕೀರ್ಣವಾಗದಂತೆ ದೃಶ್ಯ ಸಂಯೋಜನೆಯಲ್ಲಿ ನಿರೂಪಿಸುವುದು.ಕಲಾವಿದೆಯ ಕಾಲಕ್ಕೆ ಇದೊಂದು ಅತ್ಯಂತ ಗಂಭೀರವೂ, ಭಿನ್ನವೂ ಆದ ಆಲೋಚನೆಯಾಗಿತ್ತು.

ರವೀಂದ್ರನಾಥ ಠಾಕೂರ್

ರವೀಂದ್ರನಾಥ ಠಾಕೂರ್ ಅವರ ಕಲಾಕೃತಿಗಳಲ್ಲಿ ಇರುವುದು ಉದ್ದೇಶಪೂರ್ವಕವಾದ ಆಧುನಿಕ ಪ್ರಜ್ಞೆಯಲ್ಲ. ಅದು ಅತ್ಯಂತ ಸಹಜವಾಗಿ ಅವರ ಕೃತಿಗಳಲ್ಲಿ ಹುಟ್ಟಿಕೊಂಡದ್ದು. ಅವರ

ಪ್ರಾರಂಭಿಕ ಗೀಚು ಚಿತ್ರಗಳಲ್ಲಿ ನಾವು ನೋಡುವುದು ಈ ಬಗೆಯ ಅಪ್ರಯತ್ನ ಪೂರ್ವಕವಾಗಿ ಸೃಷ್ಟಿ ಕ್ರಿಯೆಯೊಂದನ್ನು.



"ರವೀಂದ್ರನಾಥ ಠಾಕೂರ್ ಅವರ ಚಿತ್ರಕಲೆ ಮತ್ತು ಆಧುನಿಕ ಪ್ರಜ್ಞೆ" ಎನ್ನುವ ಪ್ರೊ. ಶಿವಕುಮಾರ್ ಅವರ ಅನುವಾದಿತ ಪುಸ್ತಕದಲ್ಲಿ ರವೀಂದ್ರರ ಬಗ್ಗೆ ಅವರು ಬರೆಯುತ್ತಾ, "ಗೀಚು ಚಿತ್ರಗಳು ತಾಳುವುದು ಅಕಸ್ಮಿಕವಾಗಿ; ಉದ್ದೇಶಪೂರ್ವಕವಾಗಿ ಅಲ್ಲ. ಗೀಚಾಡುವಿಕೆಯಲ್ಲಿ ನಮ್ಮ ದೇಹ ಮತ್ತು ಮನಸ್ಸು ಮುಕ್ತವಾಗಿ ವರ್ತಿಸುತ್ತವೆ. ಇಂಥ ಗೀಚಾಟಗಳಿಗೆ, ಸಾಹಿತ್ಯಿಕ ಭಾಷೆ ಮತ್ತು ರೂಢಿಗಳಿಗಿರುವ ಜಂಜಡವಿಲ್ಲ. ಸೌಂದರ್ಯ ಪ್ರಜ್ಞೆಯೊಂದನ್ನೇ ಸಕ್ರಿಯಗೊಳಿಸಿಕೊಂಡು, ಬೆರಗುಗೊಳ್ಳುವ ಆಶಯದೊಂದಿಗೆ ಕಲಾವಿದ, ಇದರಲ್ಲಿ ತೊಡಗುತ್ತಾನೆ. ಇದರ ಅಂತಿಮ ರೂಪ ಪೂರ್ವ ನಿಯೋಜಿತ ಇಲ್ಲದಿರಬಹುದು; ಆದರೆ ನಾವು ಯೋಚಿಸುವ ಕಂಡಿರುವ ಚಹರೆಗಳನ್ನು ಅದು ಕನಸಿನ ರೀತಿ ಹೊರಬಲ್ಲದು'' ಎಂದು ಅಭಿಪ್ರಾಯ ಪಡುತ್ತಾರೆ. ಮುಂದುವರಿದು, "ಪಾಲ್‌ಕ್ಲೀ, ತನ್ನ ಗೀಚು ಚಿತ್ರಗಳಲ್ಲಿರುವ ಅಸ್ಥಿರತೆ ಮತ್ತು ಸೃಜನಶೀಲ ಸಾಧ್ಯತೆಯ ಕಡೆಗೆ ಗಮನಸೆಳೆದ. ಮತ್ತು ತನ್ನ ಗ್ರಾಫಿಕ್ ಬಿಂಬಗಳಿಗೆ ಚೈತನ್ಯಪೂರ್ಣವಾದ ಉನ್ನತ ಅರ್ಥವನ್ನು ಹಾಗೂ ಮೊನಚಾದ ಸ್ವಾರಸ್ಯಕರ ಅಭಿಯಕ್ತಿಯನ್ನೂ ನೀಡಿದ.."ಎನ್ನುವ ಮೂಲಕ ಆದುನಿಕ ಪಾಶ್ಚಾತ್ಯ ಕಲೆ ಪ್ರೇರಣೆಯ ಅಂಶಗಳು ಮತ್ತು ರವೀಂದ್ರರ ಕಲೆಯ ಪ್ರೇರಣೆಗಳು ಒಂದು ನೆಲೆಯಿಂದಲೇ ಬಂದಿರುವುದನ್ನು ಸೂಚಿಸುತ್ತಾರೆ.

ಹಕ್ಕಿ-ಎನ್ನುವ ಈ ಚಿತ್ರವನ್ನು ರವೀಂದ್ರರು ಜಲಮಾಧ್ಯಮ-ಗ್ವಾಷ್ ಬಳಸಿ ರಚಿಸಿದ್ದಾರೆ. ಇಲ್ಲಿ ಹಕ್ಕಿಯೊಂದು ಏನನ್ನೋ ಅರಸಿ ಆಗಸದಿಂದ ಹಾರಿ ನೆಲಕ್ಕೆ ಇಳಿದು ಬಂದಿದೆ. ಆಕಾಶ, ಮೋಡಗಳು, ಪಕ್ಷಿಗಳು-ಹೀಗೆ ಪ್ರಕೃತಿಯ ದೃಶ್ಯಗಳು ರವೀಂದ್ರರಿಗೆ ಬಾಲ್ಯದಿಂದಲೂ ಆಸಕ್ತಿಯ ದೃಶ್ಯಗಳಾಗಿವೆ.

ವೀಣೆಯ ಹುಚ್ಚು

"ಚಿತ್ರದ ಸಂವಿಧಾನ ಚೆನ್ನಾಗಿದೆಯೆಂದು ನನ್ನ ಅನಿಸಿಕೆ. ಆದರೆ ವಸ್ತು ನನಗೆ ಏಕೋ ಹಿಡಿಸಲಿಲ್ಲ. ನಿನಗೆ ವೀಣೆಯ ಹುಚ್ಚು ಇರಬಹುದು. ಚಿತ್ರಕಲೆಯ ಹುಚ್ಚೇ ಇರಬಹುದು.ಆದರೆ ಚಿತ್ರಕ್ಕೆ ಇಳಿಸಲು

ಇಂಥ ಹುಚ್ಚು ಸಾಕೆ? ಹಾಗೆಯೇ ಒಬ್ಬನಿಗೆ ಕುಡಿಯುವ ಚಟ ಇರಬಹುದು. ಆದರೆ ಅದು ಎಲ್ಲರ ಆಸಕ್ತಿಗೆ ಪಾತ್ರವಾಗಬಲ್ಲುದೆ?ನಿನ್ನ ಚಿತ್ರದಲ್ಲಿ ಶಾಶ್ವತವಾದ ಆಸಕ್ತಿಯನ್ನು ಕೆರಳಸುವಂಥ ಏನಾದರೂ ವಸ್ತು ಇರಬೇಕು.ಹಾಗಿದ್ದರೆ ಮಾತ್ರ ಹಲವರಿಗೆ ನಿನ್ನ ಚಿತ್ರ ಹಿಡಿಸೀತು."

ಇದು ಮಾರ್ಚ್ 24, 1922ರಂದು, ಅಬನೀಂದ್ರನಾಥರು ವೆಂಕಟಪ್ಪನವರಿಗೆ ಬರೆದ ಪತ್ರದ ಸಾರಾಂಶ. ವಿಶೇಷ ಕಾರಣವಿಲ್ಲದೆ ಅಬನೀಂದ್ರರು ಇಂಥ ಕಳಕಳಿಯನ್ನು ವ್ಯಕ್ತಪಡಿಸಿರಲು ಸಾಧ್ಯವಿಲ್ಲ.

"ವೀಣೆಯ ಹುಚ್ಚು" ಎನ್ನುವ ವೆಂಕಟಪ್ಪನವರ ಚಿತ್ರಕೃತಿಯೇ ಅಬನೀಂದ್ರರ ಈ ಪತ್ರಕ್ಕೆ ಮೂಲ ಪ್ರೇರಣೆ. "ವೀಣೆಯ ಹುಚ್ಚು" ವರ್ಣ ಚಿತ್ರವು ವೆಂಕಟಪ್ಪನವರು ರಚಿಸಿರುವ ಚಿತ್ರಗಳಲ್ಲಿ ಅತ್ಯಂತ ಭಿನ್ನವೂ, ಮಾರ್ಮಿಕವೂ ಆಗಿದ್ದು ಕಲಾವಿದನ ಆಂತರಿಕ ದ್ವಂದ್ವವನ್ನು ಅಭಿವ್ಯಕ್ತಿಸುವ ಮಹತ್ವದ ಕೃತಿಯಾಗಿದೆ.ವೆಂಕಟಪ್ಪನವರು ಸಂಗೀತ ಮತ್ತು ಚಿತ್ರಕಲೆಯನ್ನು ಕೇವಲ ವೃತ್ತಿಯಾಗಿ ಕಂಡವರಲ್ಲ. 'ಉಪಾಸನೆ' ಎಂಬ ಶಬ್ಧವು ಅವರ ಕಲೆಯ ಬಗೆಗಿನ ಆರಾಧನಾ ಭಾವನೆಗೆ ಪ್ರತೀಕವೆಂದು ನಾವು ಭಾವಿಸಿದರೆ ತಪ್ಪಾಗಲಾರದೇನೋ.ಈ ಹುಚ್ಚು ಪ್ರೀತಿಯೇ ಅವರ ಈ ಕಲಾಕೃತಿಯ ರಚನೆಗೆ ಮೂಲ ಪ್ರೇರಣೆಯಾಗಿದೆ.

ಅಬನೀಂದ್ರರು ವೆಂಕಟಪ್ಪನವರ ಕಲಾಗುರುಗಳು.ಕಲಕತ್ತೆಯಲ್ಲಿ 1909ರಿಂದ 1916 ರವರೆಗೆ ಏಳು ವರ್ಷಗಳ ಕಾಲ ಅಬನೀಂದ್ರರಲ್ಲಿ ಕಲಾಶಿಕ್ಷಣವನ್ನು ಪೂರೈಸಿ ಮೈಸೂರಿಗೆ ಹಿಂತಿರುಗಿದ ವೆಂಕಟಪ್ಪನವರಿಗೆ ಬಹುಕಾಲದಿಂದ ಮನದೊಳಗೆ ಅವಿತುಕೊಂಡಿದ್ದ ಸಂಗೀತ ಶಿಕ್ಷಣವನ್ನು ಮುಂದುವರೆಸುವ ಆಸೆ ಮೂಡಿದ್ದಕ್ಕೆ ಹಲವು ಕಾರಣಗಳೇ ಇರಬಹುದು.ಈ ಸಮಯದಲ್ಲಿಯೇ ಅಬನೀಂದ್ರರಿಗೆ ಯಾರೊಬ್ಬರ ಮೂಲಕವೋ ಸುದ್ದಿ ಮುಟ್ಟಿ ಅವರು ವೆಂಕಟಪ್ಪನವರಿಗೆ ಚಿತ್ರಕಲೆಯ ಅಭ್ಯಾಸವನ್ನು ಮುಂದುವರೆಸುವಂತೆ ಸೂಚಿಸಿದರಂತೆ."ವೀಣೆಯ ಹುಚ್ಚು" ಚಿತ್ರದ ಹುಟ್ಟಿಗೆ ಕಾರಣವಾದದ್ದು ಈ ಘಟನೆಯೇ.ಅಬನೀಂದ್ರರ ಸೂಚನೆಗೆ ಉತ್ತರವಾಗಿ ವೆಂಕಟಪ್ಪ ಈ ಚಿತ್ರವನ್ನು ರಚಿಸಿ ಅಬನೀಂದ್ರರಿಗೆ ಕಳಿಸಿದರು.ಪ್ರಾರಂಭದಲ್ಲಿ ನೀವು ಓದಿದ ಪತ್ರವು ಈ ಚಿತ್ರವನ್ನು ಉದ್ದೇಶಿಸಿಯೇ ಬರೆದದ್ದಾಗಿತ್ತು.

ಈ ವರ್ಣಚಿತ್ರವನ್ನು ಜಲವರ್ಣದಲ್ಲಿ ರಚಿಸಲಾಗಿದೆ.ಚಿತ್ರದ ಒಂದು ಭಾಗದಲ್ಲಿ ಉದ್ದನೆಯ ಪೀಠದ ಮೇಲೆ ಅಪೂರ್ಣವಾಗಿರುವ ಅವರ ಗುರುಗಳ ಭಾವ ಶಿಲ್ಪವಿದ್ದರೆ, ಅದರ ಕೆಳ ಭಾಗದಲ್ಲಿ ಎರಡು ಸ್ತ್ರೀ ಆಕಾರಗಳನ್ನು ರಚಿಸಿದ್ದು, ಅವರಿಬ್ಬರೂ ಹಗ್ಗದಿಂದ ಕಂಬಕ್ಕೆ ಕಟ್ಟಿಹಾಕಿದಂತೆ ತೋರಿಸಲಾಗಿದೆ. ಸ್ತ್ರೀ ಆಕೃತಿಯೊಂದರ ಕೈಗಳಲ್ಲಿ ಬ್ರಷ್ ಹಿಡಿದಂತೆ ತೋರಿಸಲಾಗಿದೆ.ಆ ಸ್ತ್ರೀ ಆಕೃತಿಯ ಪಾದಗಳಡಿಯಲ್ಲಿ ಚಿತ್ರ ಸಾಮಗ್ರಿಗಳಾದ ಬಣ್ಣಗಳನ್ನೂ, ಸುತ್ತಿಟ್ಟ ಹಾಳೆಯೂ, ಚೆಲ್ಲಿ ಹೋಗುತ್ತಿರುವ ವರ್ಣಮಿಶ್ರಣದ ಕುಡಿಕೆಯೂ ಕಾಣುತ್ತದೆ. ಚಿತ್ರದ ಮಧ್ಯಭಾಗದಲ್ಲಿ ಸ್ವ-ಭಾವ ವ್ಯಕ್ತಿ ಚಿತ್ರವು ಎರಡು ಕೈಗಳನ್ನು ಮೇಲೆತ್ತಿ ಮಂಡಿಯ ಮೇಲೆ ಕುಳಿತ ಭಾವ. ಆ ಆಕೃತಿಯ ಎದುರಿಗೆ ಇಡೀ ಚಿತ್ರದಲ್ಲಿ ಎದ್ದು ಕಾಣುವಂತೆ ರಚಿಸಿರುವ ವೀಣೆಯೂ ಅದರ ಮೇಲ್ಭಾಗದಲ್ಲಿ ಸ್ತ್ರೀ ಆಕಾರದ ಏಂಜಲ್ (ಏಂಜಲ್ ನ ಕಲ್ಪನೆಯು, ಯುರೋಪಿನ ಸಂಪ್ರದಾಯಕ ಕಲೆಯ ಸೂಚನೆಯಾಗಿದೆ), ಚಿತ್ರದ ಬಲಭಾಗವನ್ನು ವೀಕ್ಷಿಸುತ್ತಿರುವಂತೆಯೂ ರಚಿಸಲಾಗಿದೆ. ಈ ಆಕೃತಿಯ ಮೇಲ್ಭಾಗವು ಖಾಲಿಯಾಗಿದೆ.ಚಿತ್ರವನ್ನು ಸೂಕ್ಷ್ಮವಾದ ರೇಖೆಗಳಿಂದಲೂ, ತೆಳುವಾದ ಜಲ ವರ್ಣಗಳಿಂದ

ನಿಯಮಿತವಾದ ಆಯಾಮವನ್ನು ಸೃಷ್ಟಿಸಲಾಗಿದೆ. ವೀಣೆಯನ್ನು ಹೊರತುಪಡಿಸಿದರೆ ಉಳಿದ ಆ ಕೃತಿಗಳು ತೆಳುವಾದ ವರ್ಣಗಳಿಂದ ಕೂಡಿವೆ. ಇದಿಷ್ಟೂ ಚಿತ್ರದ ಭೌತಿಕ ವಿವರಗಳಾದರೆ ಕೃತಿಯ ಆಂತರಿಕ ಅಭಿವ್ಯಕ್ತಿಯು ಯಾವ ವಿಚಾರವನ್ನು ಕುರಿತದ್ದಾಗಿದೆಯೆಂಬುದೂ ಇಲ್ಲಿ ಮುಖ್ಯವೇ. ಚಿತ್ರದ ನಿರೂಪಣಾ ಶೈಲಿಯು ಭಾರತೀಯ ಚಿಕಣಿ ಚಿತ್ರಗಳ ಅಂಶವನ್ನೂ, ಸೂಕ್ಷ್ಮವಾಗಿ ಗಮನಿಸಿದರೆ, ಯುರೋಪಿನ ನೈಜ ಶೈಲಿಯ ಸ್ವಲ್ಪಾಂಶವನ್ನೂ ಒಳಗೊಂಡಿದೆಯೆಂಬುದು ಸ್ಪಷ್ಟವಾಗುತ್ತದೆ. [ಭಾವಶಿಲ್ಪದ ನಿರೂಪಣೆಯನ್ನು ಗಮನಿಸಿ]

ವೆಂಕಟಪ್ಪನವರ ವೈಯಕ್ತಿಕ ತುಮುಲಗಳು ಈ ಕೃತಿಯಲ್ಲಿ ರೂಪಕಗಳಾಗಿ ಜನ್ಮ ತಳೆದಿವೆಯೆಂದು ನನ್ನ ಅಭಿಪ್ರಾಯ.ಚಿತ್ರ, ಶಿಲ್ಪ ಮತ್ತು ಸಂಗೀತ ಇವುಗಳನ್ನು ಹೆಣ್ಣಿಗೆ ಹೋಲಿಸಿ ವೆಂಕಟಪ್ಪನವರು ಚಿತ್ರಿಸಿರುವುದು ಆಸಕ್ತಿಕರವಾದ ವಿಚಾರ. ಇಡೀ ಜೀವನದಲ್ಲಿ ಸಂಸಾರ ಬಂಧನದಿಂದ [ಅಂದರೆ; ಸ್ತ್ರೀ–ಬಂಧನದಿಂದ] ದೂರವಿರಬಯಸಿದ ವೆಂಕಟಪ್ಪನವರು ಚಿತ್ರದಲ್ಲಿ ಇಬ್ಬರು ಸ್ತ್ರೀಯರ ಬಂಧನಕ್ಕೆ ಒಳಗಾಗಿರುವಂತೆ [ಸಂಗೀತ ಮತ್ತು ಚಿತ್ರಕಲೆ] ಚಿತ್ರಿಸಿರುವುದು ಸಾಂಪ್ರದಾಯಿಕ ಅರ್ಥಾರೋಪದಿಂದಲೋ ಅಥವಾ ವೈಯಕ್ತಿಕ ಭಾವಾರೋಪವೋ ಎಂಬುದು ನಿಗೂಢವಾಗಿದೆ.

ವೆಂಕಟಪ್ಪನವರು ಸಾಂಪ್ರದಾಯಿಕ ಮತ್ತು ಆಧುನಿಕ ಕಲೆಯ ಕೊಂಡಿಯಂತೆ ಇದ್ದಾರೆ ಎನ್ನುವುದು ನನ್ನ ಭಾವನೆ. ಬಂಗಾಲದ 'ರಾಷ್ಟ್ರೀಯತೆಯ' ಪ್ರಭಾವ ಇವರ ಮೇಲೆ ಅಂದರೆ ಕೃತಿಗಳ ರಚನಾ ಶೈಲಿಯ ಮೇಲೆ ಆಗಿದೆಯೇ ಮತ್ತು ಈ ಕೃತಿಯಲ್ಲಿ ಅಂಥದ್ದೇನಾದರೂ ಅಂಶ ಕಾಣುವುದೇ ಎನ್ನುವುದು ಒಂದು ಪ್ರಶ್ನೆ.ತಾರ್ಕಿಕವಾಗಿ ಹೇಳುವುದಾದರೆ, ವೆಂಕಟಪ್ಪನವರು ಇಂತಹ ಸಂದಿಗ್ಧತೆಯಿಂದ ತೋಳಲುತ್ತಿದ್ದರೆಂಬುದು ನನ್ನ ಅನಿಸಿಕೆ.ಆಧುನಿಕತೆ ಮತ್ತು ಸಂಪ್ರದಾಯಗಳ ಒತ್ತಡವು ಸ್ವಲ್ಪ ಮಟ್ಟಿಗಾದರೂ ಇವರನ್ನು ಭಾಧಿಸಿವೆಯೆಂದರೆ ತಪ್ಪಿಲ್ಲ. ಅವರ ಎಲ್ಲಾ ಕೃತಿಗಳ ರಚನಾಕ್ರಮದಲ್ಲಿ ಇದು ಎದ್ದು ಕಾಣುವ ಒಂದು ಅಂಶ. ಪ್ರಸ್ತುತ ಚಿತ್ರದಲ್ಲಿಯೂ, ಸಂಯೋಜನೆ ಮತ್ತು ನಿರೂಪಣೆಗಳು ಇಂಥ ಅನುಮಾನವನ್ನು ಸ್ಪಷ್ಟಪಡಿಸುತ್ತದೆ.ನೆರಳು, ಬೆಳಕು ಮತ್ತು ರೂಪ–ವರ್ಣಗಳ ದರ್ಶನಗಳಲ್ಲಿ ಯುರೋಪಿನ ನೈಜಶೈಲಿಯ ಅಂಶಗಳು ವೆಂಕಟಪ್ಪನವರನ್ನು ಆಕರ್ಷಿಸಿತ್ತೆನ್ನುವುದನ್ನು ಅವರ ಹಲವು ಕೃತಿಗಳು ಸಾದರಪಡಿಸುತ್ತವೆ.

ಚಿತ್ರದ ಭಾಷೆ ಅಥವಾ ಶೈಲಿಯನ್ನು ಕುರಿತು ಹೇಳುವುದಾದರೆ ಕೆಲವೊಮ್ಮೆ, ಯುರೋಪಿನ ವಿಲಿಯಮ್ ಬ್ಲೇಕ್‌ನನ್ನು ನೆನಪಿಸಿದರೆ ಆಶ್ಚರ್ಯವಿಲ್ಲ. ಪ್ರಸ್ತುತ ಚಿತ್ರವೂ ಯಾವುದೇ ನೈಜ ಘಟನೆ ಅಥವಾ ವಸ್ತುವನ್ನು ನಿರೂಪಿಸುವ ರಚನೆಯಲ್ಲ. ಬದಲಾಗಿ ತಮ್ಮ ಮನಸ್ಸನ್ನೇ ಆಕೃತಿಗಳ ಸಹಾಯದಿಂದ ನಿರೂಪಿಸಲು ಹೊರಟ ರಚನೆ. ವಿಶಾಲವಾಗಿ ಗಮನಿಸಿದರೆ, ಭಾರತೀಯ ಚಿತ್ರಕಲೆಯ ಆ ಸಂದರ್ಭದಲ್ಲಿ ಇಂಥಹ ಪ್ರಯತ್ನವೊಂದು ಮೊದಲನೆಯದೆಂದೇ ಹೇಳಬಹುದು. 1950ರ ನಂತರ ಯುರೋಪಿನಲ್ಲಿ ಕಂಡುಬರುವ ನಿಜಾತೀತ ಕಲೆಯೂ [ಸರ್ರಿಯಲಿಸಮ್] ಇಂಥ ಪ್ರಯತ್ನದ ಮೂಲಕವೇ ಪ್ರಾರಂಭವಾಯಿತೆಂದರೆ ಅನರ್ಥವಾಗುವುದಿಲ್ಲವೆಂದು ತಿಳಿಯುತ್ತೇನೆ. ಹೀಗಾಗಿ ವೆಂಕಟಪ್ಪನವರ "ವೀಣೆಯ ಹುಚ್ಚು" ಚಿತ್ರವು ಅಬನೀಂದ್ರರ ಕಟುವಾದ ವಿಮರ್ಶೆಗೆ ಗುರಿಯಾದರೂ ಭಾರತೀಯ ಕಲೆಯ ಸಂದರ್ಭದಲ್ಲಿ ಇದೊಂದು ಅಪರೂಪದ ಕೃತಿಯಾಗಿದೆಯೆಂದು ನಾವು ಭಾವಿಸಬಹುದು.

ರುಮಾಲೆ ಚೆನ್ನಬಸವಯ್ಯ

ಕೆ.ಎಸ್ ಶ್ರೀನಿವಾಸಮೂರ್ತಿಯವರು ಕಲಾವಿದ ರುಮಾಲೆ ಚೆನ್ನಬಸವಯ್ಯ ಅವರ ಕೃತಿಗಳನ್ನು ವಿಶ್ಲೇಷಿಸಿ ಬರೆದಿರುವ ಜೀವ-ಮೇಳ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ." ರುಮಾಲೆ ಕಲಾಭವನವು". ಅನಾವರಣಗೊಳಸುವ ಪ್ರಕೃತಿಯ ವಿದ್ಯಮಾನಗಳು ಒಂದು ಕಡೆ ನಿತ್ಯ ಬದುಕಿಗೆ ದೂರವಾದ ಆದರ್ಶಗಳಲ್ಲ. ಹಾಗೆಯೇ ಇನ್ನೊಂದು ಕಡೆ ನಮ್ಮ ಸಹಜ ಬುದ್ಧಿ ಭಾವಗಳಿಗೆ ಸಿಗದ ಅಲೌಕಿಕ ಶಕ್ತಿಗಳೂ ಅಲ್ಲ. ಮೇಲುನೋಟಕ್ಕೆ ಯಾವ ಕ್ರಿಯೆಯು ಸೂಚಿಯಾಗದೆಯೂ ನಮ್ಮನ್ನು ಕೊನೆಯಿಲ್ಲದೆ ಕೆಣಕಬಲ್ಲ ಈ ಕೃತಿ ಸಮೂಹದ ಚೇತನಕ್ಕೆ ಮೇಲೆ ಹೇಳದಂಥ ಅನೇಕ ಪ್ರಕಾರದ ವೈದೃಶ್ಯಗಳು ಚಾಲಕ ಶಕ್ತಿಗಳಾಗಿವೆ. ಗಿಡಮರ ಹೂಬಳ್ಳಿಗಳು ಇಲ್ಲಿ ಜೀವಂತವಾಗಿ ಕಂಗೊಳಸುತ್ತಿದ್ದರೂ ಯವುದಕ್ಕೂ ಜಗ್ಗದೆ ಸಟೆದು ನಿಂತವು. ಸದೃಢ, ಅಚಲ, ಶಿಲ್ಪಗಳ ಸಹಜ ಸಮಾಧಿ ಸ್ಥಿತಿಯೊಂದರಲ್ಲಿ ಇವು ನೆಲೆಗೊಂಡಿವೆ.

ಇಲ್ಲಿ ನಮ್ಮನ್ನು ಕೆಣಕುವ "ಕ್ರಿಯೆಗಳೇನಿದ್ದರೂ ಅವು ಕುಂಚದೋಟಗಳಿಗೆ ಸೇರಿದ್ದು.ಇದು ಅವರು ಬಿಡಿಸಿಟ್ಟಿರುವ ರಂಗುರಂಗಿನ ಹೂಬಳ್ಳಿಗಳ ಹಾಗೆಯೇ ನಮ್ಮ ಅಂತರಂಗ ಭೇಧಿಸಿ ಕಿಚಾಯಿಸಬಲ್ಲ ಉಗ್ರಶಕ್ತಿ.ಭಾವ ತೀವ್ರವಾದರೂ ಭಾವುಕತೆಯನ್ನು ಮೀರಿದ, ಆತ್ಮೀಯವಾದ ಅತಿಸರಳವಲ್ಲದ ದಿವ್ಯಲಯಗಳ ಸೂಚಿ." ರುಮಾಲೆ ಚೆನ್ನಬಸವಯ್ಯನವರ ಕಲೆಯ ಕುರಿತು ಇದಕ್ಕಿಂತಲೂ ಹೆಚ್ಚು ಹೇಳುವುದು ಸಾಧ್ಯವಿಲ್ಲವೇನೋ.ರುಮಾಲೆಯವರು ಅತ್ಯಂತ ಸರಳವಾದ ತಮ್ಮ ಈ ಅಭಿವ್ಯಕ್ತಿಯ ಕ್ರಮದಲ್ಲಿ ಹಿಡಿದಿಟ್ಟಿರುವ ಅಗಾಧವಾದ ಭಾವ ತೀವ್ರತೆಯನ್ನು ಮೂರ್ತಿಯವರು ಶಬ್ದಗಳಲ್ಲಿ ಇಲ್ಲಿ ವ್ಯಕ್ತಪಡಿಸಿದ್ದಾರೆ.

ಜೋಸೆಫ್ ಮಲ್ಲಾರ್ಡ್ ವಿಲಿಯಮ್ ಟರ್ನರ್

ಜೋಸೆಫ್ ಮಲ್ಲಾರ್ಡ್ ವಿಲಿಯಮ್ ಟರ್ನರ್ ಎಂಬ ಕಲಾವಿದನ ಹೆಸರನ್ನು ಕೇಳರದ ಕಲಾವಿದ್ಯಾರ್ಥಿಯು ಯಾವ ಕಲಾ ಶಾಲೆಯಲ್ಲೂ ಬಹುಶ ಇಲ್ಲವೇನೋ. 23 ಏಪ್ರಿಲ್ 1775ರಲ್ಲಿ ಲಂಡನ್‌ನಲ್ಲಿ ಜನಿಸಿದ ಈ ಕಲಾವಿದ ಅತಿ ಚಿಕ್ಕವಯಸ್ಸಿನಲ್ಲಿ ರಾಯಲ್ ಅಕಾಡೆಮಿಯ ಬೇಸಿಗೆ ಚಿತ್ರ ಪ್ರದರ್ಶನದಲ್ಲಿ,ತನ್ನ ಜಲವರ್ಣ," ಎವ್ಯೂ ಅಫದ ಆರ್ಚ್ ಬಿಷಪ್ಸ್ ಪ್ಯಾಲೇಸ್, ಲ್ಯಾಂಬೆತ್" ಎನ್ನುವ ಚಿತ್ರವನ್ನು ಪ್ರದರ್ಶಿಸಿದ. ಟರ್ನರ್ ತನ್ನ ಅಪರಿಮಿತ ಕುಶಲತೆಯನ್ನು ತನ್ನ ಅನೇಕ ವರ್ಣಚಿತ್ರಗಳಲ್ಲಿ ಪ್ರಯೋಗಿಸಿದ್ದರೂ ಅದಕ್ಕೆ ಮೂಲ ಅವನ ರೇಖಾಚಿತ್ರಗಳು. ಲಂಡನ್ ಮತ್ತು ಇಂಗ್ಲೆಂಡಿನ ಬಹುಭಾಗವನ್ನು ಪದೇ ಪದೇ ಸುತ್ತಿ ದಾಖಲಿಸಿಕೊಂಡ ಈ ರೇಖಾ ಚಿತ್ರಗಳನ್ನು ಅವನು ತನ್ನ ಸ್ಟುಡಿಯೋದಲ್ಲಿ ಪುನರ್ ಸಂಯೋಜಿಸುವ ಮೂಲಕ ತನ್ನ ಅಭಿವ್ಯಕ್ತಿಗೆ ಜೀವವನ್ನು ತುಂಬಿಸುವ ಕೆಲಸವನ್ನು ಟರ್ನರ್ ಮಾಡುತ್ತಾನೆ.

ಟರ್ನರ್ ಪ್ರಕೃತಿಯಲ್ಲಿ ಅಡಕವಾಗಿರುವ ಅಲೌಕಿಕ ಸೌಂದರ್ಯವನ್ನು ಮಾತ್ರವೇ ತನ್ನ ಕೃತಿಗಳಿಗೆ ಪ್ರೇರಣೆಯಾಗಿ ಭಾವಿಸಿದ್ದನೆಂದರೆ ತಪ್ಪಾದೀತೇನೋ. ಅಷ್ಟೇ ಮುಖ್ಯವಾಗಿ, ಮನುಷ್ಯನನ್ನು ಮೀರಿದ ಶಕ್ತಿಯನ್ನು ನಿಸರ್ಗದಲ್ಲಿ ಗುರುತಿಸುವ ಟರ್ನರ್, ತನ್ನ ಬಹುತೇಕ ಚಿತ್ರಗಳಲ್ಲಿ,ಮನುಷ್ಯರನ್ನು ಮುನ್ನೆಲೆಯಲ್ಲಿ ರಚಿಸಿದರೂ ಅವರು ಒಟ್ಟಾರೆ ಸಂಯೋಜನೆಯಲ್ಲಿ



ಅಸಹಾಯಕರೆಂಬತೆಯೇ ಬಿಂಬಿಸುತ್ತಾನೆ. ಮನುಷ್ಯ ಮತ್ತು ಪ್ರಕೃತಿಯ ನಡುವಣ ಸಂಘರ್ಷದಲ್ಲಿ ಗೆಲ್ಲುವುದು ಪ್ರಕೃತಿಯೇ ಎಂಬ ಅವನ ತೀರ್ಮಾನಕ್ಕೆ ಬದ್ಧವಾಗಿರುವಂತೆ ಅವನು ತನ್ನ ಚಿತ್ರಗಳ ವಸ್ತು ಮತ್ತು ನಿರೂಪಣೆಯ ರಚನಾ ಕ್ರಮವನ್ನು ಬಳಸಿಕೊಳ್ಳುತ್ತಾನೆ.

"ರೋಮಾಂಟಿಸಿಸಮ್" ಎನ್ನುವ ಶೈಲಿಯಲ್ಲಿ, [17/18ನೆಯ ಶತಮಾನ] ಕಲಾವಿದನೇ ಕೇಂದ್ರ. ಅವನು ಸಮಾಜದ ಚೌಕಟ್ಟುಗಳನ್ನು ಮೀರುತ್ತಾ ತನ್ನದೇ ಆದ ತೀರ್ಮಾನಗಳಲ್ಲಿ ಬದುಕಲು ಹೊರಡುತ್ತಾನೆ. ಕಲ್ಪನೆಯಲ್ಲಿ ಸಾಕಾರಗೊಂಡ ಅನುಭವ, ಅನನ್ಯತೆ ಮತ್ತು ಅನುಭೂತಿಗಳು ಈ ಕಲಾವಿದರ ಸಂಯೋಜನೆಗಳ ಮೂಲವಸ್ತುಗಳು. ಟರ್ನರ್ ತನ್ನ, ಸಮಕಾಲೀನರಾದ, ಕ್ಯಾಸ್ಪರ್ ಡೇವಿಡ್ ಫ್ರೆಡ್ರಿಕ್, ಗೋಯಾ, ಯುಗೀನ್ ಡೆಲಾಕ್ರು ಮುಂತಾದ ಕಲಾವಿದರ ಸಿದ್ಧಾಂತಗಳನ್ನು ಒಪ್ಪಿಕೊಳ್ಳುತ್ತಲೇ, ತನ್ನ ಶೈಲಿ ಮತ್ತು ಚಿತ್ರ ರಚನೆಯ ಕ್ರಮ, ಮಾಧ್ಯಮವನ್ನು ಬಳಸಿಕೊಳ್ಳುವ ಬಗೆಯು ಅತ್ಯಂತ ಭಿನ್ನವೆಂದು ತೋರಿಸಿಕೊಡುತ್ತಾನೆ. ಟರ್ನರ್ ನ ಮನಸ್ಸನ್ನು ಸೆಳೆದ ವಸ್ತುಗಳೆಂದರೆ, ಸಮುದ್ರದಲ್ಲಿನ ಬಿರುಗಾಳಿ, ಬೆಂಕಿ, ದುರಂತದಲ್ಲಿ ಸಿಲುಕಿದ ಹಡುಗು, ವಿಶಾಲವಾದ ಬೆಳಕನ್ನು ಚೆಲ್ಲುವ ಆಗಸ,ವಿಚಿತ್ರವಾದ ಆಕಾರಗಳನ್ನು ಹೊಂದಿ ಇಡೀ ಆಕಾಶವನ್ನು ಆವರಿಸಿಕೊಳ್ಳುವ ಬಣ್ಣದ ಮೋಡಗಳ ಮೇಲೆ ನೆರಳು ಬೆಳಕಿನ ಲಾಸ್ಯ. ಕಣ್ಣಲ್ಲಿ ಕಣ್ಣಿಟ್ಟು ನೋಡಿದರೆ ಮಾತ್ರ ಕಾಣುವ ಮನುಷ್ಯ ಆಕಾರಗಳು. ಉಳಿದಂತೆ ಬಂಗಾರದ ವರ್ಣವನ್ನು ಇಡೀ ಜಗತ್ತಿಗೇ

ಎರಕ ಹೊಯ್ದಂತೆ ಹೊಳೆಯುವ ಹಳದಿ, ಕೇಸರಿಯ ಉಗ್ರ ವರ್ಣಗಳು [ಬೇಂದ್ರೆಯವರ, "ಮೂಡಲ ಮನೆಯ, ಮುತ್ತಿನ ನೀರಿನ ಎರಕಾವಾ ಹೊಯ್ದ...." ಕವಿತೆಯನ್ನೊಮ್ಮೆ ನೆನಪಿಸಿಕೊಳ್ಳಿ]. ಸೂರ್ಯನ ಬೆಳಕು, ದೇವರ ಅಸೀಮವಾದ ಶಕ್ತಿಯ ರೂಪವೆಂದೇ ಟರ್ನರ್ ನಂಬಿದ್ದ.ಅಂತೆಯೇ ಅವನ ಎಲ್ಲ ಚಿತ್ರಗಳು ಬೆಳಕಿನ ಪರಿಣಾಮದಿಂದ ಉಂಟಾಗುವ ವರ್ಣಸಂಯೋಜನೆಯ ಎಲ್ಲಾ ಅಯಾಮಗಳನ್ನು ಹುಡುಕುವ ಪ್ರಯಾಣಗಳೇ ಆಗಿದ್ದವು. ಇದರಿಂದ ಅವನು ಮುಂದಿನ ಇಂಪ್ರೆಷನಿಸ್ಟ್ ಕಲಾವಿದರಿಗೆ, ಪ್ರೇರಣೆಯಾಗುವಂತೆ ಆಯಿತು.

ಟರ್ನರನ ಇಲ್ಲಿನ ಚಿತ್ರ, "ಮಳೆ, ಹಬೆ ಮತ್ತು ವೇಗ–ದ ಗ್ರೇಟ್ ವೆಸ್ಟ್ರನ್ ರೈಲ್ವೆ" ಕೃತಿಯನ್ನು, ಥೇಮ್ಸ್ ನದಿಗೆ ಅಡ್ಡಲಾಗಿ ಕಟ್ಟಿದ, ಮೈಡನ್ ಹೆಡ್ ರೈಲ್ವೇ ಬ್ರಿಡ್ಜನ ರೇಖಾಚಿತ್ರದ ರೂಪಾಂತರವೆಂದು ಭಾವಿಸಲಾಗಿದೆ. ಈ ಚಿತ್ರದಲ್ಲಿ ಕೇಂದ್ರ ಭಾಗದಿಂದ ಹೊಮ್ಮುವ ಬ್ರಿಡ್ಜ್, ಚಿತ್ರದ ಎಡ ಮೂಲೆಯ ಮೂಲಕ ಹೊರಹೋಗುತ್ತದೆ ಅಂತೆಯೇ ಆ ಬ್ರಿಡ್ಜಿನ ಮೇಲಿರುವ ಉಗಿ ಬಂಡಿ. ಕೆಳಗಿನ ಥೇಮ್ಸ್ ನದಿ, ಅದಕ್ಕೆ ಹೊಂದಿಕೊಂಡಂತೆ ಇರುವ ನಗರದ ಭೂ ಭಾಗ ಮತ್ತು ಚಿತ್ರದ ಬಹುಪಾಲನ್ನು ಆವರಿಸಿರುವ ಆಕಾಶ ಎಲ್ಲವೂ ಸೂರ್ಯನ ಹೊಂಗಿರಣಗಳಿಂದ ಹೊಳೆಯುತ್ತಿರುವಂತೆ ನಿರೂಪಿಸಲಾಗಿದೆ. ಚಿತ್ರದ ಕೆಳಗೆ ನದಿಯಲ್ಲಿ ಬೋಟಿನಲ್ಲಿ ಪಯಣಿಸುತ್ತಿರುವವರನ್ನು ಅತ್ಯಂತ ಚಿಕ್ಕ ಪ್ರಮಾಣದಲ್ಲಿ ಪ್ರಾಮುಖ್ಯವಲ್ಲವೇನೋ ಎಂಬಂತೆ ಚಿತ್ರಿಸಲಾಗಿದೆ. ಗಾಢ ಕಂದು, ಕಪ್ಪುವರ್ಣಗಳಲ್ಲಿ ಕಾಣುವ ಬಿಡ್ಜ್, ಪ್ರಖರ ತೆಳು ಹಳದಿ ವರ್ಣದ ಹಲವು ಛಾಯೆಗಳೊಂದಿಗೆ ಕಾಣಿಸುತ್ತಾ, ಪ್ರಕೃತಿ ಮತ್ತು ಮನುಷ್ಯ ಪ್ರಯತ್ನಗಳನ್ನು ಮುಖಾಮುಖಿಯಾಗಿಸುವ ಕಲಾವಿದನ ಉದ್ದೇಶವನ್ನು ಸಾಕಾರಗೊಳಸುತ್ತದೆ.

ಈ ಚಿತ್ರವು ತೈಲ ವರ್ಣದಲ್ಲಿದ್ದು, ಟರ್ನರನ ಜಲ ವರ್ಣದ ಕುಶಲತೆಯನ್ನು ತೈಲವರ್ಣದಲ್ಲಿಯೂ ಸಾಧ್ಯಮಾಡಿರುವ ಬಗೆ ಉಚ್ಛಮಟ್ಟದ ತಾಂತ್ರಿಕ ನೈಪುಣ್ಯತೆಗೆ ಸಾಕ್ಷಿಯಾಗುತ್ತದೆ. ಚಿತ್ರದಲ್ಲಿ ನಮ್ಮ ಕಣ್ಣುಗಳನ್ನು ಕೇಂದ್ರಕ್ಕೆ ಎಳೆದು ಕೊಂಡು ಹೋಗುವಂಥ, ಯಥಾದರ್ಶನದ [ಪರ್ಸ್ಪೆಕ್ಟೀವ್] ತಂತ್ರ ಮೆಚ್ಚಬೇಕಾದ ಅಂಶ. ಚಿತ್ರದ ಮೇಲ್ಮೈಯನ್ನು ನೀವು ಸೂಕ್ಷ್ಮವಾಗಿ ಗಮನಿಸಿದರೆ, ವರ್ಣಗಳ ಲೇಪನದ ಮೂಲಕ ರೂಪು ತಳೆಯುವ ಮೈವಳಿಕೆಯೂ ಅಷ್ಟೇ ಮುಖ್ಯವಾಗಿ ಇಲ್ಲಿ ಕಾಣಿಸುತ್ತದೆ.

ಟರ್ನರ್ ಹಣಕಾಸಿನ ಯಶಸ್ಸಿನಿಂದಾಗಿ ತನಗೆ ಸರಿ ಕಂಡ ದಾರಿಯಲ್ಲಿ ಪ್ರಯೋಗಗಳನ್ನು ಮಾಡುತ್ತ ಮುಂದಿನ ತಲೆಮಾರಿನ ಹಲವು ಪ್ರಾಕಾರದ ಕಲೆಗಳಿಗೆ ಬುನಾದಿ ಹಾಕಿದನೆಂದೇ ನಾವು ಭಾವಿಸಬಹುದು. "ಇಂಪ್ರೆಷನಿಸ್ಟ್ ಕಲಾವಿದ, ಮೋನೆ ಇವನಿಂದ ಪ್ರಭಾವಿತನಾದನೆಂದರೆ ಟರ್ನರನ ಪ್ರಾಮುಖ್ಯತೆಯನ್ನು ನಾವು ಚರಿತ್ರೆಯಲ್ಲಿ ಗಮನಿಸಬಹುದು.ಸ'ನ್ನಿವೇಶದಲ್ಲಿ ಕಲಾವಿದ ಸೃಷ್ಟಿಸುವ ಅಲೌಕಿಕ ಅನುಭವವನ್ನು ಶಬ್ಧಗಳಲ್ಲಿ ಹಿಡಿದಿಡುವುದು ದುಸ್ಸಾಹಸವೇ ಸರಿ. ಆದರೆ, ಟರ್ನರ್ ತನ್ನ ಚಿತ್ರದಲ್ಲಿ ಲೌಕಿಕ ವಿವರಣೆಗಳಿಗೆ ಅತ್ಯಂತ ಕಡಿಮೆ ಮಹತ್ವ ಕೊಟ್ಟು, ಪ್ರಕೃತಿಯ ಅಮೂರ್ತ ರೂಪವನ್ನು ಬೆಳಕಿನ ನಾಟಕೀಯತೆಯ ಮೂಲಕ ನಮ್ಮ ಕಣ್ಣುಗಳಿಗೆ ಕಟ್ಟಿಕೊಡುವ ಮಾಂತ್ರಿಕ ಕೆಲಸವನ್ನು ಮುಂದಿನ ಹಲವಾರು ತಲೆಮಾರುಗಳವರೆಗೆ ಕಲಾಪ್ರೇಮಿಗಳು ಮರೆಯುವುದಿಲ್ಲವೆಂದು ನಾನು ಭಾವಿಸುತ್ತೇನೆ.

ಜೋಸೆಫ್ ಬಾಯ್ಸ್

ನಿಮ್ಮ ಮುಂದೆ ಈಗ ಮತ್ತೊಂದು ಕಲಾಕೃತಿಯಿದೆ.ಇದೊಂದು ಕಪ್ಪು-ಬಿಳುಪಿನ ಛಾಯಾಚಿತ್ರ.ಸಾಮಾನ್ಯ ನೋಡುಗನಿಗೆ ಇದರಲ್ಲಿರುವ ವ್ಯಕ್ತಿ ಬೇರೆ ದೇಶದವನೆಂದು ಅವನ ವೇಶ-ಭೂಷಣಗಳಿಂದ ತಕ್ಷಣವೇ ತಿಳಿಯಬಹುದು.ನಂತರ ಅವನು ಗುರುತಿಸುವುದು ಆ ವ್ಯಕ್ತಿಯ ಮೂಗು ಬಾಯಿಗಳ ಮೇಲೆ ಬಣ್ಣದಿಂದ ಏನನ್ನೋ ಬರೆಯಲಾಗಿದೆ.ಅವನದೇ ಮುಖವನ್ನು ತೋರಿಸುವ ಉಳಿದ ಚಿತ್ರಗಳಲ್ಲಿ ಅದು ದೊಡ್ಡದಾಗುತ್ತಾ ಹೋಗಿದೆ.ಅದೊಂದು ಮುಖಕ್ಕೆ ಕಟ್ಟಿರುವ ಬಟ್ಟೆಯೋ ಅಥವಾ ಸುಮ್ಮನೆ ಹಚ್ಚಿರುವ ಬಣ್ಣವೋ ಎಂಬ ಗೊಂದಲದಲ್ಲಿ ಅವನಿರುತ್ತಾನೆ. ಅಲ್ಲಿಗೆ ಅವನ ನೋಟ ಮತ್ತು ಅನುಭವ ನಿಲ್ಲುತ್ತದೆ.ಆದರೆ ಆ ಕಲಾವಿದನ ಕುರಿತು ಓದಿಕೊಂಡಿರುವ ನೋಡುಗನಿಗೆ ಆ ಚಿತ್ರದ ಸಂದರ್ಭ, ಅಲ್ಲಿ ಕಲಾವಿದ ಆ ಚಿತ್ರದ ಮೂಲಕ ಹೇಗೆ




ಮಾತೂ ಕೂಡ ಮೂರು ಆಯಾಮಗಳಿರುವ ಶಿಲ್ಪವೆಂದು ಸಾಧಿಸಲು ಬಯಸಿದ್ದಾನೆ ಎಂಬ ವಿಚಾರಗಳ ಹಿನ್ನೆಲೆಯಿರುತ್ತಿದ್ದರೆ ಅವನು ಆ ಕಲಾವಿದನ ತರ್ಕ, ವಿಚಾರಗಳಿಗೆ ಸ್ಪಂದಿಸಬಹುದು. ಹಾಗಾಗಿ ಇಲ್ಲಿ ಕಲಾವಿದ ತನ್ನ ಕಲಾಕೃತಿಯನ್ನು ನಿರ್ದಿಷ್ಟ ನೋಡುಗ ಸಮೋಹವನ್ನು ಉದ್ದೇಶಿಸಿ ರಚಿಸಿದ್ದಾನೆ ಎಂದಾಯಿತು. ಇಲ್ಲಿ ದೃಶ್ಯಾನುಭವದ ಜೊತೆಗೆ ವೈಚಾರಿಕ ಸಂವೇದನೆಯ ಸಾಮರ್ಥ್ಯವೂ ಬೇಕಾಗಿರುವುದರಿಂದ ಇಂತಹ ಕೃತಿ ಪ್ರಬುದ್ಧ ನೋಡುಗರು, ವಿಮರ್ಶಕರು ಮತ್ತು ಬುದ್ಧಿವಂತರಿಗಾಗಿ ಮಾತ್ರವೇ ?

ಈ ಕೃತಿಯು 1985ರಲ್ಲಿ ಜರ್ಮನಿಯ ಜೋಸೆಫ್ ಬಾಯ್ಸ್ ಎಂಬ ಕಲಾವಿದನಿಂದ

ರಚಿಸಲ್ಪಟ್ಟದ್ದು. ಇದೊಂದು ಕಪ್ಪು-ಬಿಳುಪಿನ ಛಾಯಾಚಿತ್ರ ಮಾಧ್ಯಮವನ್ನೇ ಏಕೆ ಆರಿಸಿಕೊಂಡನೆಂಬ ಪ್ರಶ್ನೆ ಸಹಜ. ಇಲ್ಲಿ ಕಲಾವಿದ ಒಂದೇ ಮುಖದ ಒಂದೇ ಭಂಗಿಯ ಹಲವು ಪ್ರತಿಗಳ ಮೇಲೆ ಬಣ್ಣದಿಂದ ಆಕಾರವೊಂದನ್ನು ಚಿತ್ರಿಸಿ ಆ ಮೂಲಕ ಧ್ವನಿಗೂ ಉದ್ದ, ಅಗಲ, ಎತ್ತರಗಳೆಂಬ ಆಯಾಮಗಳ ಸಾಧ್ಯತೆಯನ್ನು ಹೇಳುವ ಉದ್ದೇಶವಿದ್ದುದರಿಂದ, ಅವನ ಈ ಆಯ್ಕೆಯನ್ನು ಸರಿಯಾಗಿದೆಯೆನ್ನಬಹುದು ಮತ್ತು ಈ ಸನ್ನಿವೇಶದಲ್ಲಿ ಈ ಕಲಾವಿದನಿಗೆ ಎದುರಾಗಿರುವ ಸಮಸ್ಯೆಗಳು ಅವನ ಹಿಂದಿನ ತಲೆಮಾರಿನ ಕಲಾವಿದರಿಗಿಂತ ಬೇರೆಯಾದದ್ದು. ಅವನಿಗೆ ಕಲೆಯೆನ್ನುವುದು ಕುಶಲತೆಯಲ್ಲ. ಅದು ವಿಚಾರವೊಂದನ್ನು ಸಮಾಜಕ್ಕೆ ತಲುಪಿಸುವ ಸಾಧನ. ಈ ದಿಕ್ಕಿನಲ್ಲಿ ಯಾವ ಪರಿಕರಗಳು, ಮತ್ತು ರಚನಾಕ್ರಮವು ಇದನ್ನು ಸಾಧಿಸಲು ಸಾಧ್ಯವಾಗಬಲ್ಲದೋ ಅದು ಅವನಿಗೆ ಮುಖ್ಯ. ಇಲ್ಲಿ ಕಲಾಕೃತಿಯ ಸೌಂದರ್ಯವೆನ್ನುವುದು ಶಾಸ್ತ್ರಗಳ/ಇನ್ನಿತರೆ ಪೂರ್ವಾಗ್ರಹಿಕೆಯಿಂದ ಬರುವಂತಹುದಲ್ಲ. ಬದಲಾಗಿ ಕಲಾಕೃತಿಯ ರಚನೆಯಲ್ಲೇ ಹುಟ್ಟಿಕೊಳ್ಳುವ ದೃಶ್ಯಾತ್ಮಕ ವಿಚಾರಗಳು, ಅದರದೇ ಆದ ಸೌಂದರ್ಯಾನುಭವವನ್ನು ಉಂಟುಮಾಡಬಲ್ಲದು. ಇದೊಂದು ಆಧುನಿಕೋತ್ತರ ಸಂದರ್ಭದ ಕಲಾಕೃತಿ.

ಆನ್ ಸೆಲ್ಮ್ ಕೀಫರ್ / Anselm Keifer


ಕೀಫರನ ಕೃತಿ, 'ಪಾರ್ಸಿಫಾಲ್-2' 1973 ರಲ್ಲಿ ಚಿತ್ರಿಸಿದ್ದು.ಈ ಚಿತ್ರವು ದೃಶ್ಯವನ್ನು ಭಾವಪೂರ್ವಕವಾಗಿ ಕಾಣಿಸುತ್ತದೆ.ವಿಶಾಲವಾದ, ಮರದಿಂದ ನಿರ್ಮಿಸಿದ ಕೊಠಡಿ.ಎರಡೂ ಕಡೆ ದೊಡ್ಡದಾದ, ಮರದಿಂದ ನಿರ್ಮಿಸಿದ ಆಕಾರಗಳು. ಉದ್ದಕ್ಕೆ ಕೊಠಡಿಯ ಕೊನೆಯವರೆಗೂ ಚಾಚಿಕೊಂಡಿವೆ. ಈ ಆಕಾರಗಳ ಮಧ್ಯೆ ಮರದ ಆಸ್ಥಾನದ ಮೇಲೆ ಒಂದು ಪಾತ್ರೆ ಹಾಗೂ ಅದರಲ್ಲಿ ತುಂಬಿರುವ ರಕ್ತ. ಒಟ್ಟು ಚಿತ್ರದಲ್ಲಿ ತುಂಬಿರುವ ನಿಗೂಢತೆ ಹಾಗೂ ಭಯಾನಕತೆಯು



ನೋಡುಗನಿಗೆ ಮೊದಲ ಅನುಭವ. ಈ ಚಿತ್ರದಲ್ಲಿ ಕೀಫರ್ ಜರ್ಮನಿ ಹಾಗೂ ಯೂರೋಪಿನ ಬೇರೆ ಬೇರೆ ಸಂದರ್ಭಗಳ ಪೌರಾಣಿಕ ಪ್ರತಿಮೆಗಳನ್ನು ಬಳಸಿಕೊಂಡಿದ್ದಾನೆ. ಒಂದು ಕತೆಯ ಪ್ರಕಾರ ಶಿಲುಬೆಗೇರಿದ ಕ್ರಿಸ್ತನ ದೇಹದಿಂದ ಹರಿದ ರಕ್ತವನ್ನು ಜೋಸೆಫ್ ಅರಿಮಾಥಿಯಾನು ಪಾತ್ರೆಯೊಂದರಲ್ಲಿ ಸಂಗ್ರಹಿಸಿದ. ಇನ್ನೊಂದು ಕತೆಯ ಪ್ರಕಾರ ಇದು ಆಮ್ ಪೋರ್ಟಾಸ್ (ಗಾಯಗೊಂಡ ದೊರೆ) ಮತ್ತು ಪರ್ಸಿಫಾಲ್ (ಮೂರ್ಖನಾದ ನಾಯಕ) ಇವರ ದುರಂತವನ್ನು ಸೂಚಿಸುವ ಸಂಕೇತ. ಈ ಚಿತ್ರದ ವಸ್ತುವಿನ ಹಿನ್ನೆಲೆಯ ವಿವರಗಳು ಏನೇ ಇದ್ದರೂ, ಮೊದಲ ನೋಟಕ್ಕೆ ಅದು ಸೃಷ್ಟಿಸುವ ದೃಶ್ಯಾತ್ಮಕ ಅನುಭವ ಪರಿಣಾಮಕಾರಿಯಾದದ್ದು. ಜರ್ಮನಿಯ ಲೇಖಕ ರಫಾಯೆಲ್ ಲೊಪೆಜ್ ಕೀಫರನ ಈ ಚಿತ್ರವನ್ನು ಕುರಿತು ಹೇಳುತ್ತಾ

Keifer reveals himself as a great artist in his treatment of an image of harror. This makes him comparable to the great tragedians who new how to present images of horror and transmit emotion and reflection.





1990ರಲ್ಲಿ ಕೀಫರ್ ಸೀಸದಲ್ಲಿ ಎರಕ ಹೊಯ್ದು ತಗಡು ಹಾಳೆಗಳ ಪುಸ್ತಕಗಳ ಮೂಲಕ ಭಿನ್ನವಾದ ಮಾಧ್ಯಮವೊಂದರಲ್ಲಿ ಕೃತಿ ರಚಿಸಿದ.ಕೀಫರ್ ಈ ಅವಧಿಯಲ್ಲಿ ಎರಡು ಪುಸ್ತಕಗಳನ್ನು ರಚಿಸಿದ.ಈ ಪುಸ್ತಕಗಳಿಗೆ 'ಶುಲಾಮಿತ್' ಎಂದು ಹೆಸರಿಸಿದ. ಈ ಕೃತಿಯ ಸಂದರ್ಭವನ್ನು ಹೆಚ್ಚು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾದರೆ ಕೀಫರನ ಮೇಲೆ ಆದ ಪ್ರಭಾವಗಳನ್ನು ನಾವು ತಿಳಿಯಬೇಕು. ಪೌಲ್ ಸಿಲಾನ್ ಎಂಬ ಜ್ಯೂ ಕವಿಯ 'ಸಾವಿನ ಹಾಡು' (song of the death) ಎಂಬ ಕವಿತೆಯು ಕೀಫರನ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿದೆ. ಪೌಲ್ ಸಿಲಾನ್ – ಸ್ವತ: ಹಿಟ್ಲರನ ಕಾನ್ಸಂಟ್ರೇಷನ್ ಕ್ಯಾಂಪ್‌ನಲ್ಲಿ ತಾಯಿ, ತಂದೆಯರನ್ನು ಸಿಲಾನ್ ನಲ್ಲಿಯೇ ಕಳೆದುಕೊಳ್ಳುತ್ತಾನೆ. ಜೀವನದ ದುರ್ಭರವಾದ, ಕಠೋರವಾದ ಕ್ಷಣಗಳನ್ನಿಲ್ಲಿ ಅನೇಕ ವರ್ಷಗಳ ಕಾಲ ಅವನು ಕಳೆಯುತ್ತಾನೆ. ಆದರೆ ಅವನಿಗೆ ಮತ್ತು ಅವನಂತೆಯೇ ಬಹಳಷ್ಟು ಜನ ಅವನ ಸಂಗಾತಿಗಳಿಗೆ 'ಕವಿತೆ'ಗಳು ಜೀವನದಲ್ಲಿ ಭರವಸೆಯನ್ನು ಕೊಟ್ಟವು. ಕೈಗೆ ಸಿಕ್ಕ ಚೂರು ಕಾಗದದ ತುಣುಕುಗಳಲ್ಲಿ ಬರೆದ ಸಿಲಾನ್ ಕವಿತೆಗಳು 1955 ರಲ್ಲಿ ಮೊಟ್ಟ ಮೊದಲಿಗೆ ಮುದ್ರಿಸಲ್ಪಟ್ಟವು.'ಸಾವಿನ ಹಾಡು' ಈ ಸಂಗ್ರಹದಲ್ಲಿ ಸೇರಿದೆ. ಈ ಕವಿತೆಯು ಕೊನೆಯಲ್ಲಿ ಕವಿ,

Death is a master from Germany, his eyes are blue he strikes you with leader bullets his aim is true.

A man lives in the house, your golden hair margaretel

He sets his pack on to us, he grants us to grave in the air.

He plays with the serpants and day dreams, death is a master from germany.

Your golden hair margarete

Your ashen hair schucLamith-paul celan.

ಇಲ್ಲಿ ಬರುವ ಮಾರ್ಗರೀಟ್ ಮತ್ತು ಶುಲಾಮಿತ್ ಇಬ್ಬರೂ ಜರ್ಮನ್ ಮತ್ತು ಜ್ಯೂ ಜನಾಂಗದ ಘರ್ಷಣೆಗೆ ಪ್ರತಿಮೆಗಳಾಗುತ್ತಾರೆ. ಒಬ್ಬಳು ಬಂಗಾರದ ಬಣ್ಣದ ಕೂದಲಿನವಳಾದರೆ, ಮತ್ತೊಬ್ಬಳು ಕಪ್ಪು ಕೂದಲಿನವಳು. ಭಿನ್ನ ಮನೋಧರ್ಮದ ಇವರು ಒಂದು ಜನಾಂಗೀಯ ದುರಂತದ ಪ್ರತೀಕಗಳೂ ಆಗಿ ಕಾಣುತ್ತಾರೆ.

ಕೀಫರ್, ತನ್ನ ಪುಸ್ತಕ ರೂಪದ ಕೃತಿಯ ಹಾಳೆಯ ಮೇಲೆ ಹೆಂಗಸಿನ ಕಪ್ಪು ಕೂದಲ ಗುಪ್ಪೆಯನ್ನು ಬಳಸಿದ್ದಾನೆ. ಇದು ಶುಲಾಮಿತ್‌ಗಳನ್ನು ಸಂಕೇತಿಸುತ್ತದೆ.ಈ ಪುಸ್ತಕದ ರೂಪಗಳು ಹಿಟ್ಲರನ ಕಾನ್ಸಂಟ್ರೇಷನ್ ಕ್ಯಾಂಪಿನ ನೆನಪನ್ನು ಮತ್ತೆ ಮತ್ತೆ ತರುವುದಲ್ಲದೆ, ಕಪ್ಪು ಕೂದಲು ಅಲ್ಲಿ ಸೆರೆಯಾಗಿದ್ದ ಜ್ಯೂ ಹೆಂಗಸರ ಕತ್ತಲದಿನಗಳನ್ನು ನೆನಪಿಸುತ್ತದೆ. ಅಲ್ಲದೆ ಕೀಫರ್ ಒಬ್ಬ ಜರ್ಮನನಾಗಿ, ಇಡೀ ಜರ್ಮನರ ಕೀಳರಿಮೆ ಅಥವಾ ಗಿಲ್ಟ್ ಮನೋಭಾವವನ್ನು ಈ ಕೃತಿಯ ಮೂಲಕ ಪ್ರತಿಧ್ವನಿಸುತ್ತಾನೆ. ಆತ ಈ ಭಾವನೆಯಿಂದ ವಿಚಲಿತನಾದರೂ ಮತ್ತೆ ಮತ್ತೆ ಈ ರೀತಿಯ ಪುಸ್ತಕಗಳನ್ನು ರಚಿಸಿದ್ದಾನೆ. ಹಿಂಸೆ ಹಾಗೂ ದುರಂತ ಈ ಎರಡೂ ಕೀಫರನನ್ನು ಮತ್ತೆ ಮತ್ತೆ ಕಾಡಿದ ಸಂಗತಿಗಳು. ಭಯಾನಕತೆಯ ಕ್ಷಣಗಳನ್ನು ಅಭಿವ್ಯಕ್ತಿಸುವುದರ ಮೂಲಕ ಕಲೆ, ಶಕ್ತಿಯುತವಾದ ಮಾಧ್ಯಮವೆಂದು ಕೀಫರ್ ಕಂಡುಕೊಳ್ಳುತ್ತಾನೆ.

ತನ್ನ ಹಿಂದಿನ ಕೃತಿಗಳಿಗಿಂತ ಭಿನ್ನವಾದ ರೀತಿಯಲ್ಲಿ ಹಾಗೂ ಮಾಧ್ಯಮದಲ್ಲಿ ಈ ಪುಸ್ತಕ ರೂಪಗಳನ್ನು ರಚಿಸಿದ. ಅದಕ್ಕಾಗಿ ಅವನು ಬಳಸಿರುವುದು ಲೋಹದ ಹಾಳೆಗಳು ಹಾಗೂ ಹೆಂಗಸಿನ ಕೂದಲು. ಇಲ್ಲಿ ಕೀಫರ್ ತನ್ನ ಹಿಂದಿನ ಕೃತಿಗಳಂತೆ ಬಣ್ಣ ಹಾಗೂ ಚಿತ್ರಿತ ಪ್ರತಿಮೆಗಳನ್ನು ಬಳಸಿಲ್ಲ. ಬದಲಾಗಿ ಈ ಹಾಳೆಗಳ ಮೇಲೆ ಸೀಸದ ಎರಕಹೊಯ್ದಿದ್ದಾನೆ. ಸಲ್ಫೂರಿಕ್ ಆಸಿಡ್‌ನಂತಹ ರಾಸಾಯನಿಕದಿಂದ ಮೈವಳಿಕೆಯನ್ನು ನಿರ್ಮಿಸಿದ್ದಾನೆ. ಈ ಕಲಾಕೃತಿಗಳು ರಾಸಾಯನಿಕಗಳ ವಾಸನೆಯಿಂದ ಕೂಡಿವೆ.

ಈ ಸಂದರ್ಭದಲ್ಲಿ ರಫಾಯೆಲ್ ಲೊಪೆಜ್ ಹೇಳುವ ಹಾಗೆ,

``Hell is imagined through the sense of small in saint Ignatious loyola's spiritual exercizes. It seems to me that, Ignatious's conception was backed by the medieval alchemical imagination. That consideration hell to be

evoked through the smell of sulphur. The patina of Keifer's lead pages has a corrosive sulphuric aspect bringing to mind this alchemical association.'


ಒಟ್ಟಾರೆಯಾಗಿ ಹೇಳುವುದಾದರೆ; ಚರಿತ್ರೆ, ಸಾಮಾಜಿಕ-ಸಾಂಸ್ಕೃತಿಕ ಸಂಕೀರ್ಣತೆ, ಜನಾಂಗೀಯ ಹಿಂಸೆ, ಸಮುದಾಯದ ವಲಸೆ, ಪರಿಸರ ಸಂವೇದನೆ, ಗ್ರಾಹಕ ಸಂಸ್ಕೃತಿ, ಸ್ತ್ರೀ ಸಂವೇದನೆಗಳು, ಲಿಂಗಭೇದ ವಿಚಾರಗಳು ಹೀಗೆ ಸಮಾಜವನ್ನು ಕಾಡುತ್ತಿರುವ ಹಲವು ಹತ್ತು ಸವಾಲುಗಳು ಕಲಾವಿದರನ್ನೂ ಕಾಡಿವೆ. ಈ ಸಂಕೀರ್ಣವಾದ ವೈಚಾರಿಕತೆಯನ್ನು ಸಾಂಪ್ರದಾಯಿಕ ಮಾಧ್ಯಮಗಳಲ್ಲಿ ಅಭಿವ್ಯಕ್ತಿಸುವಲ್ಲಿ ಉಂಟಾಗಿರುವ ತೊಡಕುಗಳನ್ನು ಹೊಸ ಮಾಧ್ಯಮಗಳು ಪರಿಹರಿಸಲು ಪ್ರಯತ್ನಿಸಿವೆ. ಈ ಲೇಖನದಲ್ಲಿ ಪ್ರಾತಿನಿಧಿಕವಾಗಿ, ಕೆಲವು ಕಲಾವಿದರ ಕಲಾ ಕೃತಿಗಳನ್ನು ಚರ್ಚಿಸುವ ಮೂಲಕ, ಚಿತ್ರಕಲೆಯ ಅನನ್ಯತೆಯನ್ನು ಮತ್ತು ಶಬ್ಧಗಳಲ್ಲಿ ಅದನ್ನು ಹಿಡಿದಿಡುವ ಪಯತ್ನದ ಮಿತಿಯನ್ನೂ ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ವಿಸ್ತಾರವಾದ ಆಶಯವನ್ನು ಹೊಂದಿ ದೇಶ, ಕಾಲಗಳನ್ನು ಮೀರಿ ಕಲಾಕೃತಿಯೊಂದು ಬೆಳೆಯಬಲ್ಲ ಸಾಧ್ಯತೆಯನ್ನೂ ಇಲ್ಲಿ ಕಂಡ ಕಲಾಕೃತಿಗಳು ನಮಗೆ ಮನದಟ್ಟು ಮಾಡಿಕೊಟ್ಟಿವೆ. ಈ ಮೂಲಕ ಕಲಾಕೃತಿಯನ್ನು ನೋಡಲು ಬೇಕಾದ ತಯಾರಿ, ವಿಶೇಷವಾದ ಒಳ ನೋಟ ಮತ್ತು ಸಾಂದರ್ಭಿಕವಾದ ಅರ್ಥ ಸಾಧ್ಯತೆಗಳ ಮೂಲಕ ಕಲಾಚಿಂತನೆಯ ಪರಿಯನ್ನು ಪರಿಚಯಿಸುವ ಪ್ರಯತ್ನ ಇದಾಗಿದೆ.

ಗ್ರಂಥ ಋಣ:

1. "ದ ಆರ್ಟ್ ಆಫ್ ಪೈಂಟಿಂಗ್ ಇನ್ ಏನ್ ಷಿಯೆಂಟ್ ಇಂಡಿಯ-ಶ್ರೀನಿವಾಸ ರಾವ್
2. ಅಭಿನವ ಭಾರತಿ-ಅನ್ ಇಂಟರ್ಪ್ರಿಟೇಶನ್ ಆಫ್ ಭರತ ನಾಟ್ಯ ಶಾಸ್ತ್ರ - ಶ್ರೀನಿವಾಸ ರಾವ್
3. ಕಲಾ ಪ್ರದರ್ಶನ ಏಕೆ ಬೇಕು?- ಆನಂದ ಕುಮಾರ ಸ್ವಾಮಿ, ಭಾವಾನುವಾದ - ರಮೇಶಚಂದ್ರ
4. ದೃಶ್ಯ ಭಾಷೆ ಕೆಲವು ಅನಿಸಿಕೆಗಳು-ಕಲಾವಾರ್ತೆ-ರಮೇಶಚಂದ್ರ.
5. ವೀಣೆಯ ಹುಚ್ಚು-ರಮೇಶಚಂದ್ರ, "ದೃಶ್ಯ"-ಸಂಪಾದಕ, ಮಂಜುನಾಥ್. ಎಸ್
6. ಜೀವ-ಮೇಳ, ಕೆ. ಎಸ್ ಶ್ರೀನಿವಾಸ ಮೂರ್ತಿ
7. ಜರ್ಮನ್ ಸಮಕಾಲೀನ ಕಲೆ-ಕ್ಯಾಟಲಾಗ್, ಮ್ಯಾಕ್ಸ್ ಮುಲ್ಲರ್ ಭವನ
8. ಹಿಂಸೆಯ ಪ್ರತಿರೂಪಗಳು- ರಮೇಶಚಂದ್ರ, ಅಭಿನವ ವಿಶೇಷ ಸಂಚಿಕೆ

❑


ಬೆಂಗಳೂರಿನಲ್ಲಿ ನಡೆದ 'ಕಲಾ ಸಾಹಿತ್ಯ ಮತ್ತು ವಿಮರ್ಶೆ' ವಿಚಾರಸಂಕಿರಣದ ಛಾಯಾಚಿತ್ರಾವಳಿ...




'ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆ' ವಿಚಾರಸಂಕಿರಣದ ಉದ್ಘಾಟನೆ ಕಲಾವಿಮರ್ಶಕ ಪ್ರೊ. ಎಂ.ಎಚ್.ಕೃಷ್ಣಯ್ಯ ಅವರಿಂದ. ಹಿರಿಯ ಕಲಾವಿದರಾದ ಎಸ್.ಜಿ.ವಾಸುದೇವ್, ಡಾ. ಸಿ. ಚಂದ್ರಶೇಖರ್, ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕರಾದ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಮತ್ತು ಅಕಾಡೆಮಿ ರಿಜಿಸ್ಟ್ರಾರ್ ಹೆಚ್.ವಿ.ಇಂದ್ರಮ್ಮ ಉಪಸ್ಥಿತರಿದ್ದರು.



ಅತಿಥಿ ಗಣ್ಯರಿಂದ 'ಕಲಾ' ವೈಚಾರಿಕ ಸಾಹಿತ್ಯ ಚಿತ್ರ ಸಂಪುಟ-೧ರ ಲೋಕಾರ್ಪಣೆ.




ಮುಖ್ಯ ಅತಿಥಿ ಪ್ರೊ. ಎಂ.ಎಚ್.ಕೃಷ್ಣಯ್ಯ ಅವರಿಂದ 'ಕಲಾ' ಸಂಚಿಕೆ ಕುರಿತು ವ್ಯಾಖ್ಯಾನ.



ಕರ್ನಾಟಕ ಲಲಿತಕಲಾ ಅಕಾಡೆಮಿಯ ಮಾಜಿ ಅಧ್ಯಕ್ಷರಾದ ಡಾ. ಸಿ.ಚಂದ್ರಶೇಖರ್ ಅವರಿಂದ ಮೆಚ್ಚುಗೆಯ ಮಾತು.




ಅಕಾಡೆಮಿ ಅಧ್ಯಕ್ಷರಾದ ಡಾ. ಎಂ.ಎಸ್.ಮೂರ್ತಿ ಅವರಿಂದ ಅಧ್ಯಕ್ಷೀಯ ನುಡಿ.



ಕಲಾವಿಮರ್ಶಕ ಕೆ.ವಿ.ಸುಬ್ರಹ್ಮಣ್ಯಂ ಅವರಿಂದ ವಿಚಾರಮಂಡನೆ.



ಅಕಾಡೆಮಿ ಮಾಜಿ ಅಧ್ಯಕ್ಷರಾದ ಚಿ.ಸು.ಕೃಷ್ಣಸೆಟ್ಟಿ ಅವರಿಂದ ಪ್ರಬಂಧ ಪ್ರಸ್ತುತಿ.




ಪ್ರಾತ್ಯಕ್ಷಿಕೆ ಮೂಲಕ ವಿಚಾರಮಂಡಿಸುತ್ತಿರುವ ಕಲಾ ಬರಹಗಾರ್ತಿ ನಳಿನಿ ಎಸ್.ಮಾಳವಿಯ.




'ಕಲಾವಾರ್ತೆ' ಸಂಪಾದಕರಾದ ರಾಜು ಮಳವಳ್ಳಿ ಅವರಿಂದ ವಿಶ್ಲೇಷಣೆ.



ಪ್ರೊ. ಸುರೇಶ್ ಜಯರಾಮ್ ಅವರಿಂದ 'ಕಲಾ ಚಿಂತನೆ ಮತ್ತು ನೈತಿಕತೆ' ಯ ಪ್ರಬಂಧ ಮಂಡನೆ.




'ಕಲಾಕೃತಿ ಮತ್ತು ಕಲಾ ಚಿಂತನೆ' ವಿಷಯ ಕುರಿತು ರಮೇಶ್‌ಚಂದ್ರ ಅವರ ವಿಚಾರಧಾರೆಯ ಪ್ರಸ್ತುತಿ.



ಕಲಾ ವಿದ್ವಾಂಸರೊಂದಿಗೆ ಸಂವಾದದಲ್ಲಿ ತೊಡಗಿರುವ ಅಕಾಡೆಮಿ ಅಧ್ಯಕ್ಷರು.




ಸಂವಾದದಲ್ಲಿ ಕಲಾವಿದರು ತೋರಿದ ಉತ್ಸಾಹದ ಪರಿ.



ವಿಚಾರಸಂಕಿರಣಕ್ಕೆ ಕಳೆ ತಂದ ಕಲಾ ಸಮುದಾಯ.




ವಿಚಾರ ಮಂಡನೆಗಳನ್ನು ಆಲಿಸುವಲ್ಲಿ ತಲ್ಲೀನವಾಗಿರುವ ಕಲಾವಿದರ ಬಳಗ.



ಕಲಾವಿದರಿಗೆ ಅಚ್ಚುಕಟ್ಟಾದ ಭೋಜನ ವ್ಯವಸ್ಥೆಯ ಝಲಕ್.



ವಿಚಾರಸಂಕಿರಣದ ಸಮಾರೋಪದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎ.ದಯಾನಂದ್ ಅವರ ಮಾತಿನ ಲಹರಿ. ಇಲಾಖೆಯ ಜಂಟಿ ನಿರ್ದೇಶಕರಾದ ಅಶೋಕ್ ಎನ್. ಚಲವಾದಿ, ಅಕಾಡೆಮಿ ಅಧ್ಯಕ್ಷರು, ರಿಜಿಸ್ಟ್ರಾರ್, ಹಿರಿಯ ಕಲಾವಿದರಾದ ಡಾ.ಸಿ.ಚಂದ್ರಶೇಖರ್ ಮತ್ತು ಕಲಾವಿಮರ್ಶಕ ಕೆ.ವಿ.ಸುಬ್ರಹ್ಮಣ್ಯಂರ ಸಮ್ಮುಖ.



ಕರ್ನಾಟಕ ಲಲಿತಕಲಾ ಅಕಾಡೆಮಿಯ ೨೦೧೫ರ ಗೌರವ ಫೆಲೋಶಿಪ್ ಅನ್ನು ಹಿರಿಯ ಕಲಾ ವಿಮರ್ಶಕ ಕೆ.ವಿ.ಸುಬ್ರಹ್ಮಣ್ಯಂ ಹಾಗೂ ಅಕಾಡೆಮಿ ಮಾಜಿ ಅಧ್ಯಕ್ಷರಾದ ಡಾ.ಸಿ.ಚಂದ್ರಶೇಖರ್ ಅವರಿಗೆ ಪ್ರದಾನ ಮಾಡಿದ ಸಂದರ್ಭ. ಗಣ್ಯರ ಉಪಸ್ಥಿತಿ.

ವಿಚಾರ ಸಂಕಿರಣದ ಹಾದಿ

ಕರ್ನಾಟಕ ಸರ್ಕಾರ

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ವಿಚಾರ ಸಂಕಿರಣ

ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆ

ದಿನಾಂಕ: 4 ಮತ್ತು 5 ಆಗಸ್ಟ್ 2016 | 'ನಯನ ಸಭಾಂಗಣ', ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

2015ನೇ ಸಾಲಿನ ಫೆಲೋಶಿಪ್ ಪಡೆದ ಕಲಾಕೃತಿಗಳ ಪ್ರದರ್ಶನ

ಬೆಳಗ್ಗೆ 10.30 ಗಂಟೆಗೆ ಕರ್ನಾಟಕ ಲಲಿತಕಲಾ ಅಕಾಡೆಮಿ, 'ವರ್ಣ ಆರ್ಟ್ ಗ್ಯಾಲರಿ', ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

ಉದ್ಘಾಟನೆ

ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ

ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು

ವಿಚಾರ ಸಂಕಿರಣ ಉದ್ಘಾಟನೆ

ಬೆಳಗ್ಗೆ 11.00 'ನಯನ ಸಭಾಂಗಣ', ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು

ಪ್ರೊ. ಎಂ.ಹೆಚ್. ಕೃಷ್ಣಯ್ಯ

ಮಾಜಿ ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು

'ಕಲಾ' – ವೈಚಾರಿಕ ಸಾಹಿತ್ಯ-ಚಿತ್ರಸಂಪುಟ ಮೊದಲನೇ ಸಂಪುಟ ಲೋಕಾರ್ಪಣೆ

ಡಾ. ಸಿ. ಚಂದ್ರಶೇಖರ್

ಮಾಜಿ ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ

ಅತಿಥಿ

ಶ್ರೀ ಎಸ್. ಜಿ. ವಾಸುದೇವ್

ಹಿರಿಯ ಕಲಾವಿದರು, ಬೆಂಗಳೂರು

ಅಧ್ಯಕ್ಷತೆ

ಡಾ. ಎಂ.ಎಸ್. ಮೂರ್ತಿ

ಅಧ್ಯಕ್ಷರು, ಕರ್ನಾಟಕ ಲಲಿತಕಲಾ ಅಕಾಡೆಮಿ

ಕರ್ನಾಟಕ ಲಲಿತಕಲಾ ಅಕಾಡೆಮಿ, 2ನೇ ಮಹಡಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-560 002

080 22480297 | www.lalitkalakarnataka.org | kla.karnataka@gmail.com

ಪ್ರಬಂಧ ಮಂಡನೆ – ಸಂವಾದ

ದಿನಾಂಕ: 04-08-2016 ಗುರುವಾರ

ಗೋಷ್ಠಿ - 1 | ಮಧ್ಯಾಹ್ನ 12 - 12:45

ಶ್ರೀ ಕೆ.ವಿ. ಸುಬ್ರಮಣ್ಯಂ

ವಿಷಯ: **ಕಲಾಸಾಹಿತ್ಯ-ವಿಮರ್ಶೆ ಮತ್ತು ಇತಿಹಾಸ**

ಪ್ರತಿಕ್ರಿಯೆ: **ಶ್ರೀ ಎಸ್.ಜಿ. ವಾಸುದೇವ್ - ಡಾ. ಶಿವಾನಂದ ಬಂಟನೂರು**

ಊಟದ ಬಿಡುವು 1 ರಿಂದ 2.00

ಗೋಷ್ಠಿ - 2 | ಮಧ್ಯಾಹ್ನ 2 - 2:45

ಶ್ರೀ ಜಿ.ಸು. ಕೃಷ್ಣ ಸೆಟ್ಟಿ

ವಿಷಯ: **ಕನ್ನಡ ಕಲಾ ಸಾಹಿತ್ಯ ವಿಮರ್ಶೆ**

ಪ್ರತಿಕ್ರಿಯೆ: **ಡಾ. ಸಿ. ಚಂದ್ರಶೇಖರ್ – ಡಾ. ಸುಭಾಷ್ ಕಮ್ಮಾರ್**

ಚಹಾ ವಿರಾಮ 3.00 ರಿಂದ 3.15

ಗೋಷ್ಠಿ - 3 | ಮಧ್ಯಾಹ್ನ 3.15 ರಿಂದ 4.00

ಶ್ರೀಮತಿ ನಳಿನಿ ಎಸ್. ಮಾಳವೀಯ

ವಿಷಯ: **ಕಲೆ - ಕಲಾವಿದ - ಸಮಾಜ**

ಪ್ರತಿಕ್ರಿಯೆ: **ಡಾ. ಸೌಮ್ಯ ಚವ್ಹಾಣ್ - ಶ್ರೀ ವಿಠಲರೆಡ್ಡಿ ಫ. ಚುಳಕಿ**

ಸಂವಾದ: 4:00 ರಿಂದ 5 ರವರೆಗೆ

ದಿನಾಂಕ: 05-08-2016, ಶುಕ್ರವಾರ

ಗೋಷ್ಠಿ - 4 ಬೆಳಗ್ಗೆ : 10:30 - 11:15

ಶ್ರೀ ರಾಜು ಮಳವಳ್ಳಿ

ವಿಷಯ: **ದೃಶ್ಯಕಲೆ ಮತ್ತು ಸುದ್ದಿ ಮಾಧ್ಯಮಗಳು**

ಪ್ರತಿಕ್ರಿಯೆ: **ಡಾ. ಕೃಷ್ಣೇಗೌಡ - ಶ್ರೀ ಪುರುಷೋತ್ತಮ ಅಡ್ವೆ**

ಚಹಾ ವಿರಾಮ: 11:30 – 11:45

ಗೋಷ್ಠಿ - 5 ಬೆಳಗ್ಗೆ : 11:45 - 12:15

ಪ್ರೊ. ಸುರೇಶ್ ಜಯರಾಮ್

ವಿಷಯ: **ಕಲಾ ಚಿಂತನೆ ಮತ್ತು ನೈತಿಕತೆ**

ಪ್ರತಿಕ್ರಿಯೆ: **ಶ್ರೀ ರಮೇಶ್‌ಚಂದ್ರ - ಶ್ರೀಧರ್‌ಮೂರ್ತಿ**

ಗೋಷ್ಠಿ - 6 ಮಧ್ಯಾಹ್ನ 12:15 – 1.00

ಶ್ರೀ ರಮೇಶಚಂದ್ರ

ವಿಷಯ: **ಕಲಾಕೃತಿ ಮತ್ತು ಕಲಾ ಚಿಂತನೆ**

ಪ್ರತಿಕ್ರಿಯೆ: **ಡಾ. ಉನ್ನಿಕೃಷ್ಣನ್ - ಶ್ರೀ ಶಿವಾನಂದ ಬಸವಂತಪ್ಪ**

ಊಟದ ವಿರಾಮ: 1.00 – 2.00

ಸಂವಾದ: 2.00 ರಿಂದ 3.00 ರವರೆಗೆ

ಸಂಪಾದಕರು

ಶ್ರೀ ಮೋಹನ್ ಸೀತನೂರು, ಕಲಬುರಗಿ
ಡಾ. ಸೌಮ್ಯ ಚವಾಣ್, ಬೆಂಗಳೂರು
ಶ್ರೀ ನೂತನ್ ಎಂ. ದೋಸೆಟ್ಟಿ, ಬೆಂಗಳೂರು
ಶ್ರೀ ಬಸವರಾಜ್ ಕಲೆಗಾರ್, ಯಾದಗಿರಿ
ಶ್ರೀ ಕೆ. ರಾಜಶೇಖರ್, ಕಲಬುರಗಿ
ಶ್ರೀ ರಂಗಸ್ವಾಮಿ, ತುಮಕೂರು
ಶ್ರೀಮತಿ ಪ್ರೇಮ ಹೆಚ್. ಗದಗ
ಶ್ರೀ ಮಹೇಶ್ ಕುಮಾರ್ ಡಿ. ತಳವಾರ, ಕಲಬುರಗಿ
ಶ್ರೀ ನಟರಾಜ್ ಎಂ. ಶಿಲ್ಪಿ, ಕಲಬುರಗಿ
ಶ್ರೀ ಮಲ್ಲಿಕಾರ್ಜುನ ಆಲೂರು, ರಾಯಚೂರು
ಶ್ರೀ ಶಶಿಕುಮಾರ್ ಸುತಾರ್, ದಾವಣಗೆರೆ
ಶ್ರೀ ಡಿ.ಎಂ. ಭಟ್, ದಾವಣಗೆರೆ
ಡಾ. ನಿಂಗಪ್ಪ ಎಂ.ಅಂಗಡಿ, ಬಾದಾಮಿ
ಶ್ರೀ ಚಂದ್ರಕಾಂತ್ ಸರೋದೆ, ಇಲಕಲ್ಲ
ಡಾ. ರಾಜಶೇಖರ್ ಬಿಲ್ವಪತ್ರಿ, ಬೆಂಗಳೂರು
ಶ್ರೀ ವೆಂಕಟೇಶ್‌ಕುಮಾರ್ .ಕೆ.ಹೆಚ್, ರಾಯಚೂರು
ಶ್ರೀ ಪ್ರಕಾಶ ಬಸಪ್ಪ ಬಂಡಿ, ಗದಗ
ಶ್ರೀ ಆರ್.ಎ. ಶಾಂತರಾಜು, ಬೆಂಗಳೂರು
ಶ್ರೀ ಸುಂಕಂ ಗೋವರ್ಧನ್, ಬೆಂಗಳೂರು
ಡಾ. ಪರಶುರಾಮ್ ಪಿ., ಕಲಬುರಗಿ
ಶ್ರೀ ರಾಜು ಹೆಚ್.ಜಿ . ಬಳ್ಳಾರಿ
ಶ್ರೀ ರಾಘವೇಂದ್ರ, ಮಂಡ್ಯ
ಶ್ರೀ ಸೋಮೇಶ್ ನಾಯಕ್, ನಂಜನಗೂಡು
ಶ್ರೀ ಸಿದ್ಧು ಮರಗೋಳ್, ಕಲಬುರಗಿ
ಶ್ರೀ ಕುಪ್ಪಣ್ಣ ಕಂದಗಲ್, ಬೆಂಗಳೂರು
ಶ್ರೀ ನರಸಿಂಹ ಬ್ಯಾಗೇರಿ, ಯಾದಗಿರಿ
ಶ್ರೀಮತಿ ಹೆಚ್.ಪಿ. ಶಾಂತಲ, ಬೆಂಗಳೂರು
ಶ್ರೀ ನರೇಶ್ ನಾಯ್ಕ, ಉಡುಪಿ
ಶ್ರೀ ವಿನೋದ್, ಮಂಡ್ಯ
ಶ್ರೀ ಸಂಪತ್ ಕುಮಾರ್, ಚಾಮರಾಜನಗರ
ಕು. ಜ್ಯೋತಿ ಭಾರತಿ, ದಾವಣಗೆರೆ
ಶ್ರೀ ಬಸವರಾಜ ಎಲ್., ಮೈಸೂರು
ಶ್ರೀ ಚಂದ್ರಶೇಖರ್, ಹಾಸನ
ಶ್ರೀ ಲೋಕೇಶ್ ಎಂ.ಆರ್. ತುಮಕೂರು
ಡಾ. ಮೋಹನ್‌ರಾವ್ ಪಂಚಾಲ್, ಬೆಂಗಳೂರು
ಶ್ರೀ ಎಂ.ಎಸ್. ಹೊಸಹಳ್ಳಿ ಮಠ್, ಗದಗ

ಶ್ರೀ ಗಣೇಶ್, ಗದಗ್
ಶ್ರೀಮತಿ ಉಮಾವತಿ ಅಚೋಲಿ, ರಾಯಚೂರು
ಶ್ರೀ ಮಹೇಶ್‌ಕುಮಾರ್ ಎಸ್. ಬೆಂಗಳೂರು
ಶ್ರೀ ಸುಪ್ರೀತ್ ಅಡಿಗ, ಬೆಂಗಳೂರು
ಶ್ರೀ ಮಹಮ್ಮದ್ ರಿಜ್ವಾನ್, ಬೆಂಗಳೂರು
ಶ್ರೀ ಬಿ.ಎಸ್. ಜಯದೇವಣ್ಣ, ಮೈಸೂರು
ಶ್ರೀ ಅಂಬರೀಶ್, ಕೋಲಾರ
ಡಾ. ಲಕ್ಷ್ಮೀಪತಿ ಜಿ., ಕೋಲಾರ
ಡಾ. ಶ್ರೀಧರ್‌ಮೂರ್ತಿ, ಬೆಂಗಳೂರು
ಡಾ. ಕೃಷ್ಣೇಗೌಡ, ಹಂಪಿ
ಡಾ. ಆಕಾಶ್ ಪತ್ತಾರ, ಕಲಬುರಗಿ
ಶ್ರೀ ನಾಗರಾಜ್ ಪಿ. ನಾಡಗೌಡ, ಹುನಗುಂದ
ಶ್ರೀ ವೀರೇಶ್.ಎಂ.ರುದ್ರಸ್ವಾಮಿ, ಹೊಸಪೇಟೆ
ಶ್ರೀಮತಿ ಗಾಯತ್ರಿ ಮಂತ್, ಯಾದಗಿರಿ
ಶ್ರೀ ಸುನೀಲ್ ಮಿಶ್ರಾ, ಮಂಗಳೂರು
ಡಾ. ಉನ್ನಿಕೃಷ್ಣನ್, ಮಣಿಪಾಲ
ಡಾ. ಶಿವಾನಂದ ಬಂಟನೂರು, ಹಂಪಿ
ಶ್ರೀ ರಾಜು ಹೆಚ್.ವಿ. ರಾಯಚೂರು
ಶ್ರೀ ಮುರಳೀಧರ್ .ಬಿ.ಎಂ, ಚಿಕ್ಕಮಗಳೂರು
ಡಾ. ರೆಹಮಾನ್ ಪಟೇಲ್, ಕಲಬುರಗಿ
ಶ್ರೀ ದಿಲಾವಾರ್ ರಾಮದುರ್ಗ, ಬೆಂಗಳೂರು
ಶ್ರೀ ರಮೇಶ್.ವೈ. ಚಂಡಪ್ಪನವರ, ಹುಬ್ಬಳ್ಳಿ
ಶ್ರೀ ಪುರುಷೋತ್ತಮ ಅಡ್ವೆ, ಉಡುಪಿ
ಶ್ರೀ ಅಮರನಾಥ್, ಬೆಂಗಳೂರು
ಶ್ರೀಮತಿ ಜಿ.ವಿ. ಶಶಿಕಲಾ, ಕಲಬುರಗಿ
ಶ್ರೀ ಬಿ.ಎಸ್. ದೇಸಾಯಿ, ಹಾಸನ
ಶ್ರೀ ಸುದರ್ಶನ ಬಿ. ನಾಯಕ, ಉ.ಕ.
ಶ್ರೀ ರವಿಕುಮಾರ್ ಎ.ಎಸ್. ಚಿಕ್ಕಮಗಳೂರು
ಶ್ರೀ ಸುರೇಶ್, ಮಂಡ್ಯ
ಶ್ರೀ ದಿಲೀಪ್‌ಕುಮಾರ್ ಕಾಳೆ, ಬೆಳಗಾವಿ
ಶ್ರೀ ಡಿ.ಎಸ್. ದೇಸಾಯಿ, ಕಲಬುರಗಿ
ಶ್ರೀ ಕೆ. ಐಶ್ವರ್ಯನ್, ಬೆಂಗಳೂರು
ಶ್ರೀ ವೈಶಾಲಿಬಾಯಿ, ಹಂಪಿ
ಶ್ರೀ ಸತೀಶ್, ಕೆ.ಆರ್. ಕುಶಾಲನಗರ.
ಶ್ರೀ ಶ್ರೀಶೈಲ್ ಪಾಟೀಲ್, ಕಲಬುರಗಿ
ಶ್ರೀಮತಿ ಮಂಜುಳಾಬಾಯಿ, ಶಿವಮೊಗ್ಗ
ಶ್ರೀ ಮಹೇಂದ್ರ ಎಸ್.ಜೆ., ಚಾಮರಾಜನಗರ

ಶ್ರೀ ಅಮೀನ್ ರೆಡ್ಡಿ, ಯಾದಗಿರಿ
ಶ್ರೀ ಮಲ್ಲೇಶ್, ಮೈಸೂರು
ಕು. ಅಮೂಲ್ಯ ಎಂ.ಜಿ. ಕೋಲಾರ
ಶ್ರೀ ಹೆಚ್.ಎಸ್. ಮಂಜುನಾಥ್, ಹಾಸನ
ಡಾ. ಶಂಕ್ರರಪ್ಪ ಎಂ ಕುಂದಗೋಳ್, ಧಾರವಾಡ
ಶ್ರೀ ಲೋಕೇಶ್ ಬಿ.ಹೆಚ್., ಬೆಂಗಳೂರು
ಶ್ರೀ ಪ್ರವೀಣ್ ಲಚನ್, ಗದಗ್
ಶ್ರೀ ಬಸವರಾಜ ಹಡಗಲಿ, ಬಳ್ಳಾರಿ
ಶ್ರೀ ರಘು ಕಂದೂರು, ಬೆಂಗಳೂರು
ಶ್ರೀಮತಿ ಅಂಬಿಕಾ ನಾಯರ್, ಬೆಂಗಳೂರು
ಶ್ರೀಮತಿ ಕವಿತ ಡಿ.ಕೆ., ಬೆಂಗಳೂರು
ಶ್ರೀ ಅಂಬರೀಶ್ ಜಿಜ್ಞಳ, ಬೆಂಗಳೂರು
ಶ್ರೀ ಬಿ. ಉದಯ್ ಕುಮಾರ್, ಹೊಸಪೇಟೆ
ಶ್ರೀ ರಾಘವೇಂದ್ರ ಹೆಚ್. ಪಾಟೀಲ್, ವಿಜಯಪುರ

ಶ್ರೀ ಮನು ಚಕ್ರವರ್ತಿ ಕೆ.ಎಸ್. ತುಮಕೂರು
ಶ್ರೀ ದೇವೇಂದ್ರಪ್ಪ, ರಾಯಚೂರು
ಕು.ಸಂಗಮ ವಸಂತ ದೊಡ್ಡಮನಿ
ಡಾ. ರವಿ ನಾಯಕ್, ವಿಜಯಪುರ
ಶ್ರೀ ಬಸವರಾಜ ಎಲ್.ಜಾನೆ, ಕಲಬುರಗಿ
ಶ್ರೀ ಶಿವಾನಂದ್ ಬಸವಂತಪ್ಪ, ಬೆಂಗಳೂರು
ಕು.ಅನೀಸ್ ಫಾತಿಮಾ, ರಾಯಚೂರು
ಶ್ರೀ ವಿಠ್ಠಲ ರೆಡ್ಡಿ ಫ. ಚುಳಕಿ, ಮೈಸೂರು
ಶ್ರೀ. ಕೆ.ಕೆ. ಮಕಾಳಿ, ಬಳ್ಳಾರಿ
ಡಾ. ಶಾಹೀದ್‌ಪಾಶ, ಕಲಬುರ್ಗಿ
ಶ್ರೀ ಚಂದ್ರಹಾಸ ವೈ, ಚಾಚಿಹಾಳ
ಡಾ. ಸುಭಾಷ್ ಕಮ್ಮಾರ, ಬೆಂಗಳೂರು

2015ನೇ ಸಾಲಿನ ಗೌರವ ಫೆಲೋಶಿಪ್ ವಿತರಣಾ ಸಮಾರಂಭ

ದಿನಾಂಕ: 05-08-2016 ನೇ ಶುಕ್ರವಾರ ಸಂಜೆ : 4 ಗಂಟೆಗೆ

ಸಮಾರೋಪದ ನುಡಿ

ಶ್ರೀ ಕೆ.ಎ. ದಯಾನಂದ ಕ.ಆ.ಸೇ

ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮುಖ್ಯ ಅತಿಥಿ

ಶ್ರೀ ಅಶೋಕ ಎನ್. ಚಲವಾದಿ

ಜಂಟಿ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅಧ್ಯಕ್ಷತೆ

ಡಾ. ಎಂ.ಎಸ್. ಮೂರ್ತಿ

ಅಧ್ಯಕ್ಷರು,

ಕರ್ನಾಟಕ ಲಲಿತಕಲಾ ಅಕಾಡೆಮಿ

ತಮಗೆ ಆದರದ ಸ್ವಾಗತ

ಅಧ್ಯಕ್ಷರು ಹಾಗೂ ಸದಸ್ಯರು,

ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಇಂದ್ರಮ್ಮ ಹೆಚ್.ವಿ.

ರಿಜಿಸ್ಟ್ರಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಳೂರು

2015ನೇ ಸಾಲಿನ ಗೌರವ ಫೆಲೋಶಿಪ್ ಪಡೆದ ಕಲಾಕೃತಿಗಳು





ದೃಶ್ಯಧ್ಯಾನ
ಶ್ರೀ ಕೆ.ವಿ. ಸುಬ್ರಮಣ್ಯಂ

ART KAR 50

ವಿಶೇಷ ಘಟಕ ಯೋಜನೆಯಡಿ ಪರಿಶಿಷ್ಟ ಜಾತಿ/ಪಂಗಡ ಮತ್ತು ಸಾಮಾನ್ಯವರ್ಗ ದೃಶ್ಯಕಲಾ ಸಾಹಿತ್ಯ ಮತ್ತು ವಿಮರ್ಶೆ

"ನಮ್ಮ ಸುವರ್ಣ ಕಲಾವಿದರು"

ಎ.ಎ. ಆಲಮೇಲಕರ್, ವಿಜಯಪುರ, ಕಾಲಮಾನ 1920-1982

ಅನನ್ಯ ಕಲಾವಿದ ಹೆನ್ರಿ ಮೋರ್ ಅವರ ಸುವಿಖ್ಯಾತ ಪರಿಸರ ಶಿಲ್ಪದ ಹಿಂಬದಿ ಚಿತ್ರ.

